Editor: NITYANANDASWAMI Publisher: U. BASAVARAJA

RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

ದುಡಿಯುವ ಜನರ ಪ್ರಾಣಮಿತ್ರ

JANASHAKTHI KANNADA VARA PATRIKE

ಸಂಪುಟ 16 | ಸಂಚಿಕೆ 29 | ಜುಲೈ 11-17, 2022 | ಪುಟ 16 | ರೂ.10/-

Volume: 16 Issue: 29 JULY 11-17, 2022 Pages: 16 Price: 10/-

https://janashakthi.wordpress.com e-mail : js_weekly@yahoo.com

ಲೂಟಿಕೋರರ ಹಾಗೂ ವಿಭಜನಕಾರಿ ರಾಜಕಾರಣಕ್ಕೆ





ಎಡ ಮತ್ತು ಪ್ರಜಾಸತ್ತಾತ್ಮಕ ಪರ್ಯಾಯ



ಬಿಜೆಪಿ ಯುಗ: ಏಕ ಪಕ್ಷ ಸರ್ವಾಧಿಕಾರದತ್ತ



ಭ್ರಷ್ಟಾಚಾರ: ವಿಶ್ವಾಸಾರ್ಹತೆ ಕಳೆದುಕೊಂಡ ಸರಕಾರ

ಬಿಬಿಎಂಪಿ ವಾರ್ಡ್ ಮರುವಿಂಗಡಣೆಯ ಕುತಂತ್ರಗಳು





ಸಿಐಟಿಯು ಅಖಿಲ ಭಾರತ ಸಮ್ಮೇಳನ: ಉತ್ಸಾಹ ತುಂಬಿದ ಸ್ವಾಗತ ಸಮಿತಿ ರಚನಾ ಸಭೆ

ದೇಶಾದ್ಯಂತ ೫೦೦ ಜಿಲ್ಲೆಗಳಲ್ಲಿ ರೈತರಿಂದ

ವಿಶ್ವಾಸ ದ್ರೋಹದ ವಿರುದ್ಧ ಪ್ರತಿಭಟನೆ"–ಎಸ್.ಕೆ.ಎಂ.

ಜುಲೈ 3 ರಂದು ಗಾಜಿಯಾಬಾದ್‌ನಲ್ಲಿ ಸಂಯುಕ್ತ ಕಿಸಾನ್ ಮೋರ್ಚಾ(ಎಸ್.ಕೆ.ಎಂ.) ಕ್ಕೆ ಸೇರಿದ ಎಲ್ಲ ರೈತ ಸಂಘಟನೆಗಳ ಪ್ರತಿನಿಧಿಗಳ ರಾಷ್ಟ್ರೀಯ ಸಭೆ ನಡೆಯಿತು. ಅದರಲ್ಲಿ ರೈತರ ಚಳವಳಿಗೆ ಸಂಬಂಧಿಸಿದಂತೆ ಮೂರು ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಎಸ್.ಕೆ.ಎಂ..ನ ರಾಷ್ಟ್ರೀಯ ಮುಖಂಡರಾದ ಡಾ. ದರ್ಶನ್ ಪಾಲ್, ಹನ್ನನ್ ಮೊಲ್ಲಾ, ಜೋಗಿಂದರ್ ಸಿಂಗ್ ಉಗ್ರಹಾನ್, ಯುದ್ವೀರ್ ಸಿಂಗ್ ಮತ್ತು ಯೋಗೇಂದ್ರ ಯಾದವ್ ನೀಡಿರುವ ಜಂಟಿ ಹೇಳಿಕೆ ತಿಳಿಸಿದೆ.

- ಕನಿಷ್ಠ ಬೆಂಬಲ ಬೆಲೆಗೆ ಕಾನೂನು ಖಾತ್ರಿ ಮತ್ತು ಇತರ ಬಾಕಿ ಇರುವ ಬೇಡಿಕೆಗಳನ್ನು ಒತ್ತಾಯಿಸಿ ರೈತರ ಆಂದೋಲನದ ಜುಲೈ 31 ರಂದು ದೇಶಾದ್ಯಂತ ರಾಸ್ತಾ ರೋಕೋ ನಡೆಸುತ್ತದೆ.
- ಅಗ್ನಿಪಥ್ ಯೋಜನೆಯನ್ನು ಬಯಲಿಗೆಳೆಯಲು, ದೇಶಾದ್ಯಂತ ಆಗಸ್ಟ್ 7 ರಿಂದ ಆಗಸ್ಟ್ 14 ರವರೆಗೆ "ಜೈ ಜವಾನ್, ಜೈ ಕಿಸಾನ್" ಸಮಾವೇಶಗಳನ್ನು ಆಯೋಜಿಸುತ್ತದೆ.
- ಸ್ವಾತಂತ್ರ್ಯದ 75ನೇ ವರ್ಷಾಚರಣೆಯ ಅಂಗವಾಗಿ ಅಜಯ್ ಮಿಶ್ರಾ ತೇನಿ ಅವರನ್ನು ವಜಾಗೊಳಿಸುವಂತೆ ಆಗ್ರಹಿಸಿ ಆಗಸ್ಟ್ 18, 19, 20ರಂದು ಲಖೀಂಪುರ ಖೇರಿಯಲ್ಲಿ 75 ಗಂಟೆಗಳ ಸಾಮೂಹಿಕ ಧರಣಿ ನಡೆಸಲಾಗುವುದು.

ಪಂಜಾಬ್ ಚುನಾವಣೆಯ ಸಮಯದಲ್ಲಿ ಎಸ್‌ಕೆಎಂನಿಂದ ಅಮಾನತುಗೊಂಡಿದ್ದ ಹೆಚ್ಚಿನ ರೈತ ಸಂಘಟನೆಗಳು ಮೋರ್ಚಾಕ್ಕೆ ಮರಳಿವೆ. ಅವುಗಳ ಪ್ರತಿನಿಧಿಗಳು ಈ ಸಭೆಯಲ್ಲಿ ಭಾಗವಹಿಸಿದ್ದರು.

ರೈತರು ಮತ್ತು ಮಾನವ ಹಕ್ಕುಗಳ ಕಾರ್ಯಕರ್ತರ ಮೇಲೆ ಹೆಚ್ಚುತ್ತಿರುವ ದಬ್ಬಾಳಿಕೆ ವಿರುದ್ಧ ಖಂಡನಾ ನಿರ್ಣಯವನ್ನು ಸಭೆಯಲ್ಲಿ ಅಂಗೀಕರಿಸಲಾಯಿತು. ತೀಸ್ತಾ ಸೆಟಲ್ವಾಡ್ ಮತ್ತು ಮೊಹಮ್ಮದ್ ಜುಬೇರ್ ಬಂಧನಕ್ಕೆ ಸಭೆ ಪ್ರತಿಭಟನೆ ವ್ಯಕ್ತಪಡಿಸಿತು.

ಡಿಸೆಂಬರ್ 9, 2021 ರಂದು ದಿಲ್ಲಿಯಲ್ಲಿ ಪ್ರತಿಭಟನೆಯನ್ನು ಹಿಂತೆಗೆದುಕೊಂಡಾಗ ರೈತರಿಗೆ ನೀಡಿದ್ದ ಲಿಖಿತ ಭರವಸೆಯಿಂದ ಕೇಂದ್ರ ಸರ್ಕಾರ ಸಂಪೂರ್ಣವಾಗಿ ಹಿಂದಕ್ಕೆ ಸರಿದಿರುವ ಬಗ್ಗೆ ಸಭೆ ತನ್ನ ನಿರಾಶೆಯನ್ನು ವ್ಯಕ್ತಪಡಿಸಿತು. ಎಂಎಸ್‌ಪಿ ಕುರಿತು ಸಮಿತಿಯನ್ನು ರಚಿಸಲೂ ಇಲ್ಲ, ಚಳುವಳಿಯ ಸಮಯದಲ್ಲಿ ರೈತರ ವಿರುದ್ಧ ಹಾಕಿದ ಸುಳ್ಳು ಪ್ರಕರಣಗಳನ್ನು ಹಿಂತೆಗೆದುಕೊಳ್ಳಲೂ ಇಲ್ಲ. ಅಲ್ಲದೆ ಸಂಸತ್ತಿನಲ್ಲಿ ವಿದ್ಯುತ್ ಮಸೂದೆಯನ್ನು ಮಂಡಿಸಲು ಸರ್ಕಾರ ಪ್ರಯತ್ನಿಸುತ್ತಿದೆ. ರೈತರ ಬಹುದೊಡ್ಡ ಬೇಡಿಕೆಯಾದ ಕನಿಷ್ಠ ಬೆಂಬಲ ಬೆಲೆಯ ಕಾನೂನಾತ್ಮಕ ಖಾತರಿಯನ್ನು ಪರಿಗಣಿಸಲು ಸರ್ಕಾರ ಸಿದ್ಧವಾಗಿಲ್ಲ.

ಸರ್ಕಾರದ ಈ ವಿಶ್ವಾಸದ್ರೋಹವನ್ನು ಪ್ರತಿಭಟಿಸಿ, ಸಂಸತ್ತಿನ ಮುಂಗಾರು ಅಧಿವೇಶನ ಪ್ರಾರಂಭವಾಗುವ ಜುಲೈ 18ರಿಂದ ಸರ್ದಾರ್ ಉಧಮ್ ಸಿಂಗ್ ಹುತಾತ್ಮ ದಿನವಾದ ಜುಲೈ 31 ರವರೆಗೆ ದೇಶದಾದ್ಯಂತ ಜಿಲ್ಲಾ ಮಟ್ಟದಲ್ಲಿ "ವಿಶ್ವಾಸದ್ರೋಹ ವಿರುದ್ಧ ಪ್ರತಿಭಟನೆ" ಸಾರ್ವಜನಿಕ ಸಭೆಗಳನ್ನು ಆಯೋಜಿಸುವ ಮೂಲಕ ನಡೆಸಲಾಗುವುದು. ಈ ಅಭಿಯಾನದ ಕೊನೆಯಲ್ಲಿ, ಜುಲೈ 31 ರಂದು, ದೇಶಾದ್ಯಂತ ಎಲ್ಲಾ ಪ್ರಮುಖ ಹೆದ್ದಾರಿಗಳಲ್ಲಿ ಚಕ್ಕಾ ಜಾಮ್ ಅನ್ನು ಬೆಳಿಗ್ಗೆ 11:00 ರಿಂದ ಮಧ್ಯಾಹ್ನ 3:00 ರವರೆಗೆ ಆಯೋಜಿಸಲಾಗಿದೆ. ಈ ಕಾರ್ಯಕ್ರಮದಿಂದ ಸಾರ್ವಜನಿಕರಿಗೆ ತೊಂದರೆಯಾಗದಂತೆ ಎಚ್ಚರಿಕೆ ವಹಿಸಲಾಗುವುದು.

ರಾಷ್ಟ್ರವಿರೋಧಿ ಹಾಗೂ ಯುವಜನ ವಿರೋಧಿ ಹಾಗೂ ರೈತ ವಿರೋಧಿಯಾಗಿರುವ ಅಗ್ನಿಪಥ್



ಯೋಜನೆ ವಿರುದ್ಧ ರೈತ ಸಂಘಟನೆಗಳು ನಿರುದ್ಯೋಗಿ ಯುವಕರು ಮತ್ತು ಮಾಜಿ ಸೈನಿಕರನ್ನು ಸಂಘಟಿಸಲು ಸಭೆಯಲ್ಲಿ ನಿರ್ಧರಿಸಲಾಯಿತು. ಅಗ್ನಿಪಥ್ ಯೋಜನೆಯನ್ನು ಬಯಲಿಗೆಳೆಯಲು, ಆಗಸ್ಟ್ 7 ರಿಂದ ಆಗಸ್ಟ್ 14 ರವರೆಗೆ ದೇಶಾದ್ಯಂತ "ಜೈ ಜವಾನ್, ಜೈ ಕಿಸಾನ್" ಸಮಾವೇಶಗಳನ್ನು ಆಯೋಜಿಸಲಾಗುವುದು, ಇದರಲ್ಲಿ ಮಾಜಿ ಸೈನಿಕರು ಮತ್ತು ನಿರುದ್ಯೋಗಿ ಯುವಕರನ್ನು ಸಹ ಆಹ್ವಾನಿಸಲಾಗುತ್ತದೆ.

ಲಖೀಂಪುರ ಖೇರಿ ಹತ್ಯಾಕಾಂಡದ 10 ತಿಂಗಳ ನಂತರವೂ ಅಜಯ್ ಮಿಶ್ರಾ ತೇನಿ ಕೇಂದ್ರ ಸಚಿವ ಸಂಪುಟದಲ್ಲಿ ಮುಂದುವರೆಯುವುದು ದೇಶದ ಕಾನೂನು ಮತ್ತು ಸುವ್ಯವಸ್ಥೆಯ ಕ್ರೂರ ವಿಡಂಬನೆಯಾಗಿದೆ.. ಮೊದಲಿನಿಂದಲೂ ಸಂಯುಕ್ತ ಕಿಸಾನ್ ಮೋರ್ಚಾ ರೈತರಿಗೆ ನ್ಯಾಯ ದೊರಕಿಸಿಕೊಡಲು ಬದ್ಧವಾಗಿದ್ದು, ಸಂತ್ರಸ್ತರ ಕುಟುಂಬಗಳಿಗೆ ಕಾನೂನು ಮತ್ತು ಇತರ ನೆರವು ನೀಡುತ್ತಿದೆ. ಈ ವಿಷಯವನ್ನು ಬಲವಾಗಿ ಪ್ರಸ್ತಾಪಿಸಲು, ಸ್ವಾತಂತ್ರ್ಯದ 75 ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ, ಸಂಯುಕ್ತ ಕಿಸಾನ್ ಮೋರ್ಚಾವು ಆಗಸ್ಟ್ 18–19–20 ರಂದು ಲಖೀಂಪುರ ಖೇರಿಯಲ್ಲಿ 75 ಗಂಟೆಗಳ ಬೃಹತ್ ಧರಣಿಯನ್ನು ಆಯೋಜಿಸುತ್ತದೆ, ಇದರಲ್ಲಿ ದೇಶಾದ್ಯಂತದ ರೈತ ಮುಖಂಡರು ಮತ್ತು ಕಾರ್ಮಿಕರು ಭಾಗವಹಿಸಲಿದ್ದಾರೆ.

ಈ ರಾಷ್ಟ್ರೀಯ ಸಭೆಯಲ್ಲಿ ರೈತರ ಮೇಲೆ ಹೆಚ್ಚುತ್ತಿರುವ ದಬ್ಬಾಳಿಕೆ ಮತ್ತು ಮಾನವ ಹಕ್ಕುಗಳ ಆಂದೋಲನದ ವಿರುದ್ಧ ದಾಳಿಗಳ ಬಗ್ಗೆ ಗಂಭೀರ ಕಳವಳ ವ್ಯಕ್ತಪಡಿಸಲಾಯಿತು. ಉತ್ತರ ಪ್ರದೇಶದ ಅಲಹಾಬಾದ್‌ನಲ್ಲಿ ರೈತ ಮುಖಂಡ ಆಶಿಶ್ ಮಿತ್ತಲ್ ವಿರುದ್ಧ ಸುಳ್ಳು ಕೇಸುಗಳನ್ನು ಹಾಕಿರುವುದು, ಬಂಗಾಳದ ಫರಕ್ಕಾದಲ್ಲಿ ಅದಾನಿ ಹೈವೋಲ್ಟೇಜ್ ವೈರ್ ವಿರುದ್ಧ ಪ್ರತಿಭಟನೆ ನಡೆಸಿದ ರೈತರ ಮೇಲೆ ಲಾಠಿ ಚಾರ್ಜ್ ಮತ್ತು ಛತ್ತೀಸ್‌ಗಢದಲ್ಲಿ ಪ್ರತಿಭಟನಾ ನಿರತ ರೈತರ ದಮನವನ್ನು ಅದು ಖಂಡಿಸಿದೆ. ಸಾಮಾಜಿಕ ಕಾರ್ಯಕರ್ತರು ಮತ್ತು ಪತ್ರಕರ್ತರಾದ ಶ್ರೀಮತಿ ತೀಸ್ತಾ ಸೆಟಲ್ವಾಡ್, ಆರ್.ಬಿ. ಶ್ರೀಕುಮಾರ್ ಮತ್ತು ಮುಹಮ್ಮದ್ ಜುಬೇರ್ ಅವರ ಬಂಧನಗಳು ದೇಶಾದ್ಯಂತ ಪ್ರಜಾಪ್ರಭುತ್ವ ಹಕ್ಕುಗಳ ಹೆಚ್ಚುತ್ತಿರುವ ದಮನವನ್ನು ಸೂಚಿಸುತ್ತವೆ. ಈ ಪ್ರಜಾಸತ್ತಾತ್ಮಕ ಹೋರಾಟದಲ್ಲಿ ಸಂಯುಕ್ತ ಕಿಸಾನ್ ಮೋರ್ಚಾ ಈ ಎಲ್ಲಾ ಕಾರ್ಯಕರ್ತರು ಮತ್ತು ಸಂಘಟನೆಗಳೊಂದಿಗೆ ನಿಲ್ಲುವುದಾಗಿ ಸಭೆ ಹೇಳಿದೆ.

ಈ ಸಭೆಯಲ್ಲಿ ದೇಶದ 15 ರಾಜ್ಯಗಳಿಂದ ಸುಮಾರು 200 ಪ್ರತಿನಿಧಿಗಳು ಭಾಗವಹಿಸಿದ್ದರು. ಪಂಜಾಬ್ ಚುನಾವಣೆ ವಿಚಾರವಾಗಿ ಸಂಯುಕ್ತ ಕಿಸಾನ್ ಮೋರ್ಚಾದಿಂದ ಅಮಾನತುಗೊಂಡಿದ್ದ 16 ಸಂಘಟನೆಗಳನ್ನು ಮೋರ್ಚಾದಲ್ಲಿ ಮರು ಸೇರ್ಪಡೆಗೊಳಿಸಲಾಯಿತು. ಚಂದ್ರಶೇಖರ್ ಕೋಡಿಹಳ್ಳಿ ನೇತೃತ್ವದ "ಕರ್ನಾಟಕ ರಾಜ್ಯ ರೈತ ಸಂಘ"ವನ್ನು ಸಂಯುಕ್ತ ಕಿಸಾನ್ ಮೋರ್ಚಾದಿಂದ ಉಚ್ಚಾಟಿಸಲು ಈ ಸಭೆಯಲ್ಲಿ ನಿರ್ಧರಿಸಲಾಯಿತು. ಸಂಯುಕ್ತ ಕಿಸಾನ್ ಮೋರ್ಚಾ ದೇಶದ ಎಲ್ಲಾ ರೈತರು ಮತ್ತು ರೈತ ಸಂಘಟನೆಗಳಿಗೆ ತನ್ನ ಬಾಗಿಲು ಯಾವಾಗಲೂ ತೆರೆದಿರುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸಿರುವ ಜಂಟಿ ಹೇಳಿಕೆ, ಸರ್ಕಾರದ ದಬ್ಬಾಳಿಕೆಯ ವಿರುದ್ಧ ರೈತರ ಹೋರಾಟವು ಇನ್ನಷ್ಟು ತೀವ್ರ ಮತ್ತು ಶಕ್ತಿಯುತವಾಗಲಿದೆ ಎಂಬ ಆಶಯವನ್ನು ವ್ಯಕ್ತಪಡಿಸಿದೆ.

ಡೈರಿ ಉತ್ಪನ್ನಗಳ ಮೇಲಿನ ಜಿಎಸ್‌ಟಿ ಸಣ್ಣ ರೈತರಿಗೆ 'ಸಾವಿನ ಗಂಟೆ'– ರೈತ ಸಂಘಟನೆಗಳ ಆಕ್ರೋಶ

ಹೈನು ಉತ್ಪನ್ನಗಳ ಮೇಲೆ ಸರಕು ಮತ್ತು ಸೇವಾ ತೆರಿಗೆಯನ್ನು (ಜಿಎಸ್‌ಟಿ) ಹಾಕುವುದನ್ನು ರೈತ ಸಂಘಟನೆಗಳು ತೀಕ್ಷ್ಣವಾಗಿ ಖಂಡಿಸಿವೆ. ಹೆಚ್ಚುತ್ತಿರುವ ಲಾಗುವಾಡುಗಳ ವೆಚ್ಚವನ್ನು ಕಷ್ಟಪಟ್ಟು ನಿಭಾಯಿಸುತ್ತಿರುವ ಸಣ್ಣ ಡೈರಿಗಳ ಮತ್ತು ರೈತರಿಗೆ ಇದು "ಮರಣ ಶಾಸನ"ವಾಗಲಿದೆ ಎಂದು ಅವು ಹೇಳಿವೆ.

ಜಿಎಸ್‌ಟಿ ಮಂಡಳಿಯ 47 ನೇ ಸಭೆಯು ಹಾಲಿನ ಉತ್ಪನ್ನಗಳ ಮೇಲೆ 5% ಜಿಎಸ್‌ಟಿ ವಿಧಿಸಲು ಮತ್ತು ಹಾಲುಕರೆಯುವ ಯಂತ್ರಗಳು ಸೇರಿದಂತೆ ಡೈರಿ ಯಂತ್ರಗಳ ಮೇಲಿನ ತೆರಿಗೆ ದರವನ್ನು 12% ರಿಂದ 18% ಕ್ಕೆ ಹೆಚ್ಚಿಸುವಂತೆ ಮಾಡಿರುವ ಶಿಫಾರಸುಗಳು ಹಾಲು ಉತ್ಪಾದನೆಯಲ್ಲಿ ತೊಡಗಿರುವ 9 ಕೋಟಿಗೂ ಹೆಚ್ಚು ಕುಟುಂಬಗಳ ಮೇಲೆ ಪರಿಣಾಮ ಬೀರುತ್ತವೆ ಎಂದು ಅಖಿಲ ಭಾರತ ಕಿಸಾನ್ ಸಭಾದ ಅಧ್ಯಕ್ಷ ಅಶೋಕ್ ಧವಳೆ ಹೇಳಿದ್ದಾರೆ. ಬಿಜೆಪಿಯ ರಾಜಕೀಯ ಅಧಿಕಾರ ಮತ್ತು ಬಂಡವಾಳದ ಕೇಂದ್ರೀಕರಣವನ್ನು ಬಯಸುತ್ತಿದ್ದು, ಈ ಕ್ರಮವು ಆ ದಿಕ್ಕಿನಲ್ಲೇ ಇದೆ ಎಂದು ಅವರು ಹೇಳಿದರು.

"ಭಾರತವು ವಿಶ್ವದ ಅತಿದೊಡ್ಡ ಹಾಲು ಉತ್ಪಾದಕ ದೇಶವಾಗಿದೆ. ಈ ಕ್ಷೇತ್ರದಲ್ಲಿ ತೊಡಗಿರುವವರು ಹೆಚ್ಚಿನವರು ಸಣ್ಣ ಉತ್ಪಾದಕರು. 75% ಗ್ರಾಮೀಣ ಕುಟುಂಬಗಳು 2–4 ಹಸುಗಳನ್ನು ಹೊಂದಿವೆ. ಅತ್ಯಂತ ಕೆಳಮಟ್ಟದ ಸಾಮಾಜಿಕ ಸ್ತರದ ಮಹಿಳೆಯರು ಮತ್ತು ರೈತರು ಹೈನುಗಾರಿಕೆ ವಲಯದ ಮೇಲೆ ಹೆಚ್ಚು ಅವಲಂಬಿತರಾಗಿದ್ದಾರೆ. ಜಾನುವಾರು ವಲಯವು ಕೃಷಿ ವಲಯದ ನಾಲ್ಕನೇ ಒಂದು ಭಾಗದ ಉತ್ಪಾದನೆಗೆ ಕೊಡುಗೆ ನೀಡುತ್ತದೆ ಎಂಬ ಅಂಶವು 9 ಕೋಟಿ ಕೃಷಿ ಕುಟುಂಬಗಳಿಗೆ ಈ ಕ್ಷೇತ್ರದ ಆರ್ಥಿಕ ಮಹತ್ವವನ್ನು ತೋರಿಸುತ್ತದೆ. ಆದರೆ ಜಿಎಸ್‌ಟಿ ಯಲ್ಲಿನ ಇತ್ತೀಚಿನ ಬದಲಾವಣೆಗಳಿಂದ ಈಗಾಗಲೇ ಹೆಚ್ಚಿನ ಹಣದುಬ್ಬರದ ಒತ್ತಡದಲ್ಲಿ ತತ್ತರಿಸುತ್ತಿರುವ ಪ್ರಾಥಮಿಕ ಉತ್ಪಾದಕರು ಅಥವಾ ಗ್ರಾಹಕರಿಗೆ ಪ್ರಯೋಜನವಾಗುವುದಿಲ್ಲ. ಬೆಲೆಗಳ ಹೆಚ್ಚಳವು ತುಳಿತಕ್ಕೊಳಗಾದ ವರ್ಗ, ಜಾತಿ ಮತ್ತು ಲಿಂಗದ ಜನರ ಪೌಷ್ಟಿಕಾಂಶದ ಅವಶ್ಯಕತೆಗಳ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ" ಎಂದು ಅಶೋಕ ಧವಳೆ ಹೇಳುತ್ತಾರೆ.

ಕೇಂದ್ರ ಹಣಕಾಸು ಸಚಿವಾಲಯವು ಜಿಎಸ್‌ಟಿ ಯನ್ನು ಸಂವಿಧಾನದ "ಮೂಲ ರಚನೆ" ಮತ್ತು ಸಹಕಾರಿ ಒಕ್ಕೂಟ ತತ್ವದ ಎಲ್ಲಾ ಪರಂಪರೆಗಳನ್ನು ಒಡೆದುಹಾಕಲು ಪ್ರಬಲ ಸಾಧನವಾಗಿ ಬಳಸಿದೆ ಎಂದು ಅವರು ಹೇಳಿದರು. "ರಾಜ್ಯಗಳು ತಮ್ಮ ನಿರ್ದಿಷ್ಟ ಉತ್ಪಾದನಾ ಮಾದರಿಗಳ ಪ್ರಯೋಜನವನ್ನು ಪಡೆಯುವ ತೆರಿಗೆ ವ್ಯವಸ್ಥೆಯನ್ನು ವಿನ್ಯಾಸಗೊಳಿಸಲು ಅನುವು ಮಾಡಿಕೊಡುತ್ತಿದ್ದ ತಮ್ಮ ಹಣಕಾಸಿನ ಸ್ವಾಯತ್ತತೆಯನ್ನು ಬಿಟ್ಟುಕೊಡುವುದರೊಂದಿಗೆ, ಹಣಕಾಸು ನೀತಿಗಳಲ್ಲಿ ಕೇಂದ್ರ ಸರ್ಕಾರ ಅತ್ಯಂತ ಶಕ್ತಿಶಾಲಿಯಾಗಿ ಬಿಟ್ಟಿದೆ. ಕಳೆದ ಐದು ವರ್ಷಗಳಲ್ಲಿ ಜಿಎಸ್‌ಟಿ ವ್ಯವಸ್ಥೆಯು ಬಡ ರೈತರು ಮತ್ತು ಸಣ್ಣ ಉದ್ಯಮಿಗಳ ಹಿತಾಸಕ್ತಿಗಳನ್ನು ಬಲಿಗೊಟ್ಟು ಹಣಕಾಸು ಮತ್ತು ಗುತ್ತೇದಾರಿ ಮನೆತನಗಳ ವರ್ಗ ಹಿತಾಸಕ್ತಿಗಳಿಗೆ ಅನುಕೂಲವಾಗುವ ಹಣಕಾಸಿನ ನೀತಿಗಳಿಗೆ ದಾರಿ ಮಾಡಿಕೊಟ್ಟಿದೆ"ಎಂದು ಮುಂದುವರೆದು ಅವರು ಹೇಳುತ್ತಾರೆ.

ಡೈರಿ ಉದ್ಯಮದ ಕಾರ್ಪೊರೇಟೀಕರಣದತ್ತ ಇನ್ನೊಂದು ಹಜ್ಜೆ

ಹೌರಾದ ಫೌಂಡ್ರಿ ಉದ್ದಿಮೆ ಮತ್ತು ಸೂರತ್‌ನ ಜವಳಿ ಉದ್ದಿಮೆಯ ಉದಾಹರಣೆಯನ್ನೇ ತಗೊಳ್ಳಬಹುದು. ಜಿಎಸ್‌ಟಿ ವ್ಯವಸ್ಥೆ ಮಧ್ಯಮ, ಸಣ್ಣ ಮತ್ತು ಅತಿ ಸಣ್ಣ ಉದ್ದಿಮೆಗಳಲ್ಲಿ ವಿವಿಧ ಹಂತಗಳ ಮೌಲ್ಯ ಸರಪಳಿಗಳಲ್ಲಿ ಇರುವವರ ಮೇಲೆ ನಕಾರಾತ್ಮ ಪರಿಣಾಮ ಬೀರಿ, ಅದರ ಪ್ರಯೋಜನ ಪಡೆದ ಈ ಕ್ಷೇತ್ರಗಳ ದೊಡ್ಡ ಉದ್ಯಮಿಗಳು ತಮ್ಮ ಪ್ರಭಾವವನ್ನು ಕ್ರೋಡೀಕರಿಸಿಕೊಳ್ಳಲು ಅನುವು ಮಾಡಿ ಕೊಟ್ಟಿರುವುದು ಸ್ಪಷ್ಟವಾಗಿ ಕಾಣುತ್ತದೆ ದೊಡ್ಡ ಆಟಗಾರರ ಬಲವರ್ಧನೆಯನ್ನು ಇದು ಸ್ಪಷ್ಟವಾಗಿ ಪ್ರದರ್ಶಿಸಿದೆ ಎಂದು ಹೇಳಿದರು.

ಇದೇ ರೀತಿಯ ಭಾವನೆಗಳನ್ನು ಸಣ್ಣ ಡೈರಿ ವ್ಯಾಪಾರಿ ಮತ್ತು ಜೈ ಕಿಸಾನ್ ಆಂದೋಲನದ ವಕ್ತಾರ ಮನೀಶ್ ಭಾರತಿ 'ನ್ಯೂಸ್‌ಕ್ಲಿಕ್' ಸುದ್ದಿ ಸಂಸ್ಥೆಯ ವರದಿಗಾರರಿಗೆ ವ್ಯಕ್ತಪಡಿಸಿದ್ದಾರೆ.

"ವೈಯಕ್ತಿಕ ವ್ಯವಹಾರಗಳ ಯಶಸ್ಸು ನಿರ್ದಿಷ್ಟ ಮಾರುಕಟ್ಟೆಯಲ್ಲಿ ಕಾರ್ಯನಿರ್ವಹಿಸುವ ವ್ಯಕ್ತಿಯ ಸಾಮರ್ಥ್ಯಗಳ ಮೇಲೆ ಅವಲಂಬಿತವಾಗಿರುತ್ತದೆ ಆದರೆ ಸರ್ಕಾರವು ಹೊಸ ನೀತಿಗಳನ್ನು ತಂದಾಗ ಸನ್ನಿವೇಶವು ಸಂಪೂರ್ಣವಾಗಿ ರೂಪಾಂತರಗೊಳ್ಳುತ್ತದೆ. ಅದು ಹೈನುಗಾರಿಕೆ ವಲಯದಲ್ಲಿ ನಿಖರವಾಗಿ ನಡೆಯುತ್ತಿದೆ. ಉತ್ಪಾದಿಸಿದ ಬಹುಪಾಲು ಹಾಲನ್ನು ಒಕ್ಕೂಟಗಳ ಮೂಲಕ ಸಂಸ್ಕರಿಸಲಾಗುತ್ತದೆ ಮತ್ತು ಅದನ್ನು ಪ್ಯಾಕೇಜ್ ಮಾಡಿ ಗ್ರಾಹಕರಿಗೆ ಮಾರಾಟ ಮಾಡಲಾಗುತ್ತದೆ. ಈಗ, ಈ ಒಕ್ಕೂಟಗಳು ಅಂತಿಮವಾಗಿ ರೈತರು ಮತ್ತು ಗ್ರಾಹಕರಿಗೆ ಹೊರೆಯನ್ನು ವರ್ಗಾಯಿಸುತ್ತವೆ. ನಾವು ರೈತರ ವಿಷಯಕ್ಕೆ ಬಂದಾಗ, ಮೇವು, ಔಷಧಗಳು ಅಥವಾ ಇತರ ಎಲ್ಲ ಲಾಗುವಾಡುಗಳ ವೆಚ್ಚಗಳು ಏರಿದೆ. ಮೇವಿನ ಬೆಲೆ ಹಿಂದಿನ ವರ್ಷಕ್ಕೆ ಹೋಲಿಸಿದರೆ ಕ್ವಿಂಟಲ್‌ಗೆ 800 ರೂ.ನಿಂದ 1600 ರೂ.ಗೆ ಏರಿಕೆಯಾಗಿದೆ. ಅದೇ ರೀತಿ, ಔಷಧಿಗಳ ಬೆಲೆಗಳು ಏರಿಕೆಯಾಗಿದ್ದರೂ ಆದಾಯದಲ್ಲಿ ಏರಿಕೆಯಾಗಿಲ್ಲ. ಒಂದು ಉದಾಹರಣೆಯನ್ನು ಹೇಳುವುದಾದರೆ, ಉತ್ತರ ಪ್ರದೇಶದ ಅತಿದೊಡ್ಡ ಡೈರಿಗಳಲ್ಲಿ ಒಂದಾದ ಪರಾಗ್ ಡೈರಿಯು ಹಿಂದಿನ ಐದು ವರ್ಷಗಳಿಂದ ರೈತರಿಂದ ಸಂಗ್ರಹಿಸಿದ ಹಾಲಿಗೆ ಒಂದು ಪೈಸೆಯನ್ನೂ ಹೆಚ್ಚಿಸಿಲ್ಲ "ಎಂದು ಅವರು ವಿವರಿಸಿದರು.

ಡೈರಿ ಉದ್ದಿಮೆಯನ್ನು ಕಾರ್ಪೊರೇಟ್‌ಗಳಿಗೆ ವಹಿಸಿ ಕೊಡುವ ಕೆಲಸ ಆಗಲೇ ಆರಂಭವಾಗಿದೆ ಎಂದು ಮನೀಶ್ ಭಾರತಿಯವರೂ ಹೇಳುತ್ತಾರೆ. ಸರ್ಕಾರವು ಹಾಲಿನ ಪೋಷಕಾಂಶ ವರ್ಧನೆ ಮಾಡಬೇಕು ಎಂದು ಸೂಚಿಸುವುದರೊಂದಿಗೆ ಇದು ಆರಂಭವಾಗಿದೆ. ಮಕ್ಕಳಲ್ಲಿ ವಿಟಮಿನ್ ಎ ಯ ತೀವ್ರ ಕೊರತೆಯಿದೆ, ಅದನ್ನು ತುಂಬಲು ಪೋಷಕಾಂಶ ವರ್ಧಿತ ಹಾಲನ್ನು ಮಕ್ಕಳಿಗೆ ಕೊಡಬೇಕು ಎಂಬ ಪೋಷಕಾಂಶ ವರದಿ ಬಂದಾಗ ಈ ಸೂಚನೆ ಬಂದಿತ್ತು. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಈ ರೀತಿ ಹಾಲಿನ ಪೋಷಕಾಂಶ ವರ್ಧಿಸುವ ತಂತ್ರಜ್ಞಾನದ ಮೇಲೆ ಕೆಲವೇ ದೊಡ್ಡ ಡೈರಿ ಬ್ರಾಂಡುಗಳ ಏಕಸ್ವಾಮ್ಯವಿದೆ. ಒಂದುದೊಡ್ಡ ಸಹಕಾರಿ ಸಂಸ್ಥೆಯಾದ ಅಮುಲ್ ಕೂಡ ಈ ಪ್ರಸ್ತಾಪವನ್ನು ವಿರೋಧಿಸಬೇಕಾಯಿತು. ಹೀಗೆ, ಡೈರಿ ಕ್ಷೇತ್ರವನ್ನು ದೊಡ್ಡ ಉದ್ಯಮಿಗಳಿಗೆ ವಹಿಸಿ ಕೊಡುವ ಪ್ರಕ್ರಿಯೆ ಆಗಲೇ ಆರಂಭವಾಗಿದೆ, ಈ ಜಿಎಸ್‌ಟಿ ಶಿಫಾರಸುಗಳು ಈ ದಿಕ್ಕಿನಲ್ಲಿ ಇನ್ನೊಂದು ಹೆಜ್ಜೆಯಾಗಿದೆಯಷ್ಟೇ ಎನ್ನುತ್ತಾರೆ ಮನೀಶ್ ಭಾರತಿಯವರೂ ಕೂಡ.

ಸಂಪಾದಕೀಯ

ಭ್ರಷ್ಟಾಚಾರ: ವಿಶ್ವಾಸಾರ್ಹತೆ ಕಳೆದುಕೊಂಡ ಸರಕಾರ

ಕರ್ನಾಟಕದಲ್ಲೀಗ ಬಯಲಿಗೆ ಬರುತ್ತಿರುವ ಭ್ರಷ್ಟಾಚಾರದ ಹಗರಣಗಳು ಪ್ರಜ್ಞಾವಂತರನ್ನು ಬೆಚ್ಚಿ ಬೀಳಿಸುತ್ತಿವೆ. ಈ ಭಾರೀ ಹಗರಣಗಳಲ್ಲಿ ಭಾಗಿಯಾದ ಇಬ್ಬರು ಉನ್ನತ ಅಧಿಕಾರಿಗಳು ತನಿಖಾ ಸಂಸ್ಥೆಗಳಿಂದ ಬಂಧನಕ್ಕೊಳಗಾಗಿ ಜೈಲು ಸೇರಿದ್ದಾರೆ. ತನಿಖೆ ನಿಖರತೆ ಮತ್ತು ತೀವ್ರತೆಯನ್ನು ಪಡೆದರೆ ಮತ್ತಷ್ಟು ದೊಡ್ಡ ಕುಳಗಳೂ ಅವರನ್ನು ಹಿಂಬಾಲಿಸಬಹುದು. ಕೇವಲ ಬಂಧನವೇ ಶಿಕ್ಷೆಯಲ್ಲ ಎಂಬುದು ಲಜ್ಜಾಹೀನರಾದ ಅಂತಹವರಿಗೆ ಅನಿಸಿದರೂ ತಮಗಿಂತ ಕಿರಿಯ ಅಧಿಕಾರಿಗಳಿಂದ ಬಂಧನಕ್ಕೆ ಒಳಗಾಗುವುದು ತೀರಾ ಮುಜುಗರದ, ನಾಚಿಗೆಗೇಡಿನ ಸಂಗತಿಯಾಗಿದೆ. ಇಂತಹ ಎಲ್ಲ ಸಂವೇದನೆಗಳನ್ನು ಕಳೆದುಕೊಂಡವರ ಸಂಖ್ಯೆ ಹೆಚ್ಚುತ್ತಿರುವುದು ಕಳವಳಕಾರಿಯಾಗಿದೆ.

ಈಗ ತನಿಖೆ ನಡೆಯುತ್ತಿರುವ ಸಬ್ ಇನ್ಸ್‌ಪೆಕ್ಟರ್ ನೇಮಕಾತಿ ಪ್ರಕರಣದಲ್ಲಿ ಪ್ರಶ್ನೆ–ಉತ್ತರ ಪತ್ರಿಕೆಗಳ ಸಂರಕ್ಷಣೆಯ ಸಂಪೂರ್ಣ ಹೊಣೆ ಇದ್ದ ಎ.ಡಿ.ಜಿ.ಪಿ. ಅಮ್ರಿತ್ ಪೌಲ್ ಬೀಗದ ಕೈ ನೀಡಿ ಅಕ್ರಮ ಎಸಗಲು ಅವಕಾಶ ಕಲ್ಪಿಸಿದ ಆರೋಪದಲ್ಲಿ ಸಿಐಡಿಯಿಂದ ಬಂಧಿಸಲ್ಪಟ್ಟಿದ್ದಾರೆ. ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ.ಮಂಜುನಾಥ್ ಭೂ ವ್ಯಾಜ್ಯದಲ್ಲಿ ಅನುಕೂಲಕರ ತೀರ್ಪು ನೀಡಲು ಲಂಚ ಪಡೆದ ಆರೋಪದಲ್ಲಿ ಬಂಧಿತರಾಗಿದ್ದಾರೆ. ತಾನು ಲಂಚ ಪಡೆದದ್ದು ಜಿಲ್ಲಾಧಿಕಾರಿ ಪರವಾಗಿ ಎಂದು ಉಪ ತಹಶೀಲ್ದಾರ್ ಹೇಳಿದ ಬಳಿಕ ಈ ಬಂಧನ ನಡೆದಿದೆ ಎನ್ನುವುದು ಅಧಿಕಾರಶಾಹಿ ವಲಯದ ಭ್ರಷ್ಟ ಕೊಂಡಿಗಳ ಒಂದು ನಿದರ್ಶನ. ಈ ಹಿಂದೆಯೂ ಐ.ಎಂ.ಎ. ಹಗರಣದಲ್ಲಿ ಭಾಗಿಯಾದ ಆರೋಪದಲ್ಲಿ ಐ.ಎ.ಎಸ್. ಅಧಿಕಾರಿ ಬಿ.ಎಂ. ವಿಜಯಶಂಕರ್, ಬೆಂಗಳೂರಿನ ಜಿಲ್ಲಾಧಿಕಾರಿ ಎಂ.ಕೆ ಅಪ್ಪಯ್ಯ ಸಹ ಬಂಧಿತರಾಗಿದ್ದರು. ಬಂಧನದ ಬಳಿಕ ವಿಜಯಶಂಕರ್ ಮನೆಯಲ್ಲಿ 'ಆತ್ಮಹತ್ಯೆ' ಮಾಡಿಕೊಂಡಿದ್ದರು. ಜೆ.ಮಂಜುನಾಥ್ ಪ್ರಕರಣದಲ್ಲಿ ಈಗಲೂ ಹೈಕೋರ್ಟ್ ಚಾಟಿ ಬೀಸದಿದ್ದರೆ ಮೊಕದ್ದಮೆ ಕುಂಟುತ್ತಾ ಹೋಗುತ್ತಿತ್ತು ಮತ್ತು ಈ ಬಂಧನಗಳು ಆಗುತ್ತಿರಲಿಲ್ಲ. ಈ ಪ್ರಕರಣದಲ್ಲಿ ನ್ಯಾಯಮೂರ್ತಿ ಸಂದೇಶ್ ಅವರು ಬಳಸಿದ ಕಠಿಣ ಮಾತುಗಳು ಎ.ಸಿ.ಬಿ.ಯ ಪ್ರಾಮಾಣಿಕತೆ, ವೃತ್ತಿ ಧರ್ಮ, ಸಂಸ್ಥೆಯ ಸಮಗ್ರತೆಯನ್ನೇ ಪ್ರಶ್ನಿಸಿದೆ. ಅಧಿಕಾರಿಯೊಬ್ಬರ ಭ್ರಷ್ಟಾಚಾರದ ಮೊಕದ್ದಮೆಗೆ ಬಿ ರಿಪೋರ್ಟ್ ಸಲ್ಲಿಸಿದ ಎಸಿಬಿ ಯ ಕ್ರಮವನ್ನು ಪ್ರಶ್ನಿಸಿದ ನ್ಯಾಯಮೂರ್ತಿಗಳು ಭ್ರಷ್ಟಾಚಾರ ನಿಗ್ರಹ ದಳವೇ ಭ್ರಷ್ಟಾಚಾರದ ಕೇಂದ್ರವಾಗಿದೆ ಎಂದೂ ತೀಕ್ಷ್ಣವಾಗಿ ಟೀಕೆ ಮಾಡಿದ್ದರು. ಆರೋಪ ಅದರ ಕೆಟ್ಟ ಪಕ್ಷಪಾತವನ್ನು ಚುಚ್ಚಿದ್ದು ತಲೆತಗ್ಗಿಸುವಂತಿದೆ. ಅತ್ಯಂತ ಅಘಾತಕಾರಿ ಸಂಗತಿಯೆಂದರೆ ಮೊಕದ್ದಮೆ ನಡೆಸುತ್ತಿದ್ದ ಬೆಂಚ್ ನ ನ್ಯಾಯಮೂರ್ತಿಗೆ ಪ್ರಕರಣ ಬಿಡದಿದ್ದರೆ ತಮ್ಮ ವರ್ಗಾವಣೆ ಆದೀತು ಎಂಬ ವಿಪರೀತ ಒತ್ತಡ, ಬೆದರಿಕೆ ಇರುವುದಾಗಿಯೂ, ತಾವು ಅದಕ್ಕೆ ಬಗ್ಗುವುದಿಲ್ಲ, ಪ್ರಾಣ ತ್ಯಾಗಕ್ಕೂ ಸಿದ್ಧ ಎನ್ನುವುದನ್ನು ಸಾರ್ವಜನಿಕವಾಗಿ ಹೇಳಿದ್ದಾರೆ. ಸರಕಾರದ, ತನಿಖಾ ಸಂಸ್ಥೆಗಳ, ಸ್ವತಃ ನ್ಯಾಯಾಂಗದ ತಳಹದಿಯೇ ಭ್ರಷ್ಟ, ಪಕ್ಷಪಾತ ಹಾಗೂ ಮೌಲ್ಯಗಳು ಶಿಥಿಲವಾಗಿರುವುದನ್ನು ಎತ್ತಿ ತೋರಿಸಿದೆ. ಈ ಭಾರೀ ಭ್ರಷ್ಟಾಚಾರದ ಪ್ರಕರಣಗಳು ಅಧಿಕಾರಸ್ಥ ರಾಜಕಾರಣಿಗಳು, ಅಧಿಕಾರಶಾಹಿಗಳ ಆಳ ಶಾಮೀಲಿನಿಂದಲೇ ನಡೆದಿರುವ ಬಗ್ಗೆ ಅನುಮಾನವಿಲ್ಲ. ಆದರೆ ಅನೇಕ ಪ್ರಕರಣಗಳಲ್ಲಿ ಶಿಕ್ಷಿಸಬೇಕಾದ ನ್ಯಾಯಾಂಗದ ವಿವಿಧ ಅಂಗಗಳ ವೈಫಲ್ಯತೆ ಸಾರ್ವಜನಿಕ ವಿಶ್ವಾಸಾರ್ಹತೆ ಕುಗ್ಗಿಸಿ ಅನುಮಾನಗಳನ್ನು ಹೆಚ್ಚಿಸುತ್ತಿರುವುದು ಆತಂಕಕಾರಿ.

ಪಿ.ಎಸ್.ಐ. ನೇಮಕಾತಿ ಪ್ರಕರಣದಲ್ಲಿ ತನಿಖೆ ಹಗರಣದ ಮೂಲಕ್ಕೆ ಹೋಗುತ್ತಿಲ್ಲ. ಆ ಖದೀಮರನ್ನು ತಲುಪುತ್ತಿಲ್ಲ ಸರಕಾರದೊಳಗೇ ಇರುವ, ಭಾಗವಾಗಿರುವ ಭಾರಿ ಕುಳಗಳನ್ನು ಹಿಡಿಯುತ್ತಿಲ್ಲ ಎನ್ನುವ ಟೀಕೆಗಳು ವ್ಯಾಪಕವಾಗಿವೆ. ತನಿಖೆ ವೈಖರಿ ನೋಡಿದರೆ ಸಿಐಡಿ ತನಿಖೆ ಹುತ್ತದ ಸುತ್ತ ಬಡಿಯುವ ವ್ಯರ್ಥ ಕಸರತ್ತು ಎನ್ನುವುದು ಗೊತ್ತಾಗುತ್ತದೆ. ಆದರೆ ತಾವೇ ಸ್ವಯಂ ತನಿಖೆಗೆ ಆದೇಶ ನೀಡಿದ್ದು ಎನ್ನುವ ಮುಖ್ಯಮಂತ್ರಿಗಳ ಹೇಳಿಕೆ ಬೊಗಳೆತನದ್ದಾಗಿದೆ. ಈ ಹಗರಣದ ಒಂದೊಂದು ವಿಷಯಗಳು ಸಾರ್ವಜನಿಕರೆದುರು ಬಯಲಾಗ ತೊಡಗಿದಂತೆ ವಿಷಯ ತೀವ್ರ ಮುಜುಗರ ತರುತ್ತಿರುವುದು, ಪ್ರಕರಣ ತಮ್ಮ ಕೈ ತಪ್ಪಿ ಹೋಗುವ ಭೀತಿಯಿಂದ ತಮ್ಮದೇ ಅಡಿಯ ತನಿಖಾ ಸಂಸ್ಥೆಗೆ ವಹಿಸಿದ್ದು ಎನ್ನುವುದನ್ನು ಮರೆಸಲಾಗುವುದಿಲ್ಲ. ಟೀಕಿಸಿದವರ ಮೇಲೆ ಗೃಹಮಂತ್ರಿ, ಮುಖ್ಯಮಂತ್ರಿಗಳ ಸಮರ್ಥನಾ ಆಕ್ರಮಣಕಾರೀ ಹೇಳಿಕೆಗಳು ಆಡಳಿತ ಪಕ್ಷ ಹಾಗೂ ಸರಕಾರದ ಭಾಗಿತ್ವದ ಬಗ್ಗೆ ದಟ್ಟವಾದ ಅನುಮಾನಗಳನ್ನು ಹುಟ್ಟು ಹಾಕುತ್ತಿದೆ. ಮಾತೆತ್ತಿದರೆ ಸಿ.ಬಿ.ಐ, ಎನ್.ಐ.ಎ, ಇ.ಡಿ. ಯಂತಹ ತನಿಖೆಗಳಿಗೆ ಹೋಗುವ ಕೇಂದ್ರದ ಸರಕಾರದ ಘೋರ ಮೌನವೂ 'ಅರ್ಥಪೂರ್ಣ' ವಾಗಿದೆ!' ನ ಖಾವೂಂಗಾ, ಕಿಸಿಕೊ ಖಾನೇ ದೂಂಗಾ' ಎಂದು ಗುಡುಗಿದ ಪ್ರಧಾನಿ ಈಗೆಲ್ಲಿ ಎಂಬ ಪ್ರಶ್ನೆಗೆ ಉತ್ತರ ಕೊಡುವವರಾರು? ಬಿಜೆಪಿ ಪಕ್ಷ ಅಧಿಕಾರ ನಡೆಸಿದ, ನಡೆಸುವ ಕೆಂದ್ರ ಅಥವಾ ರಾಜ್ಯಗಳಲ್ಲಿ ಭಾರಿ ಹಗರಣಗಳೇ ಸ್ಫೋಟಗೊಂಡಿವೆ. ಅವನ್ನು ಮುಚ್ಚಿ ಹಾಕಿಕೊಳ್ಳುವ, ಇಲ್ಲವೇ ಬಾಯಿ ಮುಚ್ಚಿಸುವ ಕೃತ್ಯದಲ್ಲಿ ಇವರು ನಿಸ್ಸೀಮರು ಎನ್ನುವುದೂ ತಿಳಿದಿದೆ. ಮದ್ಯಪ್ರದೇಶದಲ್ಲಿ ನಡೆದ ವ್ಯಾಪಂ ಹಗರಣದ ಪ್ರಕರಣ ಸಾಗಿದ, ಸಾಗುತ್ತಿರುವ ವಿದ್ಯಮಾನಗಳ ಹಾದಿ ತಲ್ಲಣಿಸುವಂತೆ ಮಾಡುವಂತಹದ್ದು. ಇದರಲ್ಲಿ ನೇರ ಅಥವಾ ಪರೋಕ್ಷ ಸಾಕ್ಷಿಗಳಾಗಿದ್ದ ಐವತ್ತಕ್ಕೂ ಹೆಚ್ಚಿನವರು 'ಅನುಮಾನಾಸ್ಪದ' ವಾಗಿ ಕೊಲೆಯಾದರು ಅಥವಾ 'ಜೀವ ಕಳೆದುಕೊಂಡರು'. ಅದರಲ್ಲಿ ಉನ್ನತ ರಾಜಕಾರಣಿಗಳು, ಅಧಿಕಾರಿಗಳೂ ಅಲ್ಲದೇ 'ಬಿಜೆಪಿಗೆ ನೈತಿಕ, ಸೈದ್ಧಾಂತಿಕ ಮಾರ್ಗದರ್ಶನ ಮಾಡುತ್ತಿರುವ' ಸಾಂಸ್ಕೃತಿಕ ಸಂಘ'ದ ಹೆಸರೂ ಕೇಳಿ ಬಂತು. ಆದರೆ ಹಗರಣದ ತನಿಖೆ, ಕ್ರಮಗಳು ಅಲ್ಲೇ ಗಿರಕಿ ಹೊಡೆಯುತ್ತಿದೆ. ಕರ್ನಾಟಕದ ಪ್ರಕರಣವೂ ಆ ದಾರಿಯಲ್ಲಿ ಸಾಗುವುದೇ?


ಪಿ.ಎಸ್.ಐ. ಹಗರಣದಲ್ಲಿ ನೂರಾರು ಕೋಟಿ ರೂಪಾಯಿಗಳ ಭ್ರಷ್ಟಾಚಾರ ನಡೆದಿದೆ. ಅಮ್ರಿತ್ ಪೌಲ್ ಅವರ ಡೈರಿಯಲ್ಲಿ ಪ್ರಮುಖರ ಹೆಸರುಗಳೂ ಇವೆ ಎನ್ನಲಾಗುತ್ತಿದೆ. ಪ್ರಕರಣದ ಹೊಣೆಗಾರಿಕೆ, ಆರೋಪಿತರ ಜೊತೆ ನಂಟು ಇರುವ ಗೃಹ ಸಚಿವ ಆರಗ ಜ್ಞಾನೇಂದ್ರರು ಇಷ್ಟರೊಳಗೆ ರಾಜೀನಾಮೆ ನೀಡಬೇಕಿತ್ತು. ಹಾಗೇ ಬಿಜೆಪಿಯ ಪ್ರಮುಖ ನಾಯಕಿಯೂ ಬಂಧನವಾಗಿರುವುದು ಅದರ ನಾಯಕತ್ವ ಕೆಳಗಿಳಿಯಬೇಕಿತ್ತು ಕನಿಷ್ಠ ತಲೆ ತಗ್ಗಿಸಬೇಕಿತ್ತು. ಆದರೆ ಅಂತಹ ಕನಿಷ್ಠ ಸೌಜನ್ಯ, ಸಾರ್ವಜನಿಕ ಉತ್ತರದಾಯಿತ್ವವೇ ಇಲ್ಲದೇ ಬೊಮ್ಮಾಯಿಯವರ ಸರಕಾರ ಲಜ್ಜಾಹೀನವೂ, ಭಂಡತನದ್ದೂ ಆಗಿದೆ. ಇವು ಸಂಘಪರಿವಾರಕ್ಕೆ ದೇಶದ್ರೋಹ ಅನಿಸುವುದಿಲ್ಲ. ಬದಲಾಗಿ ಮತೀಯ ದ್ವೇಷದ ವಾತಾವರಣ ಸೃಷ್ಟಿಸಿ, ಅಬ್ಬರದ ಡೋಲು ಬಡಿದು ಕಿವಿ, ಕಣ್ಣು ಮುಚ್ಚುವಂತೆ ಮಾಡಲಾಗುತ್ತಿದೆ.

ಈ ಸರಕಾರ ವಿಶ್ವಾಸವನ್ನು ಕಳೆದುಕೊಂಡಿದೆ. ಸ್ವತಃ ಅಪರಾಧಿ ಸ್ಥಾನದಲ್ಲಿ ನಿಂತಿದೆ. ಭ್ರಹ್ಮಾಂಡ ಭ್ರಷ್ಟಾಚಾರದ ಹೊರೆ ಮತ್ತು ಹೊಣೆ ಇರುವವರು ರಾಜಿನಾಮೆ ನೀಡಬೇಕು. ಇಷ್ಟೆಲ್ಲಾ ಆದ ನಂತರವಾದರೂ ಪ್ರಕರಣವನ್ನು ನಿಷ್ಪಕ್ಷಪಾತದ, ಉನ್ನತ ತನಿಖೆಗೆ ಒಪ್ಪಿಸಬೇಕು. ತನಿಖೆಯ ವೃತ್ತಿ ದಕ್ಷತೆಯ ಹಿರಿಮೆ ಹೊಂದಿದ್ದ ಬಹುತೇಕ ಎಲ್ಲಾ ಉನ್ನತ ಸಂವಿಧಾನಿಕ ಸಂಸ್ಥೆಗಳನ್ನೂ ಭ್ರಷ್ಟಗೊಳಿಸಿ ಸಾಕು ನಾಯಿಗಳನ್ನಾಗಿಸಿದ 'ಅಪಕೀರ್ತಿ' ಕೇಂದ್ರಕ್ಕೆ, ಮೋ–ಶಾ ರಿಗಿದೆ ಎಂಬ ಕಳಂಕದಿಂದ ಭಾರತ ಮುಕ್ತವಾಗುವುದೆಂತು?

ಅಭಿಯಾನವಾಗಿ ರೂಪಗೊಳ್ಳುತ್ತಿರುವ ದೇವನೂರು ಮಹದೇವರವರ ಪುಸ್ತಕ

'ಆರ್.ಎಸ್.ಎಸ್. ಆಳ ಮತ್ತು ಅಗಲ'

ಎಚ್.ಆರ್. ನವೀನ್ ಕುಮಾರ್



ಭಾರತವನ್ನು ನುಂಗಿ ನೀರು ಕುಡಿದು ಏಕಮೇವಾದಿಪತ್ಯವನ್ನು ಸ್ಥಾಪಿಸುವ ಮೂಲಕ ಭಾರತದ ಪ್ರಾಣವಾಯುವಾದ "ಬಹುತ್ವ" ವನ್ನು ಸಮಾಧಿ ಮಾಡಲು ಹೊರಟಿರುವ ಆರ್.ಎಸ್.ಎಸ್. ಸಂಘಟನೆಯ ಚಿಂತನೆಗಳ ಅಪಾಯಗಳ ಕುರಿತು ನಾಡಿನ ಸಾಕ್ಷಿ ಪ್ರಜ್ಞೆಯಾಗಿರುವ ದೇವನೂರು ಮಹದೇವರವರು "ಆರ್.ಎಸ್.ಎಸ್. ಆಳ ಮತ್ತು ಅಗಲ" ಎಂಬ ಕಿರು ಪುಸ್ತಕದಲ್ಲಿ ಸಾಕ್ಷಿ ಸಮೇತ ವಿವರಿಸಿದ್ದಾರೆ.

ಗೋಲ್ವಾಲ್ಕರ್ "we or our nationhood defined", ಹೆಡ್ಗೆವಾರ್ "ಚಿಂತನ ಗಂಗಾ", ಸಾವರ್ಕರ್"ಭಾಷಣಗಳು" ಜೊತೆಗೆ ಮನುಷ್ಯ ವಿರೋಧಿ "ಮನುಸ್ಮೃತಿ", ಮತ್ತು ಭಗವದ್ಗೀತೆಗಳಲ್ಲಿ ದೇಶದ ಕುರಿತು ಹಿಂದುತ್ವದ ಕುರಿತು ಏನೇನೆಲ್ಲಾ ಹೇಳಲಾಗಿದೆ. ಇವುಗಳಲ್ಲಿ ಯಾವುದನ್ನು ಆರ್.ಎಸ್.ಎಸ್. ತನ್ನ ಸಿದ್ಧಾಂತದಲ್ಲಿ ಅಳವಡಿಸಿಕೊಂಡು ಭಾರತದಲ್ಲಿ ಕೆಲಸ ಮಾಡುತ್ತಿದೆ. ಈ ಸಿದ್ಧಾಂತದಿಂದ ಬಹುತ್ವ ಭಾರತಕ್ಕೆ ಮತ್ತು ನಾವೆಲ್ಲ ಒಪ್ಪಿ ಬದುಕುತ್ತಿರುವ ಭಾರತದ ಸಂವಿಧಾನದ ಆಶಯಗಳಿಗೆ ಹೇಗೆ ದಕ್ಕೆಯುಂಟಾಗುತ್ತದೆ ಎಂಬ ಕುರಿತು ಅತ್ಯಂತ ಸರಳವಾಗಿ ವಿವರಿಸಲಾಗಿದೆ.

ದೇವನೂರರು ಬರೆದಿರುವ ಈ ಪುಟ್ಟ ಕೃತಿ ಅತ್ಯಂತ ಮಹತ್ತರವಾದ ವಿಷಯಗಳನ್ನು ಪ್ರಸಸ್ತಾಪ ಮಾಡಿರುವುದರಿಂದ ನಾಡಿನಾದ್ಯಂತ ಈ ಕೃತಿಗೆ ಬೇಡಿಕೆ ಹೆಚ್ಚಾಗಿದೆ. ಮೊದಲಿಗೆ ಅಭಿನವ ಪ್ರಕಾಶನ ಪ್ರಕಟಿಸಿದ ಕೃತಿಸ್ವಾಮ್ಯವನ್ನು ಮುಕ್ತಗೊಳಿಸಿದುರುದರಿಂದ ಇದುವರೆಗು ಸುಮಾರು 10 ಸಾವಿರದಷ್ಟು ಪ್ರತಿಗಳು ಮುದ್ರಣಗೊಂಡು ಮಾರಾಟವಾಗಿವೆ. ಈಗಲೂ ಹಲವು ಪ್ರಕಾಶನ ಸಂಸ್ಥೆಗಳು ಮತ್ತು ವ್ಯಕ್ತಿಗಳು, ಸಂಘಟನೆಗಳು ಈ ಪುಸ್ತಕವನ್ನು ವ್ಯಾಪಕವಾಗಿ ಮುದ್ರಿಸಿ ಆಂದೋಲನದ ರೂಪದಲ್ಲಿ ಜನರಬಳಿ ಕೊಂಡೊತ್ತುತ್ತಿವೆ.

ಕರ್ನಾಟಕದಲ್ಲಿ ಪುಸ್ತಕಗಳು ಅಭಿಯಾನದ ರೂಪಪಡೆದ ಉದಾಹರಣೆಗಳಿವೆ. ಜಸ್ಟೀಸ್ ಹೆಚ್.ಎನ್. ನಾಗಮೋಹನ ದಾಸ್ ರವರ "ಸಂವಿಧಾನ ಓದು" ಕೃತಿಯನ್ನು ಸಹಯಾನ ಕೆರೆಕೋಣ ಮತ್ತು ಸಮುದಾಯ ಕರ್ನಾಟಕ ಜಂಟಿಯಾಗಿ ಪ್ರಕಟಿಸಿ ನಾಡಿನಾದ್ಯಂತ ನೂರಾರು ಕಾರ್ಯಕ್ರಮಗಳನ್ನು ನಡೆಸಿ ಇದುವರೆಗು ಸುಮಾರು 3 ಲಕ್ಷಕ್ಕೂ ಹೆಚ್ಚು ಪ್ರತಿಗಳನ್ನು ಮಾರಾಟ ಮಾಡಲಾಗಿದೆ.

ಆರ್.ಎಸ್.ಎಸ್. ಆಳ ಅಗಲ ಕೃತಿಯಲ್ಲಿರುವ ಕೆಲವು ಅಂಶಗಳನ್ನು ಹಾಗೆ ಯತಾವತ್ತಾಗಿ ನೋಡಿದರೆ ಆರ್.ಎಸ್.ಎಸ್. ನ ಅಪಾಯ ಅರ್ಥವಾಗುತ್ತದೆ.

"ಆರ್.ಎಸ್.ಎಸ್. ಗೆ ಬಹುತ್ವ ಅಂದರೆ ಅವರಿಗೆ ಅದು ಛಿದ್ರತೆ, ವಿಷಬೀಜ. ಗೋಲ್ವಾಲ್ಕರ್ ಅವರು 'ಒಕ್ಕೂಟ ಸ್ವರೂಪದ ಎಲ್ಲಾ ಮಾತನ್ನೂ ಆಳವಾಗಿ ಹೂಳಬೇಕು, ಏಕಾತ್ಮಕ ಸರ್ಕಾರದ ಪದ್ಧತಿಯನ್ನು ಸ್ಥಾಪಿಸುವಂತೆ ಸಂವಿಧಾನವನ್ನು ಪುನಃ ಬರೆದಿಡೋಣ' ಎಂದು ಹೇಳುತ್ತಾರೆ. ಅಷ್ಟೇ ಅಲ್ಲ, ಒಂದು ಧ್ವಜ, ಒಂದು ರಾಷ್ಟ್ರ ಸಿದ್ಧಾಂತ, ಒಂದು ಜನಾಂಗ, ಒಬ್ಬ ನಾಯಕ ಎಂಬ ಹಿಟ್ಲರ್ ನ ಸರ್ವಾಧಿಕಾರಿ ಸಿದ್ಧಾಂತವೇ ಇವರ ಆದರ್ಶ".

"ಮನುಧರ್ಮಶಾಸ್ತ್ರವನ್ನು ವರ್ತಮಾನ ಮಾಡಲು ಹೊರಟಿದ್ದಾರೆ. ಅದಕ್ಕಾಗಿ ಈಗ ಈ ಆರ್.ಎಸ್.ಎಸ್. ಮತ್ತು ಅದರ ಪರಿವಾರಗಳು ಎಂತಹ ವಾತಾವರಣವನ್ನು ಸೃಷ್ಟಿಸುದ್ದಾರೆಂದರೆ, ಸರ್ಕಾರದ ಇಂತಹ ಕಾನೂನುಗಳನ್ನು ಸರಿಯಾಗಿಲ್ಲ ಅಂದರೂ, ಹಾಗೆ ಅಂದವರನ್ನು ದೇಶದ್ರೋಹಿಗಳೆಂದು ಆರ್.ಎಸ್.ಎಸ್. ಕೂಗುಮಾರಿಗಳ ಗುಂಪು ಅಬ್ಬರಿಸುತ್ತದೆ. ಇಂತಹ ವಾತಾವರಣದಲ್ಲಿ ಭಾರತ ನರಳುತ್ತಿದೆ."

ಹೌದು, ಛಿದ್ರತೆಯೇ ದೆವ್ವ; ಐಕ್ಯತೆಯೇ ದೈವ ಎಂಬ ವಿವೇಕ ನಮ್ಮದೂ ಆಗಬೇಕಾಗಿದೆ. ಇಂದು ಛಿದ್ರತೆ ಮಿತಿಮೀರುತ್ತಿದೆ. ಅಧರ್ಮವು ಧರ್ಮದ ಮುಖವಾಡ ತೊಟ್ಟು ಕುಣಿದು ಕುಪ್ಪಳಿಸುತ್ತಿದೆ. ಅಸಮಾನತೆಯೇ ನೀತಿಯಾಗುತ್ತಿದೆ! ಧರಹತ್ತಿ ಉರಿದೊಡೆ ನಿಲ್ಲುವುದೆಂತು ಅಂತಾಗಿಬಿಟ್ಟಿದೆ. ಇಂತಹ ಆಳ್ವಿಕೆ ಎಲ್ಲಿಗೆ ತಲುಪಬಹುದು?

ಕೂಗುಮಾರಿ ಮನೆಮುಂದೆ ಬಂದು ಕೂಗಿದಾಗ ಅದಕ್ಕೆ ಓಗೊಟ್ಟರೆ ಅಥವಾ 'ಕರೆದವರು ಯಾರು?' ಅಂತ ಕೂಗುಮಾರಿಗೆ ಸ್ಪಂದಿಸಿದರೆ, ಅವರು ರಕ್ತ ಕಾರಿಕೊಂಡು ಸಾಯುತ್ತಾರೆ ಎನ್ನುವುದು ನಮ್ಮ ಜನಪದರ ನಂಬಿಕೆ. ಅದಕ್ಕಾಗಿ 'ನಾಳೆ ಬಾ' ಅಂತ ಬಾಗಿಲ ಮುಂದೆ ಬರೆದಿರುತ್ತಾರೆ.

ಛಿದ್ರತೆಯ, ತಾರತಮ್ಯ ಬಿತ್ತನೆ ಮಾಡುವ ಕೂಗುಮಾರಿಗಳ ಗುಂಪು ನಮ್ಮ ಮನೆ ಮುಂದೆ ಬಂದು ಕೂಗಿದಾಗ, ಅದಕ್ಕೆ 'ಓ'ಗೊಡದೆ, 'ನಾಳೆ ಬಾ' ಎಂದು ನಾವೂ ಕೂಡ ನಮ್ಮ ಜನಪದರಂತೆ ಬಾಗಿಲಲ್ಲಿ ಬರೆದಿಡಬೇಕಾಗಿದೆ. ನಾವು ಓಗೊಟ್ಟರೆ, ಅದರೊಡನೆ ದನಿಗೂಡಿಸಿದರೆ, ಆ ಕ್ಷಣದಿಂದಲೇ ನಮ್ಮ ಪತನವು ಹೆಜ್ಜೆ ಇಡತೊಡಗುತ್ತದೆ. ಹಳ್ಳಿಗಾಡಿನ ಅನುಭವಜನ್ಯವಾದ 'ಛಿದ್ರತೆಯೇ ದೆವ್ವ ಐಕ್ಯತೆಯೇ ದೈವ' ಎಂಬ ವಿವೇಕ ನಮ್ಮದೂ ಆಗಬೇಕಾಗಿದೆ.

ಜಾನಪದ ಕತೆಗಳ ಮೂಲಕ ಆರ್.ಎಸ್.ಎಸ್. ನ ಸಿದ್ಧಾಂತ ಮತ್ತು ಅದರ ಅಪಾಯಗಳ ಕುರಿತು ಮತ್ತು ಪ್ರಸ್ತುತ ಕೇಂದ್ರ ಮತ್ತು ರಾಜ್ಯದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಸರ್ಕಾರ ಮತ್ತು ಪ್ರಧಾನಿ ಕೇವಲ ಉತ್ಸವಮೂರ್ತಿಗಳಾಗಿ ಹೇಗೆ ತನ್ನ ಆರ್.ಎಸ್.ಎಸ್. ಸಿದ್ಧಾಂತವನ್ನು ಸರ್ಕಾರದ ಮೂಲಕ ಜಾರಿಗೊಳಿಸುತ್ತಿವೆ ಎಂಬುದರ ಕುರಿತು ಈ ಪುಸ್ತಕದ ಬೆಳಕು ಚಲ್ಲುತ್ತದೆ.

ಪುಸ್ತಕದ ಕೊನೆಯಲ್ಲಿ ದೇವನೂರರು ಹೇಳುವ ಮಾತು ಪ್ರಸ್ತುತ ಸಂದರ್ಭಕ್ಕೆ ಬಹಳ ಮುಖ್ಯ ಅಂತ ಅನಿಸುತ್ತದೆ. "ಈಗಲಾದರೂ ಸಮಾಜನ್ನು ಮುನ್ನಡೆಗೆ ಒಯ್ಯಬೇಕೆಂದಿರುವ ಸಂಘ/ಸಂಘಟನೆ/ಪಕ್ಷಗಳು ತಂತಮ್ಮ ಸಣ್ಣಪುಟ್ಟ ಝುರಿಗಳಂತಿರುವ ಸ್ಥಿತಿಯನ್ನು ಮೀರಿ ಒಕ್ಕೂಟವಾಗಿ ಹೊಳೆಯಾಗಿ ಹರಿಯಬೇಕಿದೆ."

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ
ಬೆಂಗಳೂರು ಉತ್ತರ ಜಿಲ್ಲೆಯ 9 ನೇ ಸಮ್ಮೇಳನ



ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಬೆಂಗಳೂರು ಉತ್ತರ ಜಿಲ್ಲಾ ಸಮ್ಮೇಳನ, ಜುಲೈ ತಿಂಗಳ 2 ಮತ್ತು 3 ರಂದು ಕೆ.ಆರ್. ಪುರಂ ಪ್ರದೇಶದಲ್ಲಿ ನಡೆಯಿತು.

2 ರಂದು ಕೆ.ಆರ್.ಪುರಂ ನ ಬಿ.ಬಿ.ಎಂ.ಪಿ ಕಚೇರಿ ಎದುರು ಸಂಜೆ 4.30 ಗಂಟೆಗೆ ಬಹಿರಂಗ ಸಭೆ ನಡೆಯಿತು. ಬಿ. ವೆಂಕಟ ಶಿವಾರೆಡ್ಡಿ, ಸಹ ಪ್ರಾಧ್ಯಾಪಕರು (ಭೌತ ವಿಜ್ಞಾನ), ನ್ಯಾಷನಲ್ ಕಾಲೇಜ್, ಇವರು ಪವಾಡ ರಹಸ್ಯ ಬಯಲು ಕಾರ್ಯಕ್ರಮ ನಡೆಸಿಕೊಡುವ ಮೂಲಕ ಮೂಢ ನಂಬಿಕೆಗಳನ್ನು ಬಿಟ್ಟು ವೈಜ್ಞಾನಿಕ ಚಿಂತನೆಯೆಡೆಗೆ ಸಾಗುವಂತೆ ಸಂದೇಶ ಕೊಟ್ಟು ಬಹಿರಂಗ ಸಭೆಗೆ ಚಾಲನೆ ಕೊಟ್ಟರು.

ಸಂಘಟನೆಯ ಬೆಂಗಳೂರು(ಉತ್ತರ) ಜಿಲ್ಲಾ ಸಮಿತಿಯ ಅಧ್ಯಕ್ಷರಾದ ರಾಜೇಶ್ವರಿ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಜಿಲ್ಲಾ ಕಾರ್ಯದರ್ಶಿಯಾಗಿರುವ ಲಲಿತಾ ಶೆಣೈ ಪ್ರಾಸ್ತಾವಿಕ ಮಾತುಗಳನ್ನು ಆಡಿದರು. ರಾಜ್ಯ ಸಮಿತಿಯಲ್ಲಿ ಉಪಾಧ್ಯಕ್ಷರಾಗಿರುವ ಕೆ.ಎಸ್. ವಿಮಲ ಸಭೆಯನ್ನು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಗೌರಮ್ಮ, ರಾಜ್ಯ ಪ್ರಧಾನ ಕಾರ್ಯದರ್ಶಿ ಹಾಗೂ ಗೆಳತಿ ಬುಲೆಟ್ ಅನಿತಾ, ಹೂಡಿ ಬೆಂಗಳೂರು ಇವರು ಭಾಗವಹಿಸಿದ್ದರು.

ಬೆಂಗಳೂರು (ಪೂರ್ವ) ವಲಯ ಸಮಿತಿ ಕಾರ್ಯದರ್ಶಿ, ಗಾಯತ್ರಿ ಸ್ವಾಗತ ಕೋರಿದರು. ಕಾರ್ಯಕ್ರಮದ ನಿರೂಪಣೆಯನ್ನು ಗೆಳತಿ ಅನಿತಾ, ಪೂರ್ವ ವಲಯ ಸಮಿತಿ, ಇವರು ನಡೆಸಿಕೊಟ್ಟರು. ಸಮ್ಮೇಳನಕ್ಕೆ ಪೂರ್ವಭಾವಿಯಾಗಿ ಮಕ್ಕಳಿಗೆ ಹಾಗೂ ಮಹಿಳೆಯರಿಗೆ ಆಟೋಟಗಳ ಸ್ಪರ್ಧೆ ಏರ್ಪಡಿಸಿದ್ದು, ಈ ಸಂದರ್ಭದಲ್ಲಿ, ಗೆದ್ದವರಿಗೆ ಬಹುಮಾನಗಳನ್ನು ವಿತರಿಸಲಾಯಿತು. ಸಭೆಯ ಅಧ್ಯಕ್ಷರಾದ ರಾಜೇಶ್ವರಿ ಅಧ್ಯಕ್ಷೀಯ ಮಾತುಗಳನ್ನಾಡಿದರು. ವಂದನಾರ್ಪಣೆಯನ್ನು ವನಿತಾ ಮಾಡಿದರು.

ಬಹಿರಂಗ ಸಭೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜಿಲ್ಲಾ ಸಂಘಟನೆಯ ಮೂರೂ ವಲಯದ ಪದಾಧಿಕಾರಿಗಳು ಹಾಗೂ ಸದಸ್ಯರು ಪಾಲ್ಗೊಂಡಿದ್ದರು. ಇತರ ಸೋದರ ಸಂಘಟನೆಗಳ ಮುಖಂಡರು ಭಾಗವಹಿಸಿದ್ದರು. ಸಾರ್ವಜನಿಕರೂ ಸೇರಿದಂತೆ ಒಟ್ಟು ಸುಮಾರು 180–200 ಜನ ಸಭೆಯಲ್ಲಿ ಇದ್ದು, ಕೆ.ಆರ್. ಪುರಂ ಪ್ರದೇಶದಲ್ಲಿ ಒಂದು ಪ್ರಭಾವಿ ಬಹಿರಂಗ ಸಭೆ ನಡೆದದ್ದು ಇನ್ನಷ್ಟು ಉತ್ಸಾಹದಿಂದ ಸಂಘಟನೆಯನ್ನು ವಿಸ್ತರಿಸಲು ಸಂಘಟನೆಯ ಕಾರ್ಯಕರ್ತರಿಗೆ ಪ್ರೇರಣೆ ಕೊಟ್ಟಿತು.

ಒಟ್ಟು ಪ್ರತಿನಿಧಿಗಳು 97 ಇದ್ದು, ಯುವತಿಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಕರಡು ವರದಿಯ ಮೇಲೆ ಒಟ್ಟು 14 ಜನ ಮಾತನಾಡಿದರು.

ಸಮ್ಮೇಳನದಲ್ಲಿ ಬೆಂಗಳೂರು ಉತ್ತರ ಜಿಲ್ಲಾ ಸಮಿತಿಯಡಿಯಲ್ಲಿ ಬರುವ ಮೂರು ವಲಯ ಸಮಿತಿಗಳಿಗೆ ಸಮ್ಮೇಳನದ ಕರಡು ವರದಿಯ ಮೇಲೆ ಮಾತನಾಡಲು ತಲಾ 10 ನಿಮಿಷದಂತೆ 30 ನಿಮಿಷಗಳ ಕಾಲ ನಿಗದಿ ಪಡಿಸಲಾಗಿತ್ತು. ಇಷ್ಟು ಕಡಿಮೆ ಸಮಯದಲ್ಲೂ ಮಾತನಾಡಿದ ಪ್ರತಿನಿಧಿಗಳ ಸಂಖ್ಯೆ 12ಕ್ಕೂ ಮೀರಿತ್ತು. ತಮ್ಮ ತಮ್ಮ ವಲಯದ ಸಮಸ್ಯೆಗಳನ್ನು ಗುರುತಿಸಿಕೊಂಡು ಮಾತನಾಡಿದ್ದ ಪ್ರತಿನಿಧಿಗಳು ಒಟ್ಟಾರೆಯಾಗಿ ಹತ್ತಿರದ ರಾಜ್ಯದಲ್ಲಿ ಇದ್ದಂತೆ ಬೆಂಗಳೂರು ನಗರ ಗ್ರಾಮಾಂತರ ಜಿಲ್ಲೆ, ಸಾರಿಗೆ ಬಸ್ ಗಳಲ್ಲಿ ಎಲ್ಲಾ ಮಹಿಳೆಯರಿಗೆ ಉಚಿತ ಸಾರಿಗೆ ವ್ಯವಸ್ಥೆ ಒದಗಿಸಬೇಕು ಮುಂತಾದ ವಿಷಯಗಳ ಮೂಲಕ ಜಿಲ್ಲೆಯ, ಪಠ್ಯಪುಸ್ತಕ ಪರಿಷ್ಕರಣೆಯ ಅನಾಹುತಗಳೇ ಮುಂತಾದ ವಿಷಯಗಳನ್ನು ಪ್ರಸ್ತಾಪಿಸುವ ಮೂಲಕ ರಾಜ್ಯದ, ಹಾಗೆಯೇ ಜಿ.ಎಸ್.ಟಿ. ಯಿಂದಾದ ಅನಾಹುತಗಳನ್ನು ಹೇಳಿಕೊಳ್ಳುವ ಮೂಲಕ ದೇಶದ ಸಮಸ್ಯೆಗಳ ಕುರಿತು ಮಾತನಾಡಿದರು. ಮುಂಬರುವ ದಿನಗಳಲ್ಲಿ ತಾವು ಹೋರಾಟಕ್ಕೆ ಅಣಿಯಾಗಬೇಕಾಗಿದೆ ಎಂದು ಸಮ್ಮೇಳನವು ಗುರುತಿಸಿದೆ.

ಸಮ್ಮೇಳನದಲ್ಲಿ 19 ಜನರ ನೂತನ ಜಿಲ್ಲಾ ಸಮಿತಿ ಆಯ್ಕೆ ಮಾಡಲಾಯಿತು. ಜಿಲ್ಲಾ ಸಮಿತಿ ಆಯ್ಕೆ ಮಾಡಿದ 8 ಪದಾಧಿಕಾರಿಗಳಲ್ಲಿ, ಅಧ್ಯಕ್ಷರಾಗಿ, ಲಲಿತಾ ಶೆಣೈ, ಕಾರ್ಯದರ್ಶಿಯಾಗಿ, ಗೀತ ರವಿಕುಮಾರ್, ಖಜಾಂಚಿಯಾಗಿ ರೇಣುಕಾ, ಉಪಾಧ್ಯಕ್ಷರಾಗಿ ಶಾರದಾ ಕೆ.ಎಸ್., ವನಿತಾ ಮತ್ತು ವಿಶಾಲಮತಿ, ಸಹ ಕಾರ್ಯದರ್ಶಿಗಳಾಗಿ ಗಾಯತ್ರಿ ಮತ್ತು ಲೀಲಾವತಿ ಟಿ. ಆಯ್ಕೆಯಾದರು. ಆಗಸ್ಟ್ 1–3 ರವರೆಗೆ ಕಲ್ಬುರ್ಗಿ ಯಲ್ಲಿ ನಡೆಯುವ ರಾಜ್ಯ ಸಮ್ಮೇಳನಕ್ಕೆ ಬೆಂಗಳೂರು ಉತ್ತರ ಜಿಲ್ಲಾ ಸಮಿತಿಯಿಂದ 22 ಪ್ರತಿನಿಧಿಗಳನ್ನು ಆಯ್ಕೆ ಮಾಡಲಾಗಿದೆ.





ಗುತ್ತಿಗೆ ಆಧಾರಿತ ಅಗ್ನಿಪಥ್ ಯೋಜನೆ ವಿರೋಧಿಸಿ ಪ್ರತಿಭಟನೆ

ದೇಶದ ಸ್ವಾವಲಂಬನೆ ಮತ್ತು ಭದ್ರತೆಗೆ ಅಪಾಯ ತಂದೊಡ್ಡುವ ಹಾಗೂ ವಿದ್ಯಾರ್ಥಿ ಯುವಜನರ ಭವಿಷ್ಯಕ್ಕೆ ಮಾರಕ ಹೊಡೆತ ನೀಡುವ ಸೇನೆಯಲ್ಲಿ 4 ವರ್ಷಗಳ ಗುತ್ತಿಗೆ ಆಧಾರಿತ ಅಗ್ನಿಪಥ್ ಯೋಜನೆಯನ್ನು ವಿರೋಧಿಸಿ ಸಿಪಿಐ(ಎಂ) ಕೇಂದ್ರ ಸಮಿತಿ ಕರೆಯ ಮೇರೆಗೆ 11 ಜುಲೈ 2022 ನಗರದ ಕ್ಲಾಕ್ ಟವರ್ ಬಳಿಯಲ್ಲಿ ಪ್ರತಿಭಟನಾ ಸಭೆಯು ನಡೆಯಿತು.

ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ನೇತ್ರತ್ವದಲ್ಲಿ ಜರುಗಿದ ಪ್ರತಿಭಟನಾ ಸಭೆಯಲ್ಲಿ ದೇಶ ವಿರೋಧಿ, ಯುವಜನ ವಿರೋಧಿ ಅಗ್ನಿಪಥ್ ಯೋಜನೆಯ ವಿರುದ್ಧ ಆಕ್ರೋಶಭರಿತ ಘೋಷಣೆಗಳನ್ನು ಕೂಗಲಾಯಿತು.

ಪ್ರತಿಭಟನಾ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ಕೆ.ಯಾದವ ಶೆಟ್ಟಿಯವರು, "ದೇಶದ ಭದ್ರತೆಗೆ ಸದಾ ಜಾಗ್ರತ ಸೈನಿಕ ವ್ಯವಸ್ಥೆ ಅನಿವಾರ್ಯವಾಗಿದ್ದು, ಅಂತಹ ಸೈನಿಕರಿಗೆ ಜೀವನಪರ್ಯಂತ ಸಂಪೂರ್ಣ ಸೇವಾ ಭದ್ರತೆ ಒದಗಿಸುವುದು ಕೇಂದ್ರ ಸರಕಾರದ ಕರ್ತವ್ಯವಾಗಿದೆ. ಆದರೆ ನರೇಂದ್ರ ಮೋದಿ ನೇತ್ರತ್ವದ ಬಲಪಂಥೀಯ ಸರಕಾರವು ಕಾರ್ಪೊರೇಟ್ ಲಾಭಕೋರ ಸರಕಾರವಾಗಿದೆ. ಎಲ್ಲಾ ಸಾರ್ವಜನಿಕ ಸಂಸ್ಥೆಗಳನ್ನು ಕಾರ್ಪೊರೇಟ್ ಕಂಪೆನಿಗಳಿಗೆ ಮಾರಾಟ ಮಾಡುವ ಮೂಲಕ ದೇಶದ ಆರ್ಥಿಕತೆಯನ್ನು ಸರ್ವನಾಶ ಮಾಡಿದೆ. ಇಂತಹ ಜನವಿರೋಧಿ ಸರಕಾರವು ದೇಶ ಕಾಯುವ ಸೈನಿಕರಿಗೆ ಪಿಂಚಣಿ ಹಾಗೂ ಇತರೆ ಸೌಲಭ್ಯಗಳನ್ನು ಇಲ್ಲವಾಗಿಸಿ ಮುಂದಿನ 4 ವರ್ಷಗಳ ಗುತ್ತಿಗೆ ಆಧಾರಿತ ಸೈನಿಕರಿಗೆ ನೇಮಕಾತಿ ನೀಡುವ ಅಗ್ನಿಪಥ್ ಎಂಬ ಯೋಜನೆಯನ್ನು ಜಾರಿಗೊಳಿಸಿದ್ದು, ಇದು ಅಗ್ನಿ ಕುಂಡದಲ್ಲಿ ದೇಶದ ಯುವಜನರನ್ನು ಬೇಯಿಸುವ ಯೋಜನೆಯಾಗಿದೆ" ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯರಾದ ಮುನೀರ್ ಕಾಟಿಪಳ್ಳರವರು ಮಾತನಾಡುತ್ತಾ, "ತಿಂಗಳಿಗೆ 24 ಸಾವಿರ ರೂಪಾಯಿ ಪಡೆಯುವ ಕೇವಲ ನಾಲ್ಕು ವರ್ಷಗಳ ಅವಧಿಯ ಅಗ್ನಿಪಥ್ ಯೋಜನೆಗೆ ಸೇರಲು ಆಸಕ್ತರು ಪಿಯುಸಿಯಲ್ಲೇ ಶಿಕ್ಷಣ ತೊರೆಯಬೇಕಾಗುತ್ತದೆ. ತಮ್ಮ ಸರಕಾರದಲ್ಲಿ ಯುವಜನರಿಗೆ ಶಿಕ್ಷಣ, ಉದ್ಯೋಗ ಒದಗಿಸಲಾಗದ ಬಿಜೆಪಿ ಶಾಸಕರು, ಮುಖಂಡರುಗಳು ತಮ್ಮ ಕಚೇರಿಗಳಲ್ಲಿ ಅಗ್ನಿಪಥ್ ಯೋಜನೆಯ ನೋಂದಣಿ ಅಭಿಯಾನ ನಡೆಸಿ ಉದ್ಯೋಗ, ದೇಶಭಕ್ತಿಯ ಹೆಸರಿನಲ್ಲಿ ಉದ್ಯೋಗದ ನಿರೀಕ್ಷೆಯಲ್ಲಿರುವ ಯುವಜನರನ್ನು ದಾರಿತಪ್ಪಿಸುವ ಯತ್ನ ನಡೆಸುತ್ತಿದ್ದಾರೆ. ಮಂಗಳೂರಿನಲ್ಲಿ ಅಗ್ನಿಪಥ್ ಗೆ ಯುವಜನರನ್ನು ಸೇರಿಸಲು ಅಭಿಯಾನ ನಡೆಸುತ್ತಿರುವ ಭರತ್ ಶೆಟ್ಟಿ, ವೇದವ್ಯಾಸ್ ಕಾಮತ್ ಸಹಿತ ಬಿಜೆಪಿ ಶಾಸಕರುಗಳು ಆರ್ ಎಸ್ಎಸ್ ಅಗ್ರ ನಾಯಕರುಗಳು ಮೊದಲು ತಮ್ಮ ಕುಟುಂಬದ ಹದಿಹರೆಯದ ಯುವಕರನ್ನು ಶಿಕ್ಷಣ ನಿಲ್ಲಿಸಿ ಅಗ್ನಿವೀರರಾಗಿ ಕಳುಹಿಸಿಕೊಡಲಿ ಆ ಮೂಲಕ ಅಗ್ನಿಪಥ್ ಯೋಜನೆಯ ಲಾಭವನ್ನು, ದೇಶಪ್ರೇಮವನ್ನು ಏಕಕಾಲದಲ್ಲಿ ಸಾಬೀತು ಪಡಿಸಲಿ. ಯಾವ ಶ್ರೀಮಂತರ ಮನೆಯ ಮಕ್ಕಳು ಒಬ್ಬರೂ ಈ ಯೋಜನೆಗೆ ಸೇರುವುದಿಲ್ಲ. ಬಿಜೆಪಿ ನಾಯಕರ ಮಕ್ಕಳು ಉನ್ನತ ಶಿಕ್ಷಣ ಪಡೆದು ವಿದೇಶಗಳಲ್ಲಿ ಲಕ್ಷಾಂತರ ಸಂಬಳ ಬರುವ ಉದ್ಯೋಗಗಳಿಗೆ ಸೇರಿಕೊಳ್ಳುತ್ತಾರೆ. ಕಾರ್ಪೊರೇಟ್ ಲಾಬಿಗಳ ಪರವಾಗಿ ಶಿಕ್ಷಣವನ್ನು ಮಾರಾಟದ ಸರಕಾಗಿಸಿರುವ, ಉದ್ಯೋಗ ನಾಶದ ನೀತಿಗಳನ್ನು ಜಾರಿಗೆ ತರುತ್ತಿರುವ ಮೋದಿ ಸರಕಾರ ಅಗ್ನಿಪಥ್ ಯೋಜನೆಯ ಮೂಲಕ ಶಿಕ್ಷಣ ವಂಚಿತ ನಿರುದ್ಯೋಗಿ ಯುವಕರನ್ನು ವಂಚಿಸಲು ಸಂಚು ರೂಪಿಸಿದೆ. ಬಡವರ, ಶ್ರಮಿಕರ ಮನೆಯ ಮಕ್ಕಳ ಬದುಕಿನೊಂದಿಗೆ ಚೆಲ್ಲಾಟವಾಡುವ ಬಿಜೆಪಿಗೆ ಮುಂದಿನ ಚುನಾವಣೆಯಲ್ಲಿ ಇದರ ಬಿಸಿ ತಟ್ಟಲಿದೆ" ಎಂದು ಹೇಳಿದರು.

ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯರಾದ ವಸಂತ ಅಚಾರಿಯವರು ಮಾತನಾಡಿ, "ಅಗ್ನಿಪಥ್ ಯೋಜನೆಯಲ್ಲಿ ಆಕರ್ಷಕ ಪ್ಯಾಕೇಜ್ ಎಂಬುದೇ ಮಹಾಮೋಸವಾಗಿದೆ.ತಿಂಗಳಿಗೆ ನೀಡುವ ಸಂಭಾವನೆಯಲ್ಲಿಯೇ 9000 ರೂ. ಕಡಿತ ಮಾಡಿ ಅದನ್ನೇ 4 ವರ್ಷಗಳ ಬಳಿಕ ಅದಕ್ಕೆ ಅಲ್ಪಸ್ವಲ್ಪ ಸೇರಿಸಿ ನೀಡಲಾಗುತ್ತದೆ. ದೇಶಕ್ಕಾಗಿ ಮಳೆ ಚಳಿ ಬಿಸಿಲೆನ್ನದೆ ಜೀವ ಸವೆಸುವ ಸೈನಿಕರಿಗೆ ಮೋದಿ ಸರಕಾರ ಮಾಡುವ ಭಾರೀ ಅನ್ಯಾಯವಾಗಿದೆ.ಇದರ ವಿರುದ್ಧ ದೇಶದೆಲ್ಲೆಡೆ ಭುಗಿಲೆದ್ದ ಭಾರೀ ಆಕ್ರೋಶವನ್ನು, ಯುವಜನತೆಯ ಪರಿಸ್ಥಿತಿಯನ್ನು ಅರ್ಥೈಸದ ಮೋದಿ ಸರಕಾರವು ಪ್ರತಿಭಟನೆಗಳನ್ನು ಹತ್ತಿಕ್ಕುವ ಮೂಲಕ ಸರ್ವಾಧಿಕಾರಿ ಫ್ಯಾಸಿಸ್ಟ್ ಪ್ರವೃತ್ತಿಯನ್ನು ತೋರಿಸಿದೆ" ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಸುನಿಲ್ ಕುಮಾರ್ ಬಜಾಲ್ ರವರು, "ದೇಶವನ್ನು ಆವರಿಸಿರುವ ನಿರುದ್ಯೋಗ ಭೀಕರತೆಯಿಂದ ತತ್ತರಿಸಿರುವ ಯುವಜನತೆಗೆ ಉದ್ಯೋಗ ಸೃಷ್ಟಿಸುವ ಬದಲು ಮತ್ತೆ ನಿರುದ್ಯೋಗದ ಕೂಪದತ್ತ ತಳ್ಳುತ್ತಿರುವ ನರೇಂದ್ರ ಮೋದಿ ಸರಕಾರವು ತನ್ನ ಅಡಿಯಲ್ಲಿರುವ 77 ಇಲಾಖೆಗಳಲ್ಲಿ ಕೇವಲ 34 ಇಲಾಖೆಗಳಲ್ಲಿ ಮಾತ್ರವೇ ನಿವೃತ್ತ ಸೈನಿಕರನ್ನು ಸೇರಿಸುತ್ತಿದೆ. 4 ವರ್ಷಗಳ ಬಳಿಕ ಬಿಜೆಪಿ ಕಚೇರಿಯಲ್ಲಿ ಕಾವಲುಗಾರ ಕೆಲಸ ನೀಡುವುದಾಗಿ ಬಿಜೆಪಿ ನಾಯಕೊಬ್ಬರು ಅವಮಾನಕಾರಿ ಹೇಳಿಕೆ ನೀಡಿದ್ದು, 4 ವರ್ಷಗಳ ಬಳಿಕ ನಿವೃತ್ತ ಸೈನಿಕರು ಬಿಜೆಪಿ ಕಚೇರಿ ಕಾಯುವ ಬದಲು ಬಿಜೆಪಿ ಕಚೇರಿಯನ್ನೇ ಶಾಶ್ವತವಾಗಿ ಮುಚ್ಚಲಿದ್ದಾರೆ" ಎಂದು ಹೇಳಿದರು.

ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಸುಕುಮಾರ್ ರವರು ಅಗ್ನಿಪಥ್ ಯೋಜನೆಯ ಹಿಂದಿರುವ ಸಂಘಪರಿವಾರದ ಹುನ್ನಾರವನ್ನು ವಿವರಿಸಿದರು.

ಪ್ರತಿಭಟನಾ ಸಭೆಯಲ್ಲಿ ಸಿಪಿಐ(ಎಂ) ಜಿಲ್ಲಾ ನಾಯಕರಾದ ಜೆ. ಬಾಲಕೃಷ್ಣ ಶೆಟ್ಟಿ, ಪದ್ಮಾವತಿ ಶೆಟ್ಟಿ, ಕ್ರಷ್ಣಪ್ಪ ಸಾಲ್ಯಾನ್, ಯೋಗೀಶ್ ಜಪ್ಪಿನಮೊಗರು, ವಸಂತಿ ಕುಪ್ಪೆಪದವು, ಜಯಂತ ನಾಯಕ್, ಸಂತೋಷ್ ಬಜಾಲ್, ಜಯಂತಿ ಶೆಟ್ಟಿ, ಬಶೀರ್ ಪಂಜಿಮೊಗರು, ಬಿ.ಕೆ. ಇಮ್ತಿಯಾಜ್, ಮನೋಜ್ ವಾಮಂಜೂರು, ದಯಾನಂದ ಶೆಟ್ಟಿ, ಶೇಖರ್ ಕುಂದರ್, ನವೀನ್ ಕೊಂಚಾಡಿ ಮುಂತಾದವರು ಉಪಸ್ಥಿತರಿದ್ದರು.

ರಸಗೊಬ್ಬರ ಕೊರತೆ:

ರೈತರಿಗೆ ಸಂಕಷ್ಟ-ಸರಕಾರಕ್ಕೆ ಚಲ್ಲಾಟ

ಇದು ಮುಂಗಾರು ಹಂಗಾಮಿನ ಕಾಲ, ಬಿತ್ತನೆ ಕಾರ್ಯ ಆರಂಭವಾಗಿದೆ. ರಸಗೊಬ್ಬರಗಳು ಹೆಚ್ಚು ಅಗತ್ಯವಿರುವ ಸಮಯ ಇದು. ಬಿತ್ತನೆ ಮಾಡಿದ ನಂತರ ಉತ್ತಮ ಮಳೆಯಾದಾಗ ಸಕಾಲಕ್ಕೆ ರಸಗೊಬ್ಬರ ಹಾಕಿದರೆ ಉತ್ತಮ ಫಸಲು ಸಿಗುತ್ತದೆ ಎಂಬ ನೀರೀಕ್ಷೆ ರೈತ ಸಮುದಾಯದ್ದು. ಆದರೆ, ರಸಗೊಬ್ಬರ ಪೂರೈಕೆಯಲ್ಲಿ ತೀವ್ರ ಕೊರತೆಯಾಗಿದೆ. ದುಬಾರಿ ಬೆಲೆಗೆ ಮಾರಾಟ ಮಾಡುತ್ತಿದ್ದಾರೆ ಎಂಬ ದೂರುಗಳು ರಾಜ್ಯವ್ಯಾಪಿ ಕೇಳಿ ಬರುತ್ತಿವೆ.



ಗುರುರಾಜ ದೇಸಾಯಿ

ಜೂನ್ ಮತ್ತು ಜುಲೈನಲ್ಲಿ ಗೊಬ್ಬರ ಬೇಡಿಕೆಯು ಅತ್ಯಧಿಕವಾಗಿರುತ್ತದೆ. ಒಂದೆಡೆ ರಸಗೊಬ್ಬರದ ದರ ಹೆಚ್ಚಳದ ಬರೆ ಒಂದೆಡೆಯಾದರೆ, ಪೂರೈಕೆಯಲ್ಲಾಗುತ್ತಿರುವ ವ್ಯತ್ಯಾಸ ರೈತರ ನಿದ್ದೆಗೆಡಿಸಿದೆ. ಹಲವೆಡೆಗಳಲ್ಲಿ ಕಡಿಮೆ ಪ್ರಮಾಣದಲ್ಲಿ ಪೂರೈಕೆಯಾಗಿದ್ದ ರಸಗೊಬ್ಬರ ಬಂದಷ್ಟೆ ವೇಗದಲ್ಲಿ ಖಾಲಿಯಾಗಿದೆ. ಇನ್ನೂ ಕೆಲವೆಡೆ ದಾಸ್ತಾನುಗಳಲ್ಲಿ ಸ್ಟಾಕ್ ಇಲ್ಲ ಒಂದುವಾರ ಬಿಟ್ಟು ಬನ್ನಿ ಎಂದು ಹೇಳಲಾಗುತ್ತಿದೆ. ಇದು ಕಾಳಸಂತೆಯಲ್ಲಿ ವ್ಯಾಪಾರಕ್ಕೆ ಅವಕಾಶ ಮಾಡಿಕೊಟ್ಟಿದೆ. ಪೂರೈಕೆಯ ಕೊರತೆಯನ್ನು ಲಾಭವಾಗಿಸಿದ ಕೆಲ ಖಾಸಗಿ ಗೊಬ್ಬರ ಅಂಗಡಿಗಳು ಹಾಗೂ ದಲಾಲಿ ಅಂಗಡಿಗಳು ದುಪ್ಪಟ್ಟು ದರಕ್ಕೆ ಮಾರಾಟ ಮಾಡುತ್ತಿದ್ದಾರೆ.

ದಲಾಲಿ/ಖಾಸಗಿ ಅಂಗಂಡಿಯಲ್ಲಿ ಡಬಲ್ ದರ:

'ರೈತರಿಗೆ ಅಗತ್ಯವಿದ್ದಾಗ ಯೂರಿಯಾ ಸಿಗಬೇಕು. ಬೇಡವಾದ ಸಮಯದಲ್ಲಿ ಬಳಸಿದರೆ ಅದು ಉಪಯೋಗಕ್ಕೆ ಬಾರದು. ಇದನ್ನೆ ದಲಾಲಿ ಹಾಗೂ ಖಾಸಗಿ ಅಂಗಡಿಗಳು ಲಾಭವಾಗಿಸಿಕೊಳ್ಳುತ್ತಿವೆ. ಸೊಸೈಟಿಯಲ್ಲಿ ಗೊಬ್ಬರ ಕೊರತೆ ಇರುವುದನ್ನು ಖಚಿತಪಡಿಸಿಕೊಂಡ ಇವರು ರೈತರಿಗೆ ದುಪ್ಪಟ್ಟು ದರದಲ್ಲಿ ಮಾರಾಟ ಮಾಡುತ್ತಾರೆ. ಉಳುಮೆಗೆ ಬೇಕಾದ ಎಲ್ಲಾ ಬೆಳೆಗಳನ್ನೂ ಇವರಲ್ಲಿಯೇ ಖರೀದಿ ಮಾಡಬೇಕು. ಬೆಳದ ಬೆಳೆಯನ್ನು ಇವರ ಅಂಗಡಿಯಲ್ಲೆ ಮಾರಾಟ ಮಾಡಬೇಕು ಎಂಬ ಮೌಖಿಕ ಷರತ್ತಿನೊಂದಿಗೆ ರಸಗೊಬ್ಬರ ನೀಡುತ್ತಿರುವ ಉದಾಹರಣೆಗಳು ಕಂಡು ಬರುತ್ತಿವೆ.

ಹೆಚ್ಚುದರ ಪಡೆದಲ್ಲಿ ಕಾನೂನು ಕ್ರಮ ಜರುಗಿಸುವುದಾಗಿ ಕೃಷಿ ಸಚಿವರು ಮತ್ತು ಕೃಷಿ ಇಲಾಖೆ ಹೇಳುತ್ತಿದೆ. ಅದು ಕಾಗದಕ್ಕೆ ಮಾತ್ರ ಸೀಮಿತವಾಗಿದೆ. ಖಾಸಗಿ ರಸಗೊಬ್ಬರ ಅಂಗಡಿಗಳು ದುಪ್ಪಟ್ಟು ಹಣ ಪಡೆಯುತ್ತಿವೆ ಎಂಬುದು ಕೃಷಿ ಸಚಿವರಿಗೂ, ಇಲಾಖೆಗೂ ಗೊತ್ತಿದೆ. ಆದರೂ ಗೊತ್ತಿಲ್ಲದವರಂತೆ ನಟಿಸುತ್ತಿದ್ದಾರೆ. ಕೃಷಿ ಚಟುವಟಿಕೆ ಚುರುಕಾಗಿರುವ ಕಾರಣ ರೈತರು ಇದ್ಯಾವುದನ್ನು ಪ್ರಶ್ನಿಸದೆ ಅನಿವಾರ್ಯವಾಗಿ ಹೆಚ್ಚುವರಿ ಹಣ ನೀಡಿ ರಸಗೊಬ್ಬರ ತರುತ್ತಿದ್ದಾರೆ. ಕೆಲ ರೈತ ಸಂಘಟನೆಗಳು ಪ್ರತಿಭಟನೆ ನಡೆಸುತ್ತಿವೆಯಾದರೂ ಸರಕಾರದ ಮೇಲೆ ಗಂಭೀರ ಪರಿಣಾಮ ಬೀರಿಲ್ಲ.

ರಸಗೊಬ್ಬರ ಕೊರತೆ ಇದೆ, ಇಲ್ಲ ಎಂಬ ಆಟ:

ಸತತ ಮಳೆ ನಂತರ ಬೆಳೆಗಳಿಗೆ ತತಕ್ಷಣದ ಪೋಷಕಾಂಶವಾಗಿ ಯೂರಿಯಾ ಗೊಬ್ಬರ ನೀಡಬೇಕಿದೆ. ಈ ಕಾರಣಕ್ಕೆ ರೈತರು ಗೊಬ್ಬರ ಪಡೆಯಲು ಕಳೆದ ಒಂದು ವಾರದಿಂದ ಪ್ರಯತ್ನಿಸುತ್ತಿದ್ದಾರೆ. ಆದರೂ ಸಮರ್ಪಕವಾಗಿ ಗೊಬ್ಬರ ಸಿಗುತ್ತಿಲ್ಲ. ಕಳೆದು ಮೂರು ದಿನಗಳಿಂದ ಖಾಸಗಿ ಅಂಗಡಿಗಳ ಮುಂದೆ ಸರತಿ ನಿಲ್ಲುತ್ತಿರುವ ರೈತರು, ಗೊಬ್ಬರ ಬಾರದೆ ನಿರಾಸೆಯಿಂದ ಮನೆಗೆ ವಾಪಸ್ ಹೋಗಿರುವ ಘಟನೆಗಳು ನಡೆಯುತ್ತಿವೆ.

ರಾಜ್ಯದಲ್ಲಿ ರಸಗೊಬ್ಬರ ಕೊರತೆ ಇಲ್ಲ, ರೈತರು ಯಾವುದೇ ಅಪಪ್ರಚಾರಕ್ಕೆ ಒಳಗಾಗಬೇಡಿ. ಮುಂಗಾರು ಹಂಗಾಮಿಗೆ 26.76 ಲಕ್ಷ ಮೆಟ್ರಿಕ್ ಟನ್ ವಿವಿಧ ರಸಗೊಬ್ಬರಗಳ ಬೇಡಿಕೆ ಇದ್ದು, ಕೇಂದ್ರ ಸರ್ಕಾರ ಇದರ ಅನುಗುಣವಾಗಿ ಮಾಹೆವಾರು ರಾಜ್ಯಕ್ಕೆ ಹಂಚಿಕೆ ಮಾಡಲಾಗಿದೆ ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ್ ಹೇಳಿದ್ದಾರೆ. ಏಪ್ರಿಲ್‌ನಿಂದ ಜೂನ್‌ವರೆಗೂ ವಿವಿಧ 12.5 ಲಕ್ಷ ಮೆಟ್ರಿಕ್ ಟನ್ ರಸಗೊಬ್ಬರಗಳ ಬೇಡಿಕೆ ಇದ್ದು, ಇಲ್ಲಿಯವರೆಗೆ 14.51 ಲಕ್ಷ ಮೆಟ್ರಿಕ್ ಟನ್ ವಿವಿಧ ರಸಗೊಬ್ಬರಗಳ ಸರಬರಾಜಾಗಿದೆ. ಅದರಲ್ಲಿ 7.34 ಲಕ್ಷ ಮೆಟ್ರಿಕ್ ಟನ್ ವಿತರಣೆಯಾಗಿದೆ. ಜಿಲ್ಲೆಗಳಲ್ಲಿ 7.16 ಲಕ್ಷ ಮೆಟ್ರಿಕ್ ಟನ್ ವಿವಿಧ ಗ್ರೇಡ್‌ಗಳ ರಸಗೊಬ್ಬರ ದಾಸ್ತಾನು ಇದೆ ಎಂಬುದು ಸರಕಾರದ ವಾದ. ಆದರೆ ಗೋದಾಮುಗಳಲ್ಲಿ ಸ್ಟಾಕ್ ಇಲ್ಲ ಎಂಬ ವರದಿಗಳು ಇದೇ ವೇಳೆ ಕೇಳಿ ಬರುತ್ತಿವೆ. ಇದೆ, ಇಲ್ಲ ಎಂಬ ಆಟದ ನಡುವೆ ರೈತ ದಿನನಿತ್ಯ ರಸಗೊಬ್ಬರ ಅಂಗಡಿಗಳಿಗೆ ಅಲಿದು ಅಲಿದೂ ಸುಸ್ತಾಗುತ್ತಿದ್ದಾನೆ.

50 ಮೂಟೆ ಅವಶ್ಯವಿರುವ ರೈತರಿಗೆ 10 ಮೂಟೆ ಮಾತ್ರ ಸಿಗುತ್ತಿದೆ. ಹೀಗಾದರೆ ಕೃಷಿ ಚಟುವಟಿಕೆಗಳಲ್ಲಿ ಮುಂದುವರಿಯುವುದು ಹೇಗೆ ಎಂಬುದು ಕೊಪ್ಪಳದ ರೈತ ಏಳುಕೋಶರವರ ಪ್ರಶ್ನೆಯಾಗಿದೆ. ರೈತರಿಗೆ ಅಗತ್ಯವಿದ್ದಾಗ ಯೂರಿಯಾ ಸಿಗಬೇಕು. ಬೇಡವಾದ ಸಮಯದಲ್ಲಿ ಯೂರಿಯಾ ನೀಡಿದರೆ ಉಪಯೋಗವಿಲ್ಲ. ರೈತರಿಗೆ ಪ್ರತಿ ವರ್ಷ ಇಷ್ಟು ಗೊಬ್ಬರ ಬೇಕೆಂದು ಅಂದಾಜು ಇಟ್ಟುಕೊಂಡು ತರಿಸುವ ವ್ಯವಸ್ಥೆ ಮಾಡಬೇಕಿತ್ತು. ಮಳೆ ಕೈಕೊಡುತ್ತಿದೆ ಎಂದು ಸ್ಪ್ರಿಂಕ್ಲರ್ ಜೆಟ್ ಬಳಸಿ ಬೆಳೆಗೆ ನೀರುಣಿಸುತ್ತಿವೆ. ಕೃಷಿ ಇಲಾಖೆ ಮತ್ತು ಸರಕಾರ ರೈತರ ಜೊತೆ ಆಟವಾಡುತ್ತಿದೆ ಎಂದು ಆರೋಪಿಸಿದ್ದಾರೆ.

ಸಬ್ಸಿಡಿ ದರದಲ್ಲಿ ರಸಗೊಬ್ಬರ ಸಿಗುತ್ತದೆ ನಿಜ, ಆದರೆ ಅಲ್ಲಿ ಸ್ಟಾಕ್ ಇರುವುದಿಲ್ಲ. ಅನಿವಾರ್ಯವಾಗಿ ಖಾಸಗಿ ಅಂಗಡಿಗಳಲ್ಲಿ ದುಪ್ಪಟ್ಟು ಹಣ ನೀಡಿ ಪಡೆಯುತ್ತಿದ್ದೇವೆ ಎಂದು ಇಲಕಲ್‌ನ ರೈತ ಸತ್ಯಪ್ಪ ಅಸಮಾಧಾನ ವ್ಯಕ್ತಪಡಿಸಿದ್ದಾರೆ. "ಸಾಲ ಮಾಡಿ ಬೀಜ ಹಾಕಿ ಉಳಿಮೆ ಮಾಡುತ್ತಿದ್ದೇವೆ. ಹೆಚ್ಚು ಕಡಿಮೆ ಒಂದು ತಿಂಗಳ ಅವಧಿಯ ಸಜ್ಜಿ, ಜೋಳ, ಹಾಗೂ ಗೋವಿನಜೋಳದ ಬೆಳೆಗಳು ಗೇಣುದ್ದ ಬೆಳೆದು ನಿಂತಿವೆ. ಬೆಳೆಯ ಕಸುವನ್ನು ಹೆಚ್ಚಿಸಲು ರಸಗೊಬ್ಬರ ನೀಡಲೇಬೇಕು. ರೈತರು ಸಾಲದ ಮೇಲೆ ಸಾಲ ಮಾಡುವ ಸ್ಥಿತಿಯನ್ನು ಸರಕಾರ ನಿರ್ಮಾಣ ಮಾಡಿದೆ. ಒಳ್ಳೆಯ ದಿನಗಳನ್ನು ಕೊಡುತ್ತೇವೆ ಎಂದವರು ಈಗ ನಮ್ಮನ್ನು ಕಷ್ಟದ ದಿನಗಳತ್ತ ತಳ್ಳುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ರಸಗೊಬ್ಬರವನ್ನು ಸಮರ್ಪಕವಾಗಿ ಹಂಚದೆ ಇರುವುದು ಈ ಸಮಸ್ಯೆಗೆ ಕಾರಣ ಎಂದು ರಸಗೊಬ್ಬರ ಅಂಗಡಿಯ ಮಾಲಿಕ ದೇವಪ್ಪಗೌಡ ಹೇಳುತ್ತಾರೆ. ಒಂದು ಪ್ರದೇಶದಲ್ಲಿ ಡಿಎಪಿ ಹೆಚ್ಚು ಬಳಸಿದರೆ ಇನ್ನೊಂದು ಪ್ರದೇಶದಲ್ಲಿ ಯೂರಿಯಾ ಹೆಚ್ಚು ಬಳಸುತ್ತಾರೆ. ಆದರೆ ದಾಸ್ತಾನಗಳಲ್ಲಿ ಎರಡು ಸರಿಯಾದ ಪ್ರಮಾಣದಲ್ಲಿ ಇರುವುದಿಲ್ಲ. ಕೃಷಿ ಇಲಾಖೆಯ ಅಧಿಕಾರಿಗಳು ಯಾವ ಭಾಗಕ್ಕೆ ಯಾವ ಗೊಬ್ಬರ ಹೆಚ್ಚು ಬಳಸುತ್ತಾರೆ ಎಂಬುದನ್ನು ಅರಿತು ಸರಬರಾಜು ಮಾಡುವ ಕೆಲಸ ಮಾಡಬೇಕಿದೆ. ಆನ್‌ಲೈನ್ ಲಿಂಕ್ ಮಾಡಿರುವ ಕಾರಣವೂ ಕೊರತೆ ಉಂಟಾಗುತ್ತಿದೆ ಎಂಬುದು ದೇವಪ್ಪಗೌಡರ ವಾದವಾಗಿದೆ.

ಇನ್ನಾದರೂ ಸರಕಾರ ತಾನೂ ರೈತಪರ ಎಂದು ಬಡಾಯಿ ಕೊಳ್ಳುವುದನ್ನು ನಿಲ್ಲಿಸಿ, ಅವರಿಗೆ ಅಗತ್ಯವಾಗಿ ಬೇಕಾದ ಬೀಜ, ಗೊಬ್ಬರಗಳನ್ನು ವಿತರಿಸುವ ಕೆಲಸ ಮಾಡಬೇಕಿದೆ. ರೈತ ಬೆಳದರೆ ಅನ್ನ, ಇಲ್ಲವಾದಲ್ಲ ರಾಜ್ಯದ ಜನ ಹೊಟ್ಟೆಗೆ ಮಣ್ಣು ತಿನ್ನಬೇಕಾಗುತ್ತದೆ ಎಂಬುದನ್ನು ಸರಕಾರ ಅರಿಯಬೇಕಿದೆ.

ಕೃಷಿ ಇಲಾಖೆ

ಲಭ್ಯತೆವಿರುವ ರಸಗೊಬ್ಬರ ದಾಸ್ತಾನು ವಿವರ (ದಿನಾಂಕ 10.06.2022 ರವರೆಗೆ) ಟನ್ ಗಳಲ್ಲಿ

1	2	3	4	5	6	7
ಕ್ರ. ಸಂ.	ಜಿಲ್ಲೆಗಳು	ಡಿ.ಎ.ಪಿ	ಎಂ.ಒ.ಪಿ	ಕಾಂಪ್ಲೆಕ್ಸ್	ಯೂರಿಯಾ	ಒಟ್ಟು
1	ಬಾಗಲಕೋಟೆ	3680	660	10100	17090	31530
2	ಬೆಂಗಳೂರು ಗ್ರಾಮಾಂತರ	840	70	4120	2320	7350
3	ಬೆಳಗಾಂ	9710	1330	24540	25040	60620
4	ಬಳ್ಳಾರಿ ಹಾಗೂ ವಿಜಯನಗರ	4750	200	20880	20300	46130
5	ಬೆಂಗಳೂರು ನಗರ	730	130	7660	5300	13820
6	ಬೀದರ್	3720	130	3020	4680	11550
7	ಬಿಜಾಪುರ	4490	420	8620	19780	33310
8	ಚಾಮರಾಜನಗರ	2200	380	4100	2450	9130
9	ಚಿಕ್ಕಬಳ್ಳಾಪುರ	860	90	5350	4170	10470
10	ಚಿಕ್ಕಮಗಳೂರು	2660	3300	11540	6930	24430
11	ಚಿತ್ರದುರ್ಗ	2310	260	5940	5200	13710
12	ದಕ್ಷಿಣ ಕನ್ನಡ	240	1200	6410	2640	10490
13	ದಾವಣಗೆರೆ	6030	840	17800	12630	37300
14	ಧಾರವಾಡ	2190	940	3280	6890	13300
15	ಗದಗ	1260	240	2090	2730	6320
16	ಕಲ್ಬುರ್ಗಿ	7350	460	6190	14520	28520
17	ಹಾಸನ	2130	2190	17800	11030	33150
18	ಹಾವೇರಿ	5700	1400	14830	16710	38640
19	ಕೊಡಗು	2010	1670	8920	4770	17370
20	ಕೋಲಾರ	780	60	3820	3540	8200
21	ಕೊಪ್ಪಳ	4090	440	11900	13990	30420
22	ಮಂಡ್ಯ	5090	580	15960	10540	32170
23	ಮೈಸೂರು	3440	1620	23590	12100	40750
24	ರಾಯಚೂರು	7500	320	18670	34750	61240
25	ರಾಮನಗರ	440	40	910	2030	3420
26	ಶಿವಮೊಗ್ಗ	5830	740	11860	11730	30160
27	ತುಮಕೂರು	2840	390	11580	6370	21180
28	ಉಡುಪಿ	360	380	1510	1210	3460
29	ಉತ್ತರ ಕನ್ನಡ	740	310	2130	3060	6240
30	ಯಾದಗಿರಿ	4260	280	9580	17730	31850
	ಒಟ್ಟು	98230	21070	294700	302230	716230

ಮಾರಣಾಂತಿಕ ಹೆದ್ದಾರಿ ಗುಂಡಿಗಳನ್ನು ತಕ್ಷಣ ಮುಚ್ಚಿಸಿ: ಡಿವೈಎಫ್ಐ

ಸುರತ್ಕಲ್ ನಿಂದ ಬಿ.ಸಿ. ರೋಡ್ ವರಗಿನ ರಾಷ್ಟ್ರೀಯ ಹೆದ್ದಾರಿಯಲ್ಲಿ ಬೃಹತ್ ಗಾತ್ರದ ಹೊಂಡಗಳು ನಿರ್ಮಾಣಗೊಂಡಿವೆ. ಗುಂಡಿ ತಪ್ಪಿಸಲು ಆಗದೆ ವಾಹನಗಳು ಅಪಘಾತಕ್ಕೀಡಾಗುವ, ದ್ವಿಚಕ್ರ ಸವಾರರು ರಸ್ತೆಗೆ ಉರುಳುವ ಘಟನೆಗಳು ದಿನ ನಿತ್ಯ ವರದಿಯಾಗುತ್ತಿದೆ. ಒಟ್ಟು ವಾಹನ ಸವಾರಿ ಪ್ರಾಣಕ್ಕೆ ಕುತ್ತು ತರುವ ಸ್ಥಿತಿ ನಿರ್ಮಾಣಗೊಂಡಿದ್ದರೂ ಜಿಲ್ಲಾಧಿಕಾರಿ, ಜನಪ್ರತಿನಿಧಿಗಳು ಮೌನ ವಹಿಸಿರುವುದು ಸರಿಯಲ್ಲ. ತಕ್ಷಣವೆ ಗುಂಡಿ ಮುಚ್ಚಿಸಬೇಕು. ಟೋಲ್ ಸುಂಕ ಸಂಗ್ರಹದ ರಸ್ತೆಯನ್ನು ನಿರ್ವಹಣೆ ಮಾಡದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳ ಮೇಲೆ ನಿಯಮದ ಪ್ರಕಾರ ಕ್ರಮ ಕೈಗೊಳ್ಳಬೇಕು ಎಂದು ಡಿವೈಎಫ್ಐ ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ಒತ್ತಾಯಿಸಿದೆ.

ಸುರತ್ಕಲ್ ನಂತೂರು ಟೋಲ್ ರಸ್ತೆಯ ನಿರ್ವಹಣೆಯ ಗುತ್ತಿಗೆ ಪಡೆದುಕೊಂಡಿರುವ ಏಜನ್ಸಿ ಮಳೆಗಾಲದ ಪೂರ್ವದಲ್ಲಿ ರಸ್ತೆ ನಿರ್ವಹಣೆಯ ಜವಾಬ್ದಾರಿ ನಿರ್ವಹಿಸದಿರುವುದರಿಂದ ಇಂದು ಹೆದ್ದಾರಿಯಲ್ಲಿ ಅಪಾಯಕಾರಿ ಸ್ಥಿತಿ ನಿರ್ಮಾಣಗೊಂಡಿದೆ. ದಿಢೀರ್ ಎದುರಾಗುವ ಗುಂಡಿಗಳಿಗೆ ದ್ವಿಚಕ್ರ ಸವಾರರು ಉರುಳಿ ಬೀಳುವುದು ದಿನನಿತ್ಯದ ವಿದ್ಯಮಾನವಾಗಿದೆ. ವಿಪರೀತ ಮಳೆಯ ಸಂದರ್ಭ ಸರಣಿ ಅಪಘಾತಗಳಿಗೆ ಹೆದ್ದಾರಿ ಗುಂಡಿಗಳು ಕಾರಣವಾಗುತ್ತಿದೆ. ಕೂಳೂರು ಸೇತುವೆಯಲ್ಲಿ ಸಾಮಾನ್ಯ ತೇಪೆ ಕೆಲಸ ನಡೆಯುವುದಿಲ್ಲ ಎಂದು ತಿಳಿದಿದ್ದರೂ ಸರಿಯಾದ ಗುಣಮಟ್ಟದ ಡಾಮರೀಕರಣವನ್ನು ಮಳೆಗಾಲಕ್ಕೆ ಮುಂಚಿತವಾಗಿ ಮಾಡದಿರುವುದರಿಂದ ಸೇತುವೆ ಪೂರ್ತಿ ಹೊಂಡಗಳು ತುಂಬಿವೆ. ವಾಹನಗಳು ಸೇತುವೆ ದಾಟುವುದೇ ದೊಡ್ಡ ಸಾಹಸದ ಕೆಲಸವಾಗಿದೆ. ಕಿಲೋ ಮೀಟರ್ ಗಟ್ಟಲೆ ಟ್ರಾಫಿಕ್ ಜಾಮ್ ಹಾಗೂ ಸೇತುವೆ ಕುಸಿಯುವ ಭೀತಿಗೆ ಕಾರಣವಾಗಿದೆ.

ಉಡುಪಿ ಜಿಲ್ಲೆಯ ಜಿಲ್ಲಾಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಅಲ್ಲಿನ ಹೆದ್ದಾರಿ ಗುಂಡಿಗಳ ಕುರಿತು ರಸ್ತೆ ನಿರ್ವಹಣೆಯ ಗುತ್ತಿಗೆ ಹೊಂದಿರುವ ನವಯುಗ ಕಂಪೆನಿಗೆ ಎಚ್ಚರಿಕೆ ನೀಡಿರುವುದು, ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳ ಸಭೆ ನಡೆಸಿ ತಕ್ಷಣ ದುರಸ್ತಿ ನಡೆಸದಿದ್ದರೆ ಟೋಲ್ ಸಂಗ್ರಹಕ್ಕೆ ತಡೆ ಒಡ್ಡುವ, ಅಪಘಾತ ನಡೆದು ಪ್ರಾಣಹಾನಿಯಾದರೆ ಅಧಿಕಾರಿಗಳ ಮೇಲೆ ಕೇಸು ದಾಖಲಿಸುವ ಎಚ್ಚರಿಕೆ ನೀಡಿರುತ್ತಾರೆ. ಆದರೆ ಮಂಗಳೂರಿನ ಈ ಭಾಗದ ಶಾಸಕರುಗಳಾದ ಭರತ್ ಶೆಟ್ಟಿ, ವೇದವ್ಯಾಸ ಕಾಮತರು ಹಾಗೂ ಜಿಲ್ಲಾಧಿಕಾರಿ ಹೆದ್ದಾರಿಯಲ್ಲಿ ತೀರಾ ಗಂಭೀರ ಸ್ಥಿತಿ ನಿರ್ಮಾಣ ಗೊಂಡಿದ್ದರೂ ಮೌನಕ್ಕೆ ಶರಣಾಗಿರುವುದು ಖಂಡನೀಯ, ಇದು ಸಂಬಂಧ ಪಟ್ಟವರ ಬೇಜವಾಬ್ದಾರಿತನವನ್ನು ಎತ್ತಿ ತೋರಿಸುತ್ತದೆ ಎಂದು ಡಿವೈಎಫ್ಐ ಆರೋಪಿಸಿದೆ.

ಸಾಮಾಜಿಕ ಅಸ್ವಸ್ಥತೆ ಮತ್ತು ಸನಾತನವಾದ

ಅತಿಥಿ ಅಂಕಣ



ವಿ.ಎನ್. ಲಕ್ಷ್ಮೀನಾರಾಯಣ

ಸಂಘಪರಿವಾರದ ನೇತಾರರು ಮತ್ತು ಕಾಲಾಳುಗಳಲ್ಲಿ ಸಮಾನವಾಗಿ ಕಂಡುಬರುವ ತಾತ್ವಿಕತೆ, ಪಿತೃಪ್ರಧಾನ ಸಾಮಾಜಿಕ ಮೌಲ್ಯಗಳು, ತಾರತಮ್ಯಯುಕ್ತ, ಶ್ರೇಣೀಕೃತ ಸಂಬಂಧಗಳು ಹಿಂದಿನ ಗುಲಾಮೀ ಸಮಾಜ ಮತ್ತು ಊಳಿಗಮಾನ್ಯ ಸಮಾಜದಲ್ಲಿ ತಮ್ಮ ಆಳವಾದ ಬೇರುಗಳನ್ನು ಹೊಂದಿವೆ. ಆದ್ದರಿಂದಲೇ ಸಂಘಪರಿವಾರವು ಯಾವಾಗಲೂ ಸನಾತನ ಧರ್ಮದ ಜಪ ಮಾಡುತ್ತದೆ. ವ್ಯಕ್ತಿಯು ಮಗುವಿನ ವಯಸ್ಸನ್ನು ಮೀರಿದ ಮೇಲೂ ವಸ್ತುನಿಷ್ಠತೆಯ ಮತ್ತು ಬೌದ್ಧಿಕ ಬೆಳವಣಿಗೆ ಆಗದಿದ್ದರೆ ಸಾಮಾಜಿಕ ಅಸ್ವಸ್ಥತೆ ಉಂಟಾಗುತ್ತದೆ

ಈ ಸನಾತನ ಅಸ್ವಸ್ಥತೆಗೆ ಮದ್ದಿಲ್ಲ ಎಂಬುದು ಅಪ್ರಿಯವಾದ ಕಟ್ಟು ಸತ್ಯ, ನಿಜ. ಆದರೆ ಭಾರತದ ಜನರ ಕಷ್ಟಕ್ಕೆ ಪರಿಹಾರವಿದೆ. ವೈಚಾರಿಕವಾದ, ವೈಜ್ಞಾನಿಕವಾದ ಆರೋಗ್ಯಕರವಾದ ಧೋರಣೆ–ಉದ್ದೇಶ ಮತ್ತು ಗ್ರಹಿಕೆಯುಳ್ಳ ಶ್ರಮಿಕ ಜನರು ಪಡೆಯಬೇಕಾದ ರಾಜಕೀಯ ಅಧಿಕಾರ, ಇಂದಾಗಲಿ, ಎಂದಾಗಲಿ ಸಾಂವಿಧಾನಿಕವಾಗಿ ಸಾಧ್ಯವಿರುವ ಏಕೈಕ ಪರಿಹಾರ. ಯಾವ ಬದಲಾವಣೆಯೂ ತಾನಾಗಿ ಆಗುವುದಿಲ್ಲ. ಬದಲಾವಣೆಯನ್ನು ಮಾಡಬೇಕು.

ಪ್ರಜ್ಞೆಯು ನಮ್ಮ ಸುತ್ತಲಿನ ಪ್ರಪಂಚದಲ್ಲಿನ ವಸ್ತುಗಳ ಅರಿವು ಮತ್ತು ಜ್ಞಾನದಿಂದ ರೂಪುಗೊಂಡಿದೆ. ಅದನ್ನು ತನಗಾಗಿ ಮತ್ತು ಇತರರಿಗಾಗಿ ದೈಹಿಕ ಸನ್ನೆ ಮತ್ತು ಶಾಬ್ದಿಕ ಸಂಜ್ಞೆಗಳ ಮೂಲಕ ವ್ಯಕ್ತಪಡಿಸುವ ವ್ಯವಸ್ಥೆಯನ್ನು ಭಾಷೆ ಎನ್ನುತ್ತೇವೆ. ಹೀಗಾಗಿ ಪ್ರಜ್ಞೆ ಮತ್ತು ಭಾಷೆ ಎರಡೂ ಸಾಮಾಜಿಕವಾದವುಗಳು.



ಜ್ಞಾನವೆಂದರೆ, ವಸ್ತುಗಳ ಜ್ಞಾನವೇ. ವಸ್ತುಗಳೆಲ್ಲವೂ ಒಂದಲ್ಲ ಒಂದು ರೀತಿಯಲ್ಲಿ ಸಾಮ್ಯತೆಯನ್ನು ಪಡೆದಿದ್ದರೂ, ಪರಸ್ಪರ ಸಂಬಂಧವನ್ನು ಹೊಂದಿದ್ದರೂ, ಒಂದು ವಸ್ತುವು ಮತ್ತೊಂದು ವಸ್ತುವಿಗಿಂತ ಭಿನ್ನ ಎಂದು ಅರಿಯುವುದೇ ಜ್ಞಾನ. 'ಕ್ಷೇತ್ರ ಕ್ಷೇತ್ರಜ್ಞಯೋರ್ಜ್ಞಾನಂ ಯತ್ತ ಜ್ಞಾನಂ ಮತಂ ಮಮ' (ನನ್ನ ಅಭಿಪ್ರಾಯದಲ್ಲಿ ಕ್ಷೇತ್ರ ಬೇರೆ, ಅದರ ಮಾಲೀಕನು ಬೇರೆ ಎಂಬ ಅರಿವೇ ಜ್ಞಾನ) ಎಂಬುದು ಭಗವದ್ಗೀತೆಯಲ್ಲಿ ವ್ಯಾಸನು ಕೃಷ್ಣನ ಬಾಯಲ್ಲಿ ಹೇಳಿಸುವ ಜ್ಞಾನದ ನಿರ್ವಚನ.

ಜ್ಞಾನವಂತಳಲ್ಲದ ತಾಯಿಗೆ ಮಗುವು ತನ್ನದೊಂದು ಭಾಗ ಎಂಬ ಭಾವನೆ ಬಲವಾಗಿರುತ್ತದೆ. ಜ್ಞಾನ ಇನ್ನೂ ಬಲಗೊಳ್ಳದ ಮಗುವಿಗೆ ಇಡೀ ಪ್ರಪಂಚ ತಾನೇ ಎಂಬ 'ಅದ್ವೈತ' ಭಾವವಿರುತ್ತದೆ. ಇಂಥ ಮನಸ್ಥಿತಿಯನ್ನು ಬೆಳೆದವರಲ್ಲಿಯೂ ತಾತ್ವೀಕರಿಸುವ ಅದ್ವೈತ ಮತವು 'ವ್ಯಕ್ತಿಯ ಬಿಡುಗಡೆಯಲ್ಲಿ ವಿಶ್ವದ ಬಿಡುಗಡೆ ಇದೆ' ಎಂಬ ತಲೆಕೆಳಗು ದೃಷ್ಟಿಯನ್ನು ಪ್ರತಿಪಾದಿಸುತ್ತದೆ. ಭಾವನಾವಾದದಿಂದ ಬಿಡಿಸಿಕೊಳ್ಳದ ಕಾಲ್ಪನಿಕ ಸಮಾಜವಾದವು ತನ್ನ ವ್ಯಕ್ತಿನಿಷ್ಠ ಸಮಾಜವಾದೀ ಬಿಡುಗಡೆಯನ್ನು ಪ್ರತಿಪಾದಿಸುವುದೂ ಸಹ ಈ ನೆಲೆಯಿಂದಲೇ.

ಮಾತೃಪ್ರಧಾನ ಕುಟುಂಬದ ಸಾಮಾಜಿಕ ಬೇರುಗಳನ್ನು ಹೊಂದಿರುವ ಅದ್ವೈತ ಮತದ 'ಸರ್ವಂ ಖಲ್ವಿದಂ ಬ್ರಹ್ಮ (ಎಲ್ಲವೂ ಬ್ರಹ್ಮವೇ) ಎಂಬ ದೃಷ್ಟಿಯಲ್ಲಿ ಸಕಲ ಚರಾಚರಗಳ ನಡುವೆ ತಾತ್ವಿಕಮಟ್ಟದ ಸಮಾನತೆ ಇದೆ. ಆದರೆ ಅದ್ವೈತ ಮತದ ಪ್ರಕಾರವೇ ಲೌಕಿಕವಾಗಿ ಅಂದರೆ, ಸಾಮಾಜಿಕವಾಗಿ ಅಸಮಾನತೆ ಸಹಜವಾದದ್ದು. ಪಿತೃಪ್ರಧಾನ ಕುಟುಂಬದ ಸಾಮಾಜಿಕ ಹಿನ್ನೆಲೆಯ ದ್ವೈತಮತದ ತಾತ್ವಿಕತೆಯ ಪ್ರಕಾರ ಸಕಲ ಚರಾಚರಗಳ ನಡುವೆ ತಾತ್ವಿಕವಾಗಿಯೂ ಮತ್ತು ಸಾಮಾಜಿಕವಾಗಿಯೂ ಇರುವ ಅಸಮಾನತೆ ನೈಸರ್ಗಿಕವಾದದ್ದು ಮತ್ತು ಸರಿಯಾದದ್ದು. ದ್ವೈತ ಮತದ ಸಾಮಾಜಿಕ ಆಚರಣೆಯಲ್ಲಿ ಕಾಣಿಸುವ ನೈಷ್ಠಿಕ ಕಠೋರತೆಗಳು ಮತ್ತು ಇತರ ಮತ–ಧರ್ಮಗಳ ಬಗೆಗಿನ ತಾತ್ವಿಕ ಅಸಹನೆ, ಅದರ ಪಿತೃಪ್ರಧಾನ ಕುಟುಂಬದ ಹಿನ್ನೆಲೆಯ ಕಾರಣದಿಂದಾಗಿ ಬಂದಿರಬಹುದು. ದ್ವೈತಮತವನ್ನು ವೈಷ್ಣವ ಮತ ಎಂದೂ ಕರೆಯುತ್ತಾರೆ.

ಪಿತೃಪ್ರಧಾನ ಕುಟುಂಬದ ಸದಸ್ಯರಲ್ಲಿ ತಂದೆಯು ಎಲ್ಲರಿಗಿಂತಲೂ ದೊಡ್ಡವನು ಎಂಬ ಶ್ರೇಣೀಕೃತ ಕೌಟುಂಬಿಕ ಸಂಬಂಧವಿದೆ. ತಂದೆಯು ತನಗೆ ಮಾತ್ರವಲ್ಲ ತನ್ನ ತಾಯಿಗೂ ರಕ್ಷಕನೇ ಎಂಬ ಭಾವನೆ ಅಲ್ಲಿ ಬೆಳೆಯುವ ಮಕ್ಕಳಲ್ಲಿ ಸಹಜವಾಗಿ ಇರುತ್ತದೆ. ಈ ದೃಷ್ಟಿಯನ್ನು ಆಧರಿಸಿದ ದ್ವೈತಮತದಲ್ಲಿ ಕುಟುಂಬದ ಹಿರಿಯನಾದ ತಂದೆಯಂತೆ, ಸೃಷ್ಟಿಯ ಹಿರಿಯರಾದ ತ್ರಿಮೂರ್ತಿಗಳಲ್ಲಿ ವಿಷ್ಣು ಸರ್ವೋತ್ತಮ. ಜೀವ–ದೇವರ ನಡುವಿನ ಭಿನ್ನತೆ, ಜೀವ–ಜೀವದ ನಡುವಿನ ಭಿನ್ನತೆ, ಜೀವ–ಜಡದ ನಡುವಿನ ಭಿನ್ನತೆ, ದೇವರು–ಜಡದ ನಡುವಿನ ಭಿನ್ನತೆ ಮತ್ತು ಜಡ–ಜಡದ ನಡುವಿನ ಭಿನ್ನತೆಗಳು ಕೇವಲ ಭಿನ್ನತೆಗಳಾಗಿರದೆ ಶಾಶ್ವತವಾದ ಶ್ರೇಷ್ಠ–ನೀಚ ಎಂಬ ತಾರತಮ್ಯದಿಂದ ಕೂಡಿವೆ.

ಮಕ್ಕಳು ತಂದೆಯ ಅಂಶಗಳಾಗಿರುವಂತೆ, ಮನುಷ್ಯರು ದೇವರ ಅಂಶಗಳು. ಆದರೆ, ಅವರೇ ದೇವರಲ್ಲ, ಅಲ್ಲದೆಯೂ ಅಲ್ಲ, ದೇವರಲ್ಲಿ ಪ್ರಪತ್ತಿ (ಸಂಪೂರ್ಣ ಶರಣಾಗತಿ)ಯೊಂದೇ ಸಂಸಾರದಿಂದ (ಅಂದರೆ ಬಡತನ ಮುಂತಾದ ಕಷ್ಟ ಕೋಟಲೆಗಳಿಂದ) ಬಿಡುಗಡೆ ಪಡೆಯಲು ದಾರಿ ಎಂದು ಪ್ರತಿಪಾದಿಸುವ ವಿಶಿಷ್ಟಾದ್ವೈತವು ತ್ರಿಮೂರ್ತಿಗಳಲ್ಲಿ ಶ್ರೇಷ್ಠನಾದ ವಿಷ್ಣುವಿಗೆ ಶರಣಾಗಿ ಯಾರು ಬೇಕಾದರೂ ಮುಕ್ತಿ ಪಡೆಯಬಹುದು ಎಂದು ನಂಬುತ್ತದೆ. ಶ್ರೇಣೀಕೃತ ಜಾತಿ ವ್ಯವಸ್ಥೆಯಲ್ಲಿ ಬ್ರಾಹ್ಮಣರು ತುತ್ತತುದಿಯಲ್ಲೂ ಚಂಡಾಲರು ಅತ್ಯಂತ ಕೆಳಗಿರುವವರು ಎಂದಾದರೂ ವಿಷ್ಣುವಿಗೆ ಶರಣಾಗಿ ವೈಷ್ಣವರಾದವರು ಈ ಶ್ರೇಣೀಕರಣದಿಂದ ಪಾರಾಗುತ್ತಾರೆ.

ಭಾಗವತ ಮತ್ತು ವಿಷ್ಣುಪುರಾಣಗಳಲ್ಲಿ ನಮೂದಿಸಿರುವಂತೆ ಧರ್ಮಸಂಸ್ಥಾಪನೆಗಾಗಿ ವಿಷ್ಣುವು ಎತ್ತಿದ ಅವತಾರಗಳ ಸಂಖ್ಯೆ 12. ಅವುಗಳಲ್ಲಿ ರಾಮ ಮತ್ತು ಕೃಷ್ಣರ ಅವತಾರಗಳನ್ನು ಬಿಟ್ಟು ಉಳಿದ ಹತ್ತು ಅವತಾರಗಳು ಕೇವಲ ಸಾಂದರ್ಭಿಕವಾಗಿ ಬಿಡಿ ಸಮಸ್ಯೆಗಳನ್ನು ಪರಿಹರಿಸಲು ಎತ್ತಿದ ಅಂಶಾವತಾರಗಳು. ರಾಮ ಮತ್ತು ಕೃಷ್ಣರ ಅವತಾರಗಳು ಮಾತ್ರ ಪೂರ್ಣಾವತಾರಗಳು. ಅಂದರೆ ವಿಷ್ಣುವು ಭೂಮಿಯ ಮೇಲೆ ಮನುಷ್ಯರಂತೆ ಹುಟ್ಟಿ, ಬೆಳೆದು, ಮದುವೆಯಾಗಿ, ರಾಜ್ಯಭಾರ ಮಾಡಿ, ದೇವತೆಗಳ ದಾಯಾದಿಗಳಾದ ರಾಕ್ಷಸರೊಂದಿಗೆ ಯುದ್ಧಮಾಡಿ ಮನುಷ್ಯರಂತೆಯೇ ಕಷ್ಟ–ನಷ್ಟ–ಅವಮಾನಗಳನ್ನು ಅನುಭವಿಸಿ ಕೊನೆಗೆ ದುಃಖ ಅಸಹಾಯಕತೆಯನ್ನು ಅನುಭವಿಸುತ್ತಾ ಅವಸಾನ ಹೊಂದಿದ ಅವತಾರಗಳು.



ಸನಾತನವಾದ

ಭಾರತದ ಪೌರಾಣಿಕ ಕಥನಗಳಲ್ಲಿ ಬ್ರಾಹ್ಮಣರು ಸರ್ವಶ್ರೇಷ್ಠರು. ಬ್ರಹ್ಮ ಎಂದರೆ ಎಲ್ಲಕ್ಕಿಂತಾ ದೊಡ್ಡದು ಎಂಬ ಅರ್ಥವನ್ನು ಕೊಡುವ ಗುಣವಾಚಕ ಶಬ್ದ. ಬ್ರಹ್ಮಜ್ಞಾನ, ಬ್ರಹ್ಮಾನಂದ, ಬ್ರಹ್ಮರಥ, ಬ್ರಹ್ಮಕಳಶ, ಬ್ರಹ್ಮರಾಕ್ಷಸ, ಹೀಗೆ ಬ್ರಹ್ಮ ಪದವನ್ನು ಎಲ್ಲೆಲ್ಲಿ ಬಳಸಲಾಗಿದೆಯೋ ಅಲ್ಲೆಲ್ಲಾ ಅದು ಅತ್ಯಂತ ದೊಡ್ಡದು ಎಂಬ ಅರ್ಥವನ್ನೇ ಕೊಡುತ್ತದೆ. ಬ್ರಾಹ್ಮಣರು ಭಾರತದ ಚಾತುರ್ವರ್ಣದ ಶ್ರೇಣಿಯಲ್ಲಿ ಎಲ್ಲರಿಗಿಂತಾ ಮೇಲಿದ್ದು ಬ್ರಹ್ಮಜ್ಞಾನದ ವಾರಸುದಾರರಾಗಿದ್ದವರು. ಅಂಥ ಬ್ರಾಹ್ಮಣನಾದ ಜಮದಗ್ನಿಯ ಮೇಲೆ ಕ್ಷತ್ರಿಯ ರಾಜನೊಬ್ಬನು ಮಾಡಿದ ದೌರ್ಜನ್ಯಕ್ಕಾಗಿ ಇಡೀ ಕ್ಷತ್ರಿಯ ಕುಲವನ್ನೇ ನಾಶಮಾಡಲು ಕೊಡಲಿ ಹಿಡಿದು ಅವರೊಂದಿಗೆ ಯುದ್ಧಮಾಡಿದವನು ಅವನ ಮಗ ಪರಶುರಾಮ. ಅವನು ಬ್ರಹ್ಮಜ್ಞಾನ ಮತ್ತು ಕ್ಷಾತ್ರಬಲ ಎರಡನ್ನೂ ಪಡೆದ ವಿಷ್ಣುವಿನ ಅವತಾರ. ಅಂಥವನ ಅವತಾರ ಮತ್ತೊಬ್ಬ ಕ್ಷತ್ರಿಯನಾದ ಬಿಲ್ಲು ಹಿಡಿದ ರಾಮನಿಂದ ಕೊನೆಗೊಂಡಿತು.

ಸಂಘ ಪರಿವಾರವೆಂಬ ಹಡಗಿನ ಚುಕ್ಕಾಣಿಯನ್ನು ಕೈಯಲ್ಲಿಟ್ಟುಕೊಂಡ ಮಹಾರಾಷ್ಟ್ರದ ಚಿತ್ಪಾವನ ಬ್ರಾಹ್ಮಣರು ಪರಶುರಾಮನನ್ನು ತಮ್ಮ ಮೂಲ ಪುರುಷ ಎಂದು ನಂಬುತ್ತಾರೆ. ಪರಶುರಾಮನಂತೆ ತಾವೂ ಸಹ ಬ್ರಹ್ಮತೇಜಸ್ಸು ಮತ್ತು ಕ್ಷಾತ್ರಬಲ ಎರಡನ್ನೂ ಪಡೆದವರಾದ್ದರಿಂದ ತಾವೇ ಭಾರತವನ್ನು ಆಳಲು ತಕ್ಕವರು ಎಂಬ ಸಮರ್ಥನೆಯನ್ನು ಕೊಡುತ್ತಾರೆ. ಅವರ ಪ್ರಕಾರ ಸನಾತನ ಧರ್ಮ ಎಂದರೆ ಬ್ರಾಹ್ಮಣ ಧರ್ಮವೇ. ಹಿಂದೂಗಳ ದೇಶವಾದ ಹಿಂದೂಸ್ತಾನದಲ್ಲಿ ಹಿಂದುಗಳು ಮಾತ್ರ ಇರಬೇಕು ಎಂದು ಪ್ರತಿಪಾದಿಸುವುದೇ ಹಿಂದುತ್ವ. ಅವರ ಪ್ರಕಾರ ಇದು ಹೇಗೆ ಸಾಧ್ಯವೆಂದರೆ ಭಾರತದಲ್ಲಿ ಇರುವವರೆಲ್ಲರೂ ಹಿಂದೂಗಳಾಗಬೇಕು. ಅಥವಾ ಹಿಂದೂಗಳಲ್ಲದವರು, ಅನ್ಯ ಧರ್ಮೀಯರು, ಅಂದರೆ ಧಾರ್ಮಿಕ ಅಲ್ಪ ಸಂಖ್ಯಾತರು, ಅದರಲ್ಲೂ ಮುಸ್ಲಿಮರು ಮತ್ತು ಕ್ರೈಸ್ತರು ದೇಶಬಿಟ್ಟು ಹೋಗಬೇಕು. ಈ ರಾಜಕೀಯ ಗುರಿಯನ್ನು ಸಾಧಿಸಲು ರಾಮ ಮತ್ತು ಕೃಷ್ಣರ ಹೆಸರಿನಲ್ಲಿ ರಥಯಾತ್ರೆಗಳು, ಬಾಬ್ರಿ ಮಸೀದಿಯ ಧ್ವಂಸ, ದೇವಸ್ಥಾನಗಳ ನಿರ್ಮಾಣ ಮುಂತಾದುವನ್ನು ಹಿಂದುತ್ವ ರಾಜಕೀಯದ ಭಾಗವಾಗಿ ಮಾಡುತ್ತಾರೆ. ಕೋಮು ರಾಜಕೀಯ, ಸನಾತನ ಧರ್ಮ–ಹಿಂದೂ ಸಂಸ್ಕೃತಿಯ ರಕ್ಷಣೆ–ಪುನರುದ್ಧಾರ ಉದ್ದೇಶದ ಹಿಂದೂ ಮಹಾಸಭಾ, ವಿಶ್ವ ಹಿಂದೂ ಪರಿಷತ್ ರಾಮನ ದಾಸನಾದ ಹನುಮಂತನ ಹೆಸರಿನಲ್ಲಿ ಭಜರಂಗದಳ ಮುಂತಾದ ವಿವಿಧ ಸೇನೆಗಳು, ಸಂಘಟನೆಗಳು, ವಿವಿಧ ಉದ್ದೇಶಗಳ ಸಂಸ್ಥೆಗಳು, ವಿವಿಧ ವಯಸ್ಸಿನ, ವಿವಿಧ ಹಿನ್ನೆಲೆಯ, ಜೀವನ ಶೈಲಿಯ ಜನರನ್ನು ಧರ್ಮ–ಸಂಸ್ಕೃತಿಯ ಹೆಸರಿನಲ್ಲಿ ಸಂಘಟಿಸಲು ವಿವಿಧ ಹೆಸರುಗಳಲ್ಲಿ ಹುಟ್ಟುತ್ತಲೇ ಇವೆ. ಇಂಥ ಮನಸ್ಥಿತಿಯ ಎಲ್ಲ ವಯಸ್ಸಿನ ಜನರು ಸಂಘಪರಿವಾರದ ಸಂಘಟನೆಗಳ ಸದಸ್ಯರಾಗಿ, ಕಾರ್ಯಕರ್ತರಾಗಿ, ಉದ್ಯೋಗಿಗಳಾಗಿ ವಿವಿಧ ಬಗೆಯ ಫಲಾನುಭವಿಗಳಾಗಿ ಕಳೆದ ಆರೇಳು ದಶಕಗಳಿಂದಲೂ ದುಡಿಯುತ್ತಾ ಭಾರತದ ಈಗಿನ ರಾಜಕೀಯ ಸ್ಥಿತಿಯು ನಿರ್ಮಾಣವಾಗಿದೆ.

ಸಾಮಾಜಿಕ ಅಸ್ವಸ್ಥತೆ

ಮಗು ಬೆಳೆಯುವುದೆಂದರೆ ತಾಯಿ–ಮಗು ಇಬ್ಬರಲ್ಲೂ ಇರಬಹುದಾದ 'ತಾನೇ ಪ್ರಪಂಚ', 'ಮಗು ನನ್ನ ಭಾಗ' ಎಂಬ ಭಾವನೆಗಳಲ್ಲಿ ಆಗುವ ಬದಲಾವಣೆ. ಅಂದರೆ, ವಾಸ್ತವಿಕವಾಗಿ ತಾವು ಒಂದು ಕುಟುಂಬವಾಗಿ ಮತ್ತು ಸಮುದಾಯವಾಗಿ ಪ್ರಪಂಚದೊಂದಿಗೆ ಮತ್ತು ಪರಸ್ಪರವಾಗಿ ಅವಲಂಬನದ – ಸಹಕಾರದ ನಂಟನ್ನು ಹೊಂದಿದ್ದು, ತಮ್ಮಷ್ಟಕ್ಕೇ ಭಿನ್ನರೂ, ಸಾಪೇಕ್ಷವಾಗಿ ಸ್ವತಂತ್ರರೂ ಆಗಿದ್ದೇವೆಂದು ಕಂಡುಕೊಳ್ಳುತ್ತಾ ಬದುಕನ್ನು ಕಟ್ಟಿಕೊಳ್ಳುವುದು. ಇದನ್ನೇ ವ್ಯಕ್ತಿಯ ಸಾಮಾಜೀಕರಣ ಎನ್ನುತ್ತಾರೆ. ಯಾವುದೇ ಕಾರಣಕ್ಕಾಗಿ ಈ ಬದಲಾವಣೆಯು ತಾಯಿ ಅಥವಾ ಮಗುವಿನಲ್ಲಿ, ಅಥವಾ ಇಬ್ಬರಲ್ಲಿಯೂ ಸರಿಯಾಗಿ ಆಗದಿದ್ದರೆ, ಅಂಥವರು ಸದಾ ಅಭದ್ರತೆಯಿಂದ, ಅಕಾರಣವಾದ ಆತಂಕದಿಂದ, ಮನುಷ್ಯರ ಮೇಲೆ ನಂಬಿಕೆ ಪ್ರೀತಿ–ವಿಶ್ವಾಸಗಳು ಇಲ್ಲದಂಥ ಸಾಮಾಜಿಕ ಅಸ್ವಸ್ಥತೆಯಿಂದ ನರಳುತ್ತಾರೆ. ಇತರರನ್ನೂ ನರಳಿಸುತ್ತಾರೆ. ಕೇವಲ ನಂಬಿಕೆಯ ಆಧಾರದ ಮೇಲೆ ನಿಂತ ಸರ್ವಶಕ್ತ ದೇವರೆನ್ನುವ ಅತಿಮಾನುಷ ಶಕ್ತಿಗೆ ಶರಣಾಗುತ್ತಾರೆ. ಅಂಥ ದೇವರ ಪ್ರತೀಕವಾದ ವ್ಯಕ್ತಿಗಳನ್ನು ಆರಾಧಿಸುತ್ತಾರೆ. ತಮಗಿಂತ ಚಿಕ್ಕವರು ಅಥವಾ ದುರ್ಬಲರು ತಮಗೆ ಸದಾ ವಿಧೇಯರಾಗಿರಬೇಕೆಂದು ಬಯಸುತ್ತಾರೆ. ಹಣ, ಅಧಿಕಾರ ಸಿಕ್ಕಾಗ ಅವರಲ್ಲಿ ತಾನು ಹೇಳಿದಂತೆಯೇ ಎಲ್ಲರೂ ಕೇಳಬೇಕೆಂದು, ತಾನು ಹೇಳಿದ್ದೇ ಸರಿ ಮತ್ತು ಸತ್ಯವೆಂದೂ, ಭಿನ್ನ ಮತ, ಭಿನ್ನ ಧೋರಣೆ, ಭಿನ್ನ ಆಲೋಚನೆ ಇರಲೇಬಾರದೆಂದೂ ನಂಬುವ ಸಾಮಾಜಿಕ ವ್ಯಕ್ತಿತ್ವ ರೂಪುಗೊಳ್ಳುತ್ತದೆ. ಅಂಥವರಿಗೆ ರಾಜಕೀಯ ಅಧಿಕಾರ ಸಿಕ್ಕರೆ, ತನ್ನಂತೆಯೇ ಇರುವ ಜನರನ್ನು ಸಂಘಟಿಸಿ ಇತರರನ್ನು ಆಳುತ್ತಾ, ಕೊನೆಗೆ ಅಂಥ ಆಳ್ವಿಕೆಯೇ ಸರ್ವಾಧಿಕಾರವಾಗಿ, ಸಂಘಟನಾತ್ಮಕವಾಗಿ ಫ್ಯಾಸೀವಾದವಾಗಿ ಸಮಾಜವನ್ನು ವ್ಯಾಪಿಸುತ್ತದೆ. ಭಿನ್ನಮತದ ಬಗೆಗಿರುವ ಅಸಹನೆಯು ಅಂತಿಮವಾಗಿ ದ್ವೇಷವಾಗಿ ಭಿನ್ನ ಮತದ, ಭಿನ್ನ ಧೋರಣೆಯ ವ್ಯಕ್ತಿಗಳ ನಿರ್ನಾಮವನ್ನು ಬಯಸುತ್ತದೆ.



ಅಂಥ ಮನಸ್ಥಿತಿ ಮತ್ತು ನಡವಳಿಕೆಗಳು ಸಾಮಾಜಿಕ ಮತ್ತು ಮಾನಸಿಕ ಅಸ್ವಸ್ಥತೆಯ ಲಕ್ಷಣ. ಅಂಥವರಿಗೆ ಬೇರೆಯವರ ನೋವು–ನರಳಿಕೆಗಳು ತಟ್ಟುವುದೇ ಇಲ್ಲ.

ಮಗುವಿನ ಮಾನಸಿಕ ಮತ್ತು ಸಾಮಾಜಿಕ ಬೆಳವಣಿಗೆಯಲ್ಲಿ ಎರಡು ಪ್ರಮುಖ ಅಂಶಗಳಿವೆ. ಒಂದು, ವಸ್ತುನಿಷ್ಠತೆ (ಆಬ್ಜೆಕ್ಟಿವಿಟಿ)ಯ ವಿಕಾಸ. ಅಂದರೆ, ವಸ್ತುಗಳು, ಮತ್ತು ವ್ಯಕ್ತಿಗಳು, ಒಟ್ಟಿನಲ್ಲಿ ಪ್ರಪಂಚವು ತನಗಿಂತ ಬೇರೆ ಮತ್ತು ತನ್ನಿಂದ ಸ್ವತಂತ್ರ ಅಸ್ತಿತ್ವವನ್ನು ಪಡೆದ ವಾಸ್ತವವಾಗಿದೆ ಎಂಬ ತಿಳುವಳಿಕೆಯ ಬೆಳವಣಿಗೆ. ಎರಡು, ವಸ್ತು ಮತ್ತು ವ್ಯಕ್ತಿಗಳು ಒಂದೇ ರೀತಿಯಲ್ಲಿ ಕಂಡರೂ ಅವೆಲ್ಲವೂ, ಅವರೆಲ್ಲರೂ ಪರಸ್ಪರ ಅನನ್ಯ ಮತ್ತು ವಿಶಿಷ್ಟ ಎಂದು ಗುರುತಿಸುವ ಬೌದ್ಧಿಕಶಕ್ತಿಯ ಬೆಳವಣಿಗೆ. ವ್ಯಕ್ತಿಯು ಮಗುವಿನ ವಯಸ್ಸನ್ನು ಮೀರಿದ ಮೇಲೂ ಇವುಗಳ ಬೆಳವಣಿಗೆ ಆಗಿಲ್ಲವೆಂದರೆ, ಹೊರನೋಟಕ್ಕೆ ಯಾವ ನ್ಯೂನತೆಯೂ ಕಾಣುವುದಿಲ್ಲವಾದ್ದರಿಂದ ಅಂಥ

ಪುಟ 14 ಕ್ಕೆ

ಬಿಜೆಪಿ ಯುಗ: ಏಕ ಪಕ್ಷ ಸರ್ವಾಧಿಕಾರದತ್ತ

ಪ್ರಕಾಶ್ ಕಾರಟ್



ಹೈದರಾಬಾದ್‌ನಲ್ಲಿ ಜುಲೈ 2 ಹಾಗೂ 3 ರಂದು ನಡೆದ ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಮಾತನಾಡಿದ ಕೇಂದ್ರ ಗೃಹ ಸಚಿವ ಅಮಿತ್ ಷಾ, ದೇಶದಲ್ಲಿ ಏಕ ಪಕ್ಷ ಸರ್ವಾಧಿಕಾರ ಸ್ಥಾಪಿಸುವ ಇಂಗಿತವನ್ನು ಸ್ಪಷ್ಟವಾಗಿ ಹೊರಹಾಕಿದ್ದಾರೆ. ಭಾರತದಲ್ಲಿ ಮುಂದಿನ 30ರಿಂದ 40 ವರ್ಷ ಬಿಜೆಪಿಯ ಯುಗವಾಗಿರುತ್ತದೆ ಎಂದು ರಾಜಕೀಯ ಗೊತ್ತುವಳಿ ಮಂಡಿಸಿದ ಷಾ ಹೇಳಿದ್ದಾರೆ. ಥರ್ಡ್ ರೀಚ್‌ನಂತೆ ಮುಂದಿನ ಸಾವಿರ ವರ್ಷ ಬಿಜೆಪಿ ಆಡಳಿತವಿರುತ್ತದೆ ಎಂದು ಅವರು ಹೇಳದಿರುವುದು ದೊಡ್ಡ ಪುಣ್ಯ!

ಆದರೆ, ಭಾರತವನ್ನು ಏಕ–ಪಕ್ಷ ಹಿಂದೂತ್ವ ಸರ್ವಾಧಿಕಾರಿ ದೇಶವನ್ನಾಗಿ ಪರಿವರ್ತಿಸಲು ಮೂರು–ನಾಲ್ಕು ದಶಕಗಳ 'ಬಿಜೆಪಿ ಯುಗ'ವೇ ಸಾಕಾಗುತ್ತದೆ. ಬಂಗಾಳ ಮತ್ತು ತೆಲಂಗಾಣದಲ್ಲಿ ಕುಟುಂಬ ಆಡಳಿತವನ್ನು ಬಿಜೆಪಿ ಅಂತ್ಯಗೊಳಿಸುವುದಾಗಿಯೂ ಆಂಧ್ರ ಪ್ರದೇಶ, ತಮಿಳುನಾಡು, ಒಡಿಶಾ ಮತ್ತು ಕೇರಳದಲ್ಲಿ ಅಧಿಕಾರಕ್ಕೆ ಬರುವುದಾಗಿಯೂ ಷಾ ಬೊಗಳೆ ಕೊಚ್ಚಿದ್ದಾರೆ. ಮಹಾರಾಷ್ಟ್ರದಲ್ಲಿ ಮಹಾ ವಿಕಾಸ್ ಆಘಾಡಿಯ (ಎಂವಿಎ) ಸರಕಾರವನ್ನು ಉರುಳಿಸಿ ಬಿಜೆಪಿ–ನಿಯಂತ್ರಣದ ಸರಕಾರವನ್ನು ಪ್ರತಿಷ್ಠಾಪಿಸಿದ ಹುಮ್ಮಸ್ಸಿನಲ್ಲಿ ಅವರ ಈ ವಿಶ್ವಾಸಭರಿತ 'ಆಪರೇಷನ್ ಕ್ಯಾಪ್ಚರ್' (ಅಧಿಕಾರ ಗ್ರಹಣ) ಹೇಳಿಕೆ ಹೊರಬಿದ್ದಿರುವುದು ಸ್ಪಷ್ಟವಾಗಿದೆ. ಬಿಜೆಪಿಯೇತರ ಸರಕಾರಗಳನ್ನು ಅಸ್ಥಿರಗೊಳಿಸುವ ಪ್ರಕ್ರಿಯೆಯನ್ನು ಮಹಾರಾಷ್ಟ್ರದಲ್ಲಿ ಹೊಸ ಔನ್ನತ್ಯಕ್ಕೆ ಒಯ್ಯಲಾಗಿದೆ. ಅದು ಶಾಸಕರಿಗೆ ಲಂಚ ನೀಡಿಕೆ ಮತ್ತು ಕುದುರೆ ವ್ಯಾಪಾರಕ್ಕಷ್ಟೇ ಸೀಮಿತವಾಗಿಲ್ಲ. ಈ ಸಾಂಪ್ರದಾಯಿಕ ವಿಧಾನಗಳ ಜೊತೆಯಲ್ಲಿ, ಶಿವ ಸೇನೆ ಮತ್ತು ರಾಜ್ಯ ಸರಕಾರವನ್ನು ಒಡೆಯಲು ಪ್ರಭುತ್ವ ಮತ್ತು ಅದರ ಸಂಸ್ಥೆಗಳನ್ನು ಸಂಪೂರ್ಣವಾಗಿ ಬಳಸಿಕೊಳ್ಳಲಾಗಿದೆ.

ಮಹಾರಾಷ್ಟ್ರದಲ್ಲಿ ಸರಕಾರ ಉರುಳಿಸುವ ಕಾರ್ಯಾಚರಣೆ ಒಂದೊಂದಾಗಿಯೇ ತೆರೆದುಕೊಳ್ಳುತ್ತಿರುವಂತೆ, ಶಿವ ಸೇನೆ ಶಾಸಕರನ್ನು ಅನರ್ಹಗೊಳಿಸದಿರುವ ಮೂಲಕ ಸುಪ್ರೀಂ ಕೋರ್ಟ್ ಅವರ ಪಕ್ಷಾಂತರಕ್ಕೆ ಅವಕಾಶ ಮಾಡಿಕೊಟ್ಟಿತು. ಅನರ್ಹಗೊಳಿಸಬಾರದೇಕೆ ಎಂದು ಕಾರಣ ಕೇಳಿ 16 ಶಾಸಕರಿಗೆ ಉಪ ಸ್ಪೀಕರ್ ನೀಡಿದ್ದ ನೋಟಿಸ್‌ಗೆ ಕೋರ್ಟ್ ತಡೆ ನೀಡಿತು. ಉತ್ತರ ನೀಡುವ ಅವಧಿಯನ್ನು ಸುಪ್ರೀಂ ಕೋರ್ಟ್ ಎರಡು ವಾರಕ್ಕಿಂತ ಹೆಚ್ಚು ಕಾಲ ವಿಸ್ತರಿಸಿತು. ಇದರಿಂದಾಗಿ ಇಡೀ ಪ್ರಕ್ರಿಯೆ ಪ್ರಯೋಜನವಿಲ್ಲದಂತಾಯಿತು. ಇದು ಪಕ್ಷಾಂತರ–ನಿಷೇಧ ಕಾನೂನಿನ ಉದ್ದೇಶಕ್ಕೇ ವಿರುದ್ಧವಾದುದಾಗಿದೆ. ಈ ಕಾಯಿದೆ ಪ್ರಕಾರ, ಅನರ್ಹತೆ ನಿರ್ಧಾರವು ಶಾಸನಸಭೆಯ ವ್ಯಾಪ್ತಿಗೆ ಬರುತ್ತದೆ. ಹಾಗೂ ನ್ಯಾಯಾಂಗದ ಪರಿಶೀಲನೆಯು ಈ ನಿರ್ಧಾರದ ಪ್ರಕ್ರಿಯೆ ಮುಗಿದ ನಂತರವಷ್ಟೇ ಆರಂಭವಾಗಬೇಕಾಗುತ್ತದೆ.

ಒಂದೆಡೆ ಉನ್ನತ ನ್ಯಾಯಾಂಗವು ಈ ರೀತಿಯಲ್ಲಿ ನಡೆದುಕೊಂಡರೆ ಇನ್ನೊಂದೆಡೆ ರಾಜ್ಯಪಾಲರ ಪಾತ್ರವೂ ಹೆಚ್ಚು ನಿರ್ಲಜ್ಜವಾಗಿತ್ತು. ಎಂವಿಎ ಸರಕಾರದ ಸುಮಾರು 17 ತಿಂಗಳ ಅವಧಿಯಲ್ಲಿ ವಿಧಾನ ಸಭೆಯ ಸ್ಪೀಕರ್ ಆಯ್ಕೆಗೆ ರಾಜ್ಯಪಾಲ ಭಗತ್ ಸಿಂಗ್ ಕೋಶಿಯಾರಿ ಅವಕಾಶ ನೀಡಿರಲಿಲ್ಲ. ಕೆಲವು ನಿಯಮಗಳಿಗೆ ಸಂಬಂಧಿಸಿ ವ್ಯಾಜ್ಯ ನಡೆಯುತ್ತಿದೆ ಎಂಬ ನೆಪವೊಡ್ಡಿ ಸ್ಪೀಕರ್ ಆಯ್ಕೆಯನ್ನು ತಡೆ ಹಿಡಿಯಲಾಗಿತ್ತು. ಆದರೆ, ಬಿಜೆಪಿ ಹಾಗೂ ಬಂಡಾಯ ಶಿವಸೇನೆ ಸರಕಾರ ರಚನೆಯಾಗುತ್ತಿದ್ದಂತೆಯೇ ಎರಡೇ ದಿನದಲ್ಲಿ ಸ್ಪೀಕರ್ ಆಯ್ಕೆ ದಿನಾಂಕ ನಿಗದಿಪಡಿಸಲು ರಾಜ್ಯಪಾಲರಿಗೆ ಯಾವ ಅಡ್ಡಿಯೂ ಕಾಣಿಸಲಿಲ್ಲ. ಎಂವಿಎ ಸರಕಾರದ ಆಡಳಿತದುದ್ದಕ್ಕೂ ರಾಜ್ಯಪಾಲ ಕೋಶಿಯಾರಿ ಒಬ್ಬ ಸಾಂವಿಧಾನಿಕ ಪ್ರಮುಖನಿಗಿಂತ ಆರ್‌ಎಸ್‌ಎಸ್ ಕಾರ್ಯಕರ್ತನಂತೆ ಕೆಲಸ ಮಾಡಿದ್ದು ಸ್ಪಷ್ಟವಾಗಿದೆ.

ಕೇಂದ್ರೀಯ ಸಂಸ್ಥೆಗಳನ್ನು, ಅದರಲ್ಲೂ ವಿಶೇಷವಾಗಿ ಅನುಷ್ಠಾನ ನಿರ್ದೇಶನಾಲಯವನ್ನು (ಇ.ಡಿ.) ಎಂವಿಎ ಸರಕಾರದ ವಿರುದ್ಧ ಪ್ರಮುಖ ಅಸ್ತ್ರವನ್ನಾಗಿ ಬಳಸಲಾಯಿತು. ಅನೇಕ ಶಿವ ಸೇನೆ ಹಾಗೂ ಎನ್‌ಸಿಪಿ ನಾಯಕರ ತನಿಖೆ ನಡೆಸಿ ಸುಳ್ಳು ಆರೋಪಗಳಡಿ ಸಿಲುಕಿಸಲು ಇ.ಡಿ.ಯನ್ನು ನಿಯೋಜಿಸಲಾಯಿತು. ಎನ್‌ಸಿಪಿಯ ಇಬ್ಬರು ಸಚಿವರನ್ನು ಕರಾಳ ಹಣಕಾಸು ದುರ್ಬಳಕೆ ತಡೆ ಕಾನೂನು (ಪಿಎಂಎಲ್‌ಎ) ಅಡಿಯಲ್ಲಿ ಬಂಧಿಸಿ ಸೆರೆಮನೆಗೆ ತಳ್ಳಲಾಯಿತು. ಕೇಂದ್ರೀಯ ಸಂಸ್ಥೆಗಳ ಹಿಡಿತದಿಂದ ತಪ್ಪಿಸಿಕೊಳ್ಳಲು ಬಿಜೆಪಿಗೆ ಪಕ್ಷಾಂತರ ಮಾಡುವುದು ಅನಿವಾರ್ಯ ಎಂಬಂಥ ಪರಿಸ್ಥಿತಿಯನ್ನು ಸೃಷ್ಟಿಸಲಾಗುತ್ತಿದೆ.

ರಾಜ್ಯಪಾಲ, ಕೇಂದ್ರೀಯ ಸಂಸ್ಥೆಗಳು ಮತ್ತು ನ್ಯಾಯಾಂಗ –ಹೀಗೆ ಪ್ರಭುತ್ವದ ವಿವಿಧ ಅಂಗಗಳಿಂದ ಸಜ್ಜಿತರಾಗಿರುವುದರಿಂದಲೇ ಬಿಜೆಪಿಯ ಆಡಳಿತ ಕಸಿಯುವ ಕಾರ್ಯಾಚರಣೆಯಿಂದ ಯಾವ ರಾಜ್ಯವೂ ತಪ್ಪಿಸಿಕೊಳ್ಳಲಾಗದು ಎಂದು ಅಮಿತ್ ಷಾ ಘಂಟಾಘೋಷವಾಗಿ ಹೇಳಿದ್ದಾರೆ. ತಮಿಳುನಾಡು ಮತ್ತು ಕೇರಳದಂಥ ರಾಜ್ಯವನ್ನು ರಾಜಕೀಯ ಚಟುವಟಿಕೆಗಳಿಂದ ಗೆಲ್ಲಲಾಗದು ಎನ್ನುವುದು ಸ್ಪಷ್ಟವಾಗಿದೆ. ಹಾಗಾಗಿ, ಅವುಗಳನ್ನು ಪ್ರಭುತ್ವದ ಅಸ್ತ್ರಗಳ ಮೂಲಕವೇ ಗೆಲ್ಲಬಹುದು ಎನ್ನುವುದು ಅದಕ್ಕೆ ಗೊತ್ತಿದೆ. ಆ ಮೂಲಕ 'ಒಂದು ದೇಶ, ಒಂದು ಪಕ್ಷ' ಮಾಡಲು ಸಾಧ್ಯ ಎಂದು ಅದು ಭಾವಿಸಿದೆ. ಬಿಜೆಪಿ ಯುಗವೆಂದರೆ ಏನಿರುತ್ತದೆ ಎನ್ನುವುದು ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಗಿಂತ ಕೆಲವು ದಿನಗಳ ಮೊದಲು ಅನಾವರಣಗೊಂಡ ವಿದ್ಯಮಾನಗಳು ಸ್ಪಷ್ಟಪಡಿಸುತ್ತವೆ. 2002ರ ಗುಜರಾತ್ ಹತ್ಯಾಕಾಂಡದ ಸಂತ್ರಸ್ತರಿಗೆ ನ್ಯಾಯ ಒದಗಿಸಲು ಕೋರಿ ಸುಪ್ರೀಂ ಕೋರ್ಟ್‌ಗೆ ಮೊರೆ ಹೋಗುವ ಕೆಚ್ಚು ತೋರಿದ್ದ ತೀಸ್ತಾ ಸೆಟಲ್‌ವಾಡ್ ಮತ್ತು ಆರ್.ಬಿ. ಶ್ರೀಕುಮಾರ್‌ರನ್ನು ಬಂಧಿಸಿ ಸರಳುಗಳ ಹಿಂದೆ ತಳ್ಳಿದ್ದು ಸರ್ವಾಧಿಕಾರದ ಧೋರಣೆಯನ್ನು ಎತ್ತಿ ತೋರಿಸುತ್ತದೆ. ಪತ್ರಕರ್ತ ಮಹಮದ್ ಜುಬೇರ್ ಬಂಧನ ಹಾಗೂ ಸ್ವತಂತ್ರ ಪತ್ರಿಕೋದ್ಯಮ ಹಾಗೂ ಫ್ಯಾಕ್ಟ್ ಚೆಕ್ಕಿಂಗ್‌ಗಾಗಿ ಅವರು ನಡೆಸಿದ ಪ್ರಯತ್ನಗಳಿಗಾಗಿ ಅವರ ವಿರುದ್ಧ ಮೊಕದ್ದಮೆಗಳನ್ನು ದಾಖಲಿಸಿರುವುದು ಸ್ವತಂತ್ರ ಮಾಧ್ಯಮದ ಮೇಲೆ ದಾಳಿ ಮಾಡುವುದನ್ನು ಆಡಳಿತ ಮುಂದುವರಿಸಲಿದೆ ಎನ್ನುವುದರ ಸ್ಪಷ್ಟ ಸುಳಿವಾಗಿದೆ. ಬಿಜೆಪಿ ಯುಗದಲ್ಲಿ ಜೀ ಹುಜೂರ್ ಮಾಧ್ಯಮಕ್ಕೆ ಅವಕಾಶ ಇರುತ್ತದೆಯೇ ಹೊರತು ಭಿನ್ನಮತಕ್ಕೆ ಆಸ್ಪದವಿರುವುದಿಲ್ಲ.

ಮುಸ್ಲಿಂ ಭಯೋತ್ಪಾದಕರಿಗೆ ಬಿಜೆಪಿ ಆಶ್ರಯ

ಹಿಂದೂತ್ವ ಸಂಘಟನೆಗಳು ಮುಸ್ಲಿಂ–ವಿರೋಧಿ ಭಾವನೆಗಳನ್ನು ಪ್ರಚೋದಿಸಿ ಸಮಾಜದಲ್ಲಿ ಕಾಯಂ ಆಗಿ ಒಡಕನ್ನು ಸೃಷ್ಟಿಸುತ್ತಿರುವಾಗಲೇ ಮುಸ್ಲಿಂ ಉಗ್ರಗಾಮಿಗಳನ್ನು ಬಿಜೆಪಿ ಪೋಷಿಸುತ್ತಿರುವ ಅನಿರೀಕ್ಷಿತ ವಿದ್ಯಮಾನ ಬಯಲಿಗೆ ಬಂದಿದೆ. ಉದಯಪುರದಲ್ಲಿ ಟೈಲರ್ ಕನ್ಹಯ್ಯ ಲಾಲ್‌ನ ಹತ್ಯೆ ಮಾಡಿದ್ದ ಇಬ್ಬರ ಪೈಕಿ ಮಹಮದ್ ರಿಯಾಜ್ ಅಖ್ತಾರಿ ಎಂಬಾತ ಬಿಜೆಪಿಯ ಅಲ್ಪಸಂಖ್ಯಾತ ವಿಭಾಗದ ಸದಸ್ಯ ಎಂಬುದು ತಿಳಿದು ಬಂದಿದೆ. ಜಮ್ಮುನಲ್ಲಿ ಬಂಧಿತನಾಗಿರುವ ಲಷ್ಕರ್ ಎ ತಯ್ಬಾದ ಕಮಾಂಡರ್ ತಾಲಿಬ್ ಹುಸೇನ್ ಷಾ, ಬಿಜೆಪಿಯ ಜಮ್ಮು ಘಟಕದ ಸಾಮಾಜಿಕ ಮಾಧ್ಯಮ ವಿಭಾಗದ ಮುಖ್ಯಸ್ಥನಾಗಿದ್ದ ಎನ್ನುವುದೂ ತಿಳಿದು ಬಂದಿದೆ. ಬಿಜೆಪಿಯು ಎಲ್ಲ ಬಗೆಯ ಉಗ್ರಗಾಮಿಗಳಿಗೆ ಆಶ್ರಯ ತಾಣವಾಗುತ್ತಿದೆ ಎಂದು ಕಾಣುತ್ತಿದೆ. ಎರಡೂ ಕಡೆಯಿಂದ ಉಗ್ರಗಾಮಿ ಚಟುವಟಿಕೆಗಳು ಹೆಚ್ಚಿದಾಗ ಕೋಮು ಧ್ರುವೀಕರಣವನ್ನು ತಾರಕಕ್ಕೆ ಒಯ್ಯಬಹುದೆಂಬುದು ಬಿಜೆಪಿ ಲೆಕ್ಕಾಚಾರವಾಗಿದೆ. ಹಿಂದೂ ಹಿತಾಸಕ್ತಿಯ ರಕ್ಷಕ ಎಂದು ಹೆಮ್ಮೆ ಪಡುವ ಪಕ್ಷವೊಂದರಲ್ಲಿ ಮುಸ್ಲಿಂ ಉಗ್ರಗಾಮಿಗಳು–ಭಯೋತ್ಪಾದಕರು ಇರುವುದು ಎದುರುಬದಿರು ಕಡೆಯವರ ಒಗ್ಗಟ್ಟಿನಂತೆ ಕಾಣಿಸುತ್ತದೆ.

ಹೊಸ ಬಿಜೆಪಿ ಯುಗದ ಕೋಮುವಾದಿ ಸರ್ವಾಧಿಕಾರ ಕುರಿತ ಅಮಿತ್ ಷಾರ ಬಡಬಡಿಕೆಗಳು ಕೇವಲ ವಾಗಾಡಂಬರವಲ್ಲ ಎನ್ನುವುದನ್ನು ಸಾರ್ವಜನಿಕ ಸಭೆಯಲ್ಲಿ ಅವರ ಪಕ್ಷದ ಮುಖಂಡರು ಜನರಿಗೆ ನೀಡಿದ ಕರೆಗಳಿಂದ ಸಾಬೀತಾಗಿದೆ. ಹೈದರಾಬಾದ್ ಭಾಗ್ಯನಗರ ಆಗಬೇಕೆಂದು ಮೋದಿ ಹೇಳಿದ್ದಾರೆ. ಇದು ಒಂದು ನಗರದ ಹೆಸರು ಬದಲಾವಣೆ ವಿಚಾರ ಮಾತ್ರ ಎಂದು ಭಾವಿಸಬಾರದು. ಅದು ಹೊಸ ಹಿಂದುತ್ವ ಯುಗದ ಗುರುತಾಗಿದೆ.

ಅನು: ವಿಶ್ವ

27 ಜುಲೈ: ಜಿಎಸ್‌ಟಿ ಹೇರಿಕೆ ವಿರುದ್ಧ ಹೈನು ರೈತರ ಪ್ರತಿಭಟನೆ

"ಶ್ರೀಮಂತರ ಮೇಲೆ ನೇರವಾಗಿ ತೆರಿಗೆ ವಿಧಿಸಿ, ಬಡವರ ಮೇಲಿನ ಪರೋಕ್ಷ ತೆರಿಗೆಗಳನ್ನು ನಿಲ್ಲಿಸಿ"

2022 ರ ಜುಲೈ 27 ರಂದು ಗ್ರಾಮ/ತಾಲೂಕು ಕೇಂದ್ರಗಳಲ್ಲಿ ಹೈನು ಉತ್ಪನ್ನಗಳು ಮತ್ತು ಡ್ಯೆರಿ ಯಂತ್ರೋಪಕರಣಗಳ ಮೇಲೆ ಮೇಲೆ ಜಿಎಸ್‌ಟಿ ಹೇರಿಕೆಯನ್ನು ವಿರೋಧಿಸಿ ದೇಶಾದ್ಯಂತ ಹೈನುಗಾರಿಕೆಯಲ್ಲಿ ತೊಡಗಿರುವ ರೈತರು ಬೃಹತ್ ಪ್ರತಿಭಟನಾ ಮತಪ್ರದರ್ಶನಗಳನ್ನು ನಡೆಸುವಂತೆ ಭಾರತ ಹೈನು ರೈತರ ಒಕ್ಕೂಟದ (ಡಿಎಫ್‌ಎಫ್‌ಐ) ಸಂಘಟನಾ ಸಮಿತಿ (ಓಸಿ) ಕರೆ ನೀಡಿದೆ.. ಕೇಂದ್ರ ಸರ್ಕಾರದ ರೈತ ವಿರೋಧಿ ಮುಖವನ್ನು ಬಯಲಿಗೆಳೆಯುವ ಕರಪತ್ರಗಳು ಮತ್ತು ನೋಟಿಸ್‌ಗಳನ್ನು ಹಂಚುವ ಮೂಲಕ ವ್ಯಾಪಕ ಪ್ರಚಾರವನ್ನು ಆಯೋಜಿಸಲಾಗುವುದು ಎಂದು ಸಂಘಟನಾ ಸಮಿತಿ ಹೇಳಿದೆ.

ಎಲ್ಲಾ ರೈತ ಸಂಘಟನೆಗಳು ಮತ್ತು ಸಂಯುಕ್ತ ಕಿಸಾನ್ ಮೋರ್ಚಾ ಸೇರಿದಂತೆ ಎಲ್ಲ ಜಂಟಿ ವೇದಿಕೆಗಳು ಪ್ರತಿಭಟನಾ ಪ್ರದರ್ಶನಗಳಲ್ಲಿ ಭಾಗವಹಿಸಲು ಮತ್ತು ಅಗತ್ಯವಿದ್ದಲ್ಲಿ ಸುದೀರ್ಘ ಹೋರಾಟಗಳ ಮೂಲಕ ಕೇಂದ್ರ ಸರ್ಕಾರವು ಈ ರೈತ ವಿರೋಧಿ ನಿರ್ಧಾರವನ್ನು ಹಿಂತೆಗೆದುಕೊಳ್ಳುವುದನ್ನು ಖಚಿತಪಡಿಸಿಕೊಳ್ಳಲು ಮುಂದೆ ಬರಬೇಕು ಎಂದು ಡಿಎಫ್‌ಎಫ್‌ಐ ಮನವಿ ಮಾಡಿದೆ. ಕೇಂದ್ರ ಹಣಕಾಸು ಮತ್ತು ಕೃಷಿ ಸಚಿವರಿಂದ ಭೇಟಿಗೆ ಸಮಯ ಪಡೆದು, ಈ ರೈತ–ವಿರೋಧಿ ನಿರ್ಧಾರವನ್ನು ಹಿಂತೆಗೆದುಕೊಳ್ಳುವಂತೆ ಮನವಿ ಪತ್ರವನ್ನು ಸಲ್ಲಿಸುವುದಾಗಿಯೂ ಡಿಎಫ್‌ಎಫ್‌ಐ ಹೇಳಿದೆ.

ಜೂನ್ 28 ಮತ್ತು 29 ರಂದು ನಡೆದ ಜಿಎಸ್‌ಟಿ ಮಂಡಳಿಯ 47 ನೇ ಸಭೆಯಲ್ಲಿ "ಮೊದಲೇ ಪ್ಯಾಕ್ ಮಾಡಿದ, ಮೊದಲೇ ಲೇಬಲ್ ಹಚ್ಚಿದ ಮೊಸರು, ಲಸ್ಸಿ ಮತ್ತು ಮಜ್ಜಿಗೆ" ಮುಂತಾದ ಡ್ಯೆರಿ ಉತ್ಪನ್ನಗಳಿಗೆ ಜಿಎಸ್‌ಟಿ ವಿಧಿಸಲು ಮತ್ತು ಡ್ಯೆರಿ ಯಂತ್ರೋಪಕರಣಗಳು ಮತ್ತು ಹಾಲುಕರೆಯುವ ಯಂತ್ರಗಳ ಮೇಲಿನ ಜಿಎಸ್‌ಟಿಯನ್ನು ಏರಿಸಲು ಶಿಫಾರಸು ಮಾಡಿದೆ.

ಈ ಕ್ರಮದಿಂದ ಮುಕ್ತ ಮಾರುಕಟ್ಟೆಯಲ್ಲಿ ಹಾಲಿನ ಬೆಲೆ ಗಗನಕ್ಕೇರುತ್ತದೆ ಮತ್ತು ಲಕ್ಷಾಂತರ ಗ್ರಾಹಕರು ಹಾಲು ಮತ್ತು ಇತರ ಡ್ಯೆರಿ ಉತ್ಪನ್ನಗಳಿಗೆ ಹೆಚ್ಚಿನ ಬೆಲೆಗಳನ್ನು ತೆರಬೇಕಾಗಿ ಬರುತ್ತದೆ. ಇದು ಹಣದುಬ್ಬರ ಮತ್ತು ಬೆಲೆ ಏರಿಕೆಯಿಂದ ಆರ್ಥಿಕತೆಗೆ ಹಾನಿ ಮಾಡುವುದಲ್ಲದೆ, ಬೆಲೆ ಏರಿಕೆಗಳು ತುಳಿತಕ್ಕೊಳಗಾದ ವರ್ಗ, ಜಾತಿಗಳು ಮತ್ತು ಲಿಂಗದ ಜನರ ಪೌಷ್ಟಿಕಾಂಶದ ಅವಶ್ಯಕತೆಗಳ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ.

ಡ್ಯೆರಿ ಯಂತ್ರೋಪಕರಣಗಳು ಮತ್ತು ಹಾಲುಕರೆಯುವ ಯಂತ್ರಗಳ ಮೇಲೆ ಜಿಎಸ್‌ಟಿ ಹೆಚ್ಚಿಸುವ ಶಿಫಾರಸು ಸಹಕಾರಿ ಸಂಸ್ಥೆಗಳು ಮತ್ತು ಉತ್ಪಾದನೆ ಮತ್ತು ಮೌಲ್ಯವರ್ಧನೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಣ್ಣ ಡ್ಯೆರಿ ಉದ್ಯಮಿಗಳ ಮೇಲೆ ಪರಿಣಾಮ ಬೀರುತ್ತದೆ. ಹಣಕಾಸಿನ ನೀತಿಗಳಿಂದಾಗಿ ಸಹಕಾರಿ ಸಂಸ್ಥೆಗಳು ಈಗಾಗಲೇ ಹಲವಾರು ಸವಾಲುಗಳನ್ನು ಎದುರಿಸುತ್ತಿವೆ. ಮಧ್ಯಮ ಮತ್ತು ಸಣ್ಣ ಡ್ಯೆರಿ ಉದ್ದಿಮೆಗಳು ವ್ಯಾಪಾರದಿಂದ ನಿರ್ಗಮಿಸಬೇಕಾಗುತ್ತದೆ ಅಥವಾ ದೊಡ್ಡ ಉದ್ದಿಮೆಗಳಲ್ಲಿ ವಿಲೀನಗೊಳ್ಳಬೇಕಾಗುತ್ತದೆ. ಮೋದಿ ಸರ್ಕಾರದ ಇತ್ತೀಚಿನ ನೀತಿ ನಿರೂಪಣೆಗಳು ಸಹಕಾರಿ ಸಂಘಗಳು ಮತ್ತು ಬಡ ರೈತರ ಹಿತಗಳನ್ನು ಬಲಿಗೊಟ್ಟು ಹೈನುಗಾರಿಕೆಯಲ್ಲಿ ದೊಡ್ಡ ಬಂಡವಾಳವನ್ನು ಬೆಂಬಲಿಸುತ್ತಿರುವುದು ಸ್ಪಷ್ಟವಾಗಿ ಕಾಣುತ್ತಿದೆ ಎಂದು ಸಂಘಟನಾ ಸಮಿತಿ ಹೇಳಿದೆ.

ಜಾನುವಾರು ವಲಯವು ಕೃಷಿ ಕ್ಷೇತ್ರದ ಉತ್ಪಾದನೆಯಲ್ಲಿ ನಾಲ್ಕನೇ ಒಂದು ಭಾಗದಷ್ಟು ಕೊಡುಗೆ ನೀಡುತ್ತಿರುವುದು ಈ ಕ್ಷೇತ್ರದ ಆರ್ಥಿಕ ಮಹತ್ವವನ್ನು ತೋರಿಸುತ್ತದೆ. ಇದು ಅವರ ಜೀವನೋಪಾಯಕ್ಕಾಗಿ ಡ್ಯೆರಿ ವಲಯವನ್ನು ಅವಲಂಬಿಸಿರುವ 9 ಕೋಟಿ ಭಾರತೀಯ ಕುಟುಂಬಗಳು ಮತ್ತು ಪೌಷ್ಟಿಕಾಂಶಕ್ಕಾಗಿ ಹಾಲು ಮತ್ತು ಅದರ ಉಪ ಉತ್ಪನ್ನಗಳನ್ನು ಅವಲಂಬಿಸಿರುವ ಲಕ್ಷಾಂತರ ಬಡ ಗ್ರಾಹಕರ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ.

ನೇರ ತೆರಿಗೆಯ ಮೂಲಕ ಶ್ರೀಮಂತರ ಮೇಲೆ ತೆರಿಗೆ ವಿಧಿಸುವ ಬದಲು, ಮೋದಿ ಸರ್ಕಾರವು ರೈತರು, ಕಾರ್ಮಿಕರು ಮತ್ತು ದುಡಿಯುವ ಜನರ ಮೇಲೆ ಪರೋಕ್ಷ ತೆರಿಗೆಗಳನ್ನು ಹೇರುತ್ತಿದೆ ಮತ್ತು ದೊಡ್ಡ ಕಾರ್ಪೊರೇಟ್ ಗಳು ತಮ್ಮ ಆಸ್ತಿಯನ್ನು ಬಹುಪಾಲು ಹೆಚ್ಚಿಸಲು ಅನುವು ಮಾಡಿಕೊಡುತ್ತದೆ. ಕಡಿವಾಣವಿಲ್ಲದ ಬೆಲೆ ಏರಿಕೆ, ನಿರುದ್ಯೋಗ ಮತ್ತು ವ್ಯಾಪಕವಾದ ಬಡತನ ಬಹುಪಾಲು ದುಡಿಯುವ ಜನರನ್ನು ಬಾಧಿಸಲು ಈ ಕಾರ್ಪೊರೇಟ್ ಪರವಾದ ನೀತಿಗಳು ಕಾರಣವಾಗಿದೆ. ರೈತರು ಮತ್ತು ಕಾರ್ಮಿಕರು ಮತ್ತು ಎಲ್ಲಾ ಶ್ರಮಜೀವಿಗಳ ಒಗ್ಗಟ್ಟನ್ನು ಕಟ್ಟುವ ಮೂಲಕ ಇದನ್ನು ವಿರೋಧಿಸಬೇಕಾಗಿದೆ ಎಂದಿರುವ ಡಿಎಫ್‌ಎಫ್‌ಐ ನ ಸಂಘಟನಾ ಸಮಿತಿ ಈ ಶಿಫಾರಸುಗಳನ್ನು ತಕ್ಷಣವೇ ಹಿಂಪಡೆಯಬೇಕೆಂದು ಆಗ್ರಹಿಸಿದೆ, ಮತ್ತು ಸಣ್ಣ ಉದ್ದಿಮೆದಾರರು ಮತ್ತು ಸಹಕಾರಿ ವಲಯವನ್ನು ಒಗ್ಗೂಡಿಸಿ ಪ್ರತಿಭಟನೆಯಲ್ಲಿ ಎದ್ದು ನಿಲ್ಲುವಂತೆ ದೇಶಾದ್ಯಂತ ಹೈನುಗಾರರಿಗೆ ಕರೆ ನೀಡಿದೆ.

ಸಿಪಿಐ(ಎಂ) ಕೇರಳ ರಾಜ್ಯ ಸಮಿತಿ ಕಚೇರಿ ಮೇಲೆ ಹೇಡಿತನದ ಬಾಂಬ್ ದಾಳಿ

ಜೂನ್ 30 ರ ರಾತ್ರಿ ರಾತ್ರಿ ಸಿಪಿಐ(ಎಂ) ಕೇರಳ ರಾಜ್ಯ ಸಮಿತಿ ಕಚೇರಿ ಎಕೆಜಿ ಸೆಂಟರ್ ಮೇಲೆ ನಡೆದಿರುವ ಬಾಂಬ್ ದಾಳಿಯನ್ನು ಪಕ್ಷದ ಪೊಲಿಟ್ ಬ್ಯೂರೋ ಬಲವಾಗಿ ಖಂಡಿಸಿದೆ.


ರಾಜ್ಯ ಸರ್ಕಾರ ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರನ್ನು ಶಿಕ್ಷಿಸುತ್ತದೆ ಎಂಬ ವಿಶ್ವಾಸವನ್ನು ವ್ಯಕ್ತಪಡಿಸಿರುವ ಪೊಲಿಟ್‌ಬ್ಯುರೊ ಈ ಹೇಡಿತನದ ದಾಳಿಯನ್ನು ಖಂಡಿಸಲು ಮತ್ತು ಯಾವುದೇ ಪ್ರಚೋದನೆಗೆ ಬಲಿಯಾಗದಂತೆ ಶಾಂತಿಯುತವಾಗಿ ಪ್ರತಿಭಟಿಸುವಂತೆ ಎಲ್ಲಾ ಪ್ರಜಾಸತ್ತಾತ್ಮಕ ಶಕ್ತಿಗಳಿಗೆ ಕರೆ ನೀಡಿದೆ.

ಮರುದಿನ ಕೇರಳ ರಾಜ್ಯಾದ್ಯಂತ ಈ ದಾಳಿಗೆ ಬಲವಾದ ಆಕ್ರೋಶ ವ್ಯಕ್ತವಾಗಿದೆ.

ಕರ್ನಾಟಕದಲ್ಲಿ ಹಿಂಬಾಗಲಿಂದ ಅಧಿಕಾರಕ್ಕೆ ಬಂದ ಫ್ಯಾಸಿಸ್ಟ್ ಮನೋಭಾವದ ಬಿಜೆಪಿಯ ವಿಭಜನಕಾರಿ, ಸುಲಿಗೆಯ ದುರಾಡಳಿತಕ್ಕೆ ಜನತೆ ತತ್ತರಿಸಿದ್ದಾರೆ. ಪರಿಣಾಮಕಾರಿಯಾದ ವಿರೋಧಪಕ್ಷವಾಗಿ ಜನಪರ ನೀತಿಗಳ ಆಧಾರದಲ್ಲಿ ಪ್ರತಿರೋಧವನ್ನು ಒಡ್ಡುವಲ್ಲಿ ಕಾಂಗ್ರೆಸ್ ವಿಫಲವಾಗಿದೆ. ಇಂತಹ ಸಂಕೀರ್ಣ ಸಂದರ್ಭದಲ್ಲಿ, ಜನಪರ ನೀತಿಗಳ ಬದಲಿಗೆ ಲೂಟಿಕೋರ ನೀತಿಗಳನ್ನೇ ಮುನ್ನಡೆಸುವ ರಾಜಕೀಯ ಪಕ್ಷಗಳು ಕೇವಲ ಒಂದರ ಬದಲಿಗೆ ಮತ್ತೊಂದು ಅಧಿಕಾರಕ್ಕೆ ಬರುವ ರಾಜಕಾರಣ ಒಂದೇ, ಸಾಮಾಜಿಕ ಆರ್ಥಿಕ ಮುನ್ನಡೆಯನ್ನು ತರಲು ಸಾಧ್ಯವಿಲ್ಲ. ಜನತೆಗೆ ನಿಜ ಪರಿಹಾರವನ್ನೂ ನೀಡುವುದಿಲ್ಲ ಎನ್ನುವುದು ಅನುಭವ. ರಾಜ್ಯದಲ್ಲಿ ಐಕ್ಯ ಜನಾಂದೋಲನ ಬೆಳೆದು ಬರುತ್ತಿರುವ ಸಂದರ್ಭದಲ್ಲಿ ಎಡ ಮತ್ತು ಪ್ರಜಾಸತ್ತಾತ್ಮಕ ಜನ ಪರ್ಯಾಯ ರಾಜಕಾರಣವೇ ನೈಜ ಪರ್ಯಾಯ ಹೇಗೆ ಎಂಬುದನ್ನು ಸ್ಪಷ್ಟ ಕಣ್ಣೋಟ ಹಾಗೂ ನಿರ್ದಿಷ್ಟ ಪ್ರಮುಖಾಂಶಗಳ ಪ್ರತಿಪಾದನೆಯಿಂದ ವಿವರಿಸಿದ್ದಾರೆ ಸಿಪಿಐ(ಎಂ) ನ ರಾಜ್ಯ ಕಾರ್ಯದರ್ಶಿ ಸಂಗಾತಿ ಯು ಬಸವರಾಜ ರವರು.

ಲೂಟಿಕೋರ ಹಾಗೂ ವಿಭಜನಕಾರಿ ರಾಜಕಾರಣಕ್ಕೆ ಎಡ ಮತ್ತು ಪ್ರಜಾಸತ್ತಾತ್ಮಕ ಪರ್ಯಾಯ

ಯು. ಬಸವರಾಜ



ಲೂಟಿಕೋರ ಹಾಗೂ ವಿಭಜನಕಾರಿ ರಾಜಕಾರಣ

ಜನಾದೇಶವನ್ನು ಪಡೆಯದ ಬಿಜೆಪಿ ನೇತೃತ್ವದ ಕರ್ನಾಟಕ ಸರಕಾರ, ಕರ್ನಾಟಕ ರಾಜ್ಯವನ್ನು ಕಾರ್ಪೋರೇಟ್ ಕಂಪನಿಗಳ ಲೂಟಿಗೆ ತೆರೆದು, ಅದರ ವಿರುದ್ಧ ವ್ಯಾಪಕ ಪ್ರತಿರೋಧ ಬಾರದಂತೆ ತಡೆಯುವ ಮತ್ತು ಚಳುವಳಿ ನಿರತ ಜನತೆಯ ದಿಕ್ಕನ್ನು ತಪ್ಪಿಸುವ ಕೆಲಸದಲ್ಲಿ ವ್ಯಾಪಕವಾಗಿ ತನ್ನನ್ನು ತೊಡಗಿಸಿಕೊಂಡಿದೆ.

ಕಾರ್ಪೋರೇಟ್ ಕಂಪನಿಗಳು, ಆರ್.ಎಸ್.ಎಸ್. ಮತ್ತು ಮುಸ್ಲಿಂ ಮತಾಂಧ ಶಕ್ತಿಗಳು ಸಹಯೋಗದಲ್ಲಿ, ಸ್ಥಳೀಯ ಆಳುವ ಜನ ವರ್ಗಗಳ ಜೊತೆ ಸೇರಿ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವುದು ಸ್ಪಷ್ಟವಿದೆ. ಇದರ ಭಾಗವಾಗಿಯೇ, ಪ್ರಧಾನ ಮಂತ್ರಿಗಳು ದೇಶದ ರೈತರ ಬೃಹತ್ ಐತಿಹಾಸಿಕ ಚಳುವಳಿಗೆ ಮಣಿದು, ದೇಶದ ಕೃಷಿ ರಂಗವನ್ನು ಕಾರ್ಪೋರೇಟ್ ಕಂಪನಿಗಳಿಗೆ ಒತ್ತೆ ಇಡುವ ರೈತ ಹಾಗೂ ಗ್ರಾಮೀಣ ಸಮುದಾಯದ ವಿರೋಧಿಯಾದ ಮೂರು ಕೃಷಿ ಕಾಯ್ದೆಗಳನ್ನು ಜಗತ್ತಿನ ಮುಂದೆ ಮಂಡಿಯೂರಿ ಕೈಮುಗಿದು ಕ್ಷಮೆ ಕೋರಿ ವಾಪಾಸು ಪಡೆದಿದ್ದರೂ, ರಾಜ್ಯದ ಶ್ರೀ ಬಸವರಾಜ ಬೊಮ್ಮಾಯಿಯವರ ಸರಕಾರ ಅವುಗಳನ್ನು ಮುಂದುವರೆಸುತ್ತಿದೆ. ರಾಜ್ಯದ ಜನತೆಯ ಪ್ರತಿರೋಧದ ನಡುವೆಯು, ಭೂ ಸುಧಾರಣಾ ತಿದ್ದುಪಡಿ ಕಾಯ್ದೆ – 2020, ಎಪಿಎಂಸಿ ತಿದ್ದುಪಡಿ ಕಾಯ್ದೆ – 2020, ಜಾನುವಾರು ಹತ್ಯೆ ನಿಷೇಧ ತಿದ್ದುಪಡಿ ಕಾಯ್ದೆ – 2020 ಗಳು ರಾಜ್ಯದಲ್ಲಿ ಜಾರಿಯಲ್ಲಿವೆ. ಇವು ರಾಜ್ಯದ ಎಲ್ಲ ರೈತರು, ಕೃಷಿಕೂಲಿಕಾರರು, ಕಸುಬುದಾರರು, ಹೈನುಗಾರರ ಮತ್ತು ಹೈನೋದ್ಯಮ, ಮಾಂಸೋದ್ಯಮ, ಚರ್ಮೋದ್ಯಮದಲ್ಲಿ ತೊಡಗಿದ ಮತ್ತು ಸಣ್ಣ ಹಾಗೂ ಮದ್ಯಮ ಕೈಗಾರಿಕೊದ್ಯಮದಲ್ಲಿ ತೊಡಗಿದ ಸಣ್ಣ ಬಂಡವಾಳದಾರರು ಮತ್ತು ಕಾರ್ಮಿಕರು ಹಾಗೂ ವ್ಯಾಪಾರಿಗಳ ಬದುಕನ್ನು ಹೊಸಕಿ ಹಾಕಲಿವೆ. ದಲಿತರು ಹಾಗೂ ಅಲ್ಪ ಸಂಖ್ಯಾತರ ಆಹಾರದ ಹಕ್ಕಿನ ಮೇಲೆ ಧಾಳಿ ನಡೆಸಿವೆ.

ಅದೇ ರೀತಿ, ಕಾರ್ಮಿಕರು ಸ್ವಾತಂತ್ರ್ಯ ಹೋರಾಟದ ಕಾಲದಿಂದಲೂ ಸಮರ ಶೀಲ ಹೋರಾಟಗಳನ್ನು ನಡೆಸಿ ಪಡೆದುಕೊಂಡು ಕಾರ್ಮಿಕರ ಪರವಾದ ಕಾಯ್ದೆಗಳನ್ನು ಹಿಂಪಡೆದು, ಕಾರ್ಮಿಕರನ್ನು ನಿರ್ಧಯವಾಗಿ ಶೋಷಣೆಗೊಳಪಡಿಸುವ ಲೂಟಿಕೋರ ಕಾರ್ಪೋರೇಟ್ ಕಂಪನಿಗಳ ಪರವಾದ, ಕಾರ್ಮಿಕ ವಿರೋಧಿ ಸಂಹಿತೆಗಳ ಜಾರಿಗೆ ಕ್ರಮವಹಿಸುತ್ತಿದೆ. ಮಾತ್ರವಲ್ಲಾ ರಾಜ್ಯದ ಮಹಿಳೆಯರ, ದಲಿತರ, ಎಲ್ಲ ಶೂದ್ರ ಸಮುದಾಯದ ಮತ್ತು ಬಡಜನರ ಶಿಕ್ಷಣದ ಮೇಲೆ ಕಲ್ಲುಹಾಕಿ ಅವರನ್ನು ಶಿಕ್ಷಣದಿಂದ ವಂಚಿಸುವ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೊಳಿಸಲಾಗುತ್ತಿದೆ. ರಾಜ್ಯದ ಮುಚ್ಚಿದ ಕೈಗಾರಿಕೆಗಳನ್ನು ತೆರೆಯಲು ಸಾರ್ವಜನಿಕ ಬಂಡವಾಳ ಹೂಡದಿರುವುದು, ಸರಕಾರದ ವಿವಿಧ ಇಲಾಖೆಗಳಲ್ಲಿನ ಲಕ್ಷಾಂತರ ಉದ್ಯೋಗಗಳನ್ನು ತುಂಬದಿರುವುದು ಮತ್ತು ರೈಲ್ವೇ, ವಿಮಾನಯಾನ, ಬಿಎಸ್ಎನ್ಎಲ್, ಬ್ಯಾಂಕ್, ವಿಮಾ ಮುಂತಾದ ಸಾರ್ವಜನಿಕ ರಂಗದ ಕೈಗಾರಿಕೆಗಳನ್ನು ಖಾಸಗೀಕರಣ ಮಾಡುತ್ತಿರುವುದು ಈ ಎಲ್ಲವೂ ನಿರುದ್ಯೋಗವನ್ನು ಹೆಚ್ಚಿಸಲಿವೆ ಮತ್ತು ದುಡಿಯುವ ಜನತೆಯ ಉದ್ಯೋಗ ಭದ್ರತೆಗೆ ಅಪಾಯವನ್ನುಂಟು ಮಾಡುತ್ತಿವೆ. ಸಾರ್ವಜನಿಕ ಶಿಕ್ಷಣ ಮತ್ತು ಉದ್ದಿಮೆಗಳ ಹಾಗೂ ಸಂಸ್ಥೆಗಳ ಖಾಸಗೀಕರಣ, ಸರಕಾರಿ ಇಲಾಖೆಗಳ ಉದ್ಯೋಗಗಳನ್ನು ಖಾಲಿ ಇಡುವ ಮೂಲಕ ಸಾಮಾಜಿಕ ತಾರತಮ್ಯಕ್ಕೊಳಗಾದ ಜನತೆಯ ಮೀಸಲಾತಿ ಸೌಲಭ್ಯವನ್ನು ಕಸಿದುಕೊಂಡಿವೆ. ಜಾತಿ ತಾರತಮ್ಯ ಮತ್ತು ಅಸ್ಪೃಶ್ಯಾಚರಣೆಯಲ್ಲಿ ಶೂದ್ರ ಹಾಗೂ ದಲಿತ ಸಮುದಾಯಗಳು ಮತ್ತು ಮಹಿಳೆಯರು ನಲುಗುವಂತೆ ಮಾಡಲು ಮತ್ತು ಅವರ ಮತಾಂತರದ ಹಾಗೂ ಅಂತರ್‌ಜಾತಿಯ ವಿವಾಹದ ಹಕ್ಕುಗಳನ್ನು ಮೊಟಕು ಮಾಡಲು ಸಂವಿಧಾನ ವಿರೋಧಿಯಾದ ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಸಂರಕ್ಷಣೆಯ ಸುಗ್ರೀವಾಜ್ಞೆಯನ್ನು ಹೊರಡಿಸಿದೆ. ಕರ್ನಾಟಕ ರಾಜ್ಯವು ಈಗಾಗಲೇ ತೀವ್ರತೆರನಾದ ಆರ್ಥಿಕ ಬಿಕ್ಕಟ್ಟಿಗೊಳಗಾಗಿದೆ. ಕರೋನಾ ಕಾಲದಲ್ಲಿ ನಿಜಾರ್ಥದಲ್ಲಿ ಜನತೆಗೆ ನೆರವು ನೀಡಲಿಲ್ಲ ಬದಲಿಗೆ, ಇಂತಹ ಪ್ರಕೃತಿ ವಿಕೋಪವನ್ನು ಲೂಟಿಕೋರರ ಲೂಟಿಗೆ ತೆರೆದು ಬಿಡಲಾಯಿತು. ಇದರಿಂದಾಗಿ ಜನತೆ ಮತ್ತಷ್ಟು ಸಂಕಷ್ಟಕ್ಕೀಡಾಗುವಂತಾಯಿತು. ಕಳೆದ ವರ್ಷ ತೀವ್ರ ಅತೀವೃಷ್ಠಿ ಗೀಡಾಗಿ ರಾಜ್ಯವು ನಲುಗಿ ಹೋದಾಗಲೂ ಜನರ ರಕ್ಷಣೆಗೆ ಗಂಭೀರ ಕ್ರಮಗಳನ್ನು ವಹಿಸಲಿಲ್ಲ. ಹೀಗೆ ಸಂಕಷ್ಠಗಳ ಮೇಲೆ, ಸಂಕಷ್ಠಗಳ ಹೊರೆಯನ್ನು ಅನುಭವಿಸುತ್ತಿರುವಾಗಲೇ, ಪೆಟ್ರೋಲ್, ಡೀಸೆಲ್, ರಸಾಯನಿಕ ಗೊಬ್ಬರ, ಬೀಜ, ಕ್ರಿಮಿನಾಶಕ ಹಾಗೂ ಔಷಧಿಗಳ ಮತ್ತು ಎಲ್ಲ ಅಗತ್ಯ ವಸ್ತುಗಳ ತೀವ್ರ ಬೆಲೆ ಏರಿಕೆಯ ಹೊರೆಯನ್ನು ನಿರ್ಧಯವಾಗಿ ಹೇರಲಾಗಿದೆ.

ಇಂತಹ ಎಲ್ಲ ಸಂಕಷ್ಟಗಳ ವಿರುದ್ಧ ಜನತೆ ಧ್ವನಿ ಎತ್ತದಂತೆ ಮತ್ತು ಪ್ರತಿಭಟನೆಯಲ್ಲಿ ತೊಡಗದಂತೆ ಅವರ ಗಮನವನ್ನು ಸಮಸ್ಯೆಯಲ್ಲದ ವಿಷಯಗಳನ್ನು,



ಅವುಗಳೇ ಗಂಭೀರ ಸಮಸ್ಯೆಯೆಂಬಂತೆ ಬಿಂಬಿಸಿ ಆ ಕಡೆ ತಿರುಗಿಸಲು ಈ ಆಳುವ ಲೂಟಿಕೋರ ಶಕ್ತಿಗಳು ನಿರಂತರವಾಗಿ ಶ್ರಮಿಸುತ್ತಿವೆ. ರಾಜ್ಯದ ಜನತೆ ಮತ್ತು ಹೋರಾಟ ನಿರತ ಶಕ್ತಿಗಳು, ಇವರು ಎತ್ತುವ ಹೊಸ ಪ್ರಶ್ನೆಗಳಿಗೆ ಸ್ಪಂದಿಸುವಂತಹ ದುಸ್ಥಿತಿಯನ್ನು ನಿರ್ಮಿಸಿ, ಮೂಲ ಲೂಟಿಕೋರತನವನ್ನು ನೇಪತ್ಯದಲ್ಲುಳಿಯುವಂತೆ ಕ್ರಮವಹಿಸುವ ಕುತಂತ್ರ ಮಾಡುತ್ತಿವೆ. ಹಿಜಾಬ್ ಹಲಾಲ್, ಜಟ್ಕಾಕಟ್, ಈಗ ಪಠ್ಯ ಪುಸ್ತಕ ಪರಿಷ್ಕರಣೆ, ಆರ್.ಎಸ್. ಎಸ್. ಪರ, ವಿರೋದ ಇವುಗಳನ್ನು ಗುರುತಿಸಬಹುದು.

ಲೂಟಿಕೋರರ ಮತ್ತೊಂದು ಪಕ್ಷ ಆಡಳಿತ ಪಕ್ಷಕ್ಕೆ ಪರ್ಯಾಯವಲ್ಲ

ರಾಜ್ಯದಲ್ಲಿ ವಿರೋಧ ಪಕ್ಷಗಳೆಂದು ಕರೆಯಲ್ಪಡುವ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳು ಸಾಪೇಕ್ಷವಾಗಿ ಎರಡೂ ಒಟ್ಟಾಗಿ ಬಿಜೆಪಿಗಿಂತಲೂ ರಾಜ್ಯದಾದ್ಯಂತ ಹೆಚ್ಚಿನ ಜನ ಬೆಂಬಲ ಹೊಂದಿದ್ದರೂ ಮತ್ತು ಎರಡೂ ಸೇರಿ ವಿಧಾನಸಭೆಯಲ್ಲು ಪರಿಣಾಮಕಾರಿ ವಿಧಾನ ಸಭಾ ಸದಸ್ಯರ ಬಲ ಹೊಂದಿದ್ದರೂ ಬಿಜೆಪಿ ಜಾರಿಗೊಳಿಸುತ್ತಿರುವ ಲೂಟಿಕೋರ ಕಾರ್ಪೋರೇಟ್ ನೀತಿಗಳಿಂದ ರಾಜ್ಯವನ್ನು ಪರಿಣಾಮಕಾರಿಯಾಗಿ ರಕ್ಷಿಸಲು ಮುಂದಾಗುತ್ತಿಲ್ಲ. ಬದಲಿಗೆ ಅವುಗಳನ್ನು ಬೆಂಬಲಿಸುತ್ತಿವೆ. ಕೇವಲ ತೋರಿಕೆಗೆ ವಿರೋಧಿಸುವ ಕ್ರಮವಹಿಸುತ್ತಿವೆ. ಕೋಮುವಾದದ ವಿಚಾರದಲ್ಲಿಯೂ ರಾಜ್ಯದ ಸಮಗ್ರತೆ ಹಾಗೂ ಸೌಹಾರ್ಧತೆಯನ್ನು ಗಮನದಲ್ಲಿಟ್ಟುಕೊಂಡು ಕ್ರಮವಹಿಸುತ್ತಿಲ್ಲ. ಬದಲಿಗೆ ಹಿಂದುತ್ವವಾದಿಗಳ ಆಟಾಟೋಪ ಜಾಸ್ತಿಯಾದಷ್ಟು ಅಲ್ಪ ಸಂಖ್ಯಾತರ ಹಾಗೂ ದಲಿತರ ಮತ ಬ್ಯಾಂಕ್ ತಮಗೆ ದೊರೆಯುವುದೆಂಬ ಸಂಕುಚಿತ ರಾಜಕಾರಣ ಮೆರೆಯುತ್ತಿರುವುದನ್ನು ಕಾಣಬಹುದಾಗಿದೆ. ಹೀಗಾಗಿ, ಹಿಂದುತ್ವವಾದದ ವಿಚಾರದಲ್ಲಿ ಇವು ರಾಜ್ಯದ ಪ್ರಮುಖ ರಾಜಕೀಯ ಪಕ್ಷಗಳಾಗಿ ತೀವ್ರ ಮಧ್ಯ ಪ್ರವೇಶ ನಡೆಸದೇ ಆ ಕುರಿತ ಮೆದು ಧೋರಣೆ ತಾಳುತ್ತಿರುವುದನ್ನು ನೋಡಬಹುದಾಗಿದೆ.

ಕಾಂಗ್ರೆಸ್ ಪಕ್ಷವು ರಾಜ್ಯದಲ್ಲಿ ಸುಮಾರು 50 ವರ್ಷಗಳ ಕಾಲ ರಾಜ್ಯಭಾರ ಮಾಡಿದೆ. ಅದೇ ರೀತಿ, ಜೆಡಿಎಸ್ ಕೂಡಾ ಕಾಂಗ್ರೆಸ್ ಪಕ್ಷಕ್ಕೆ ಪರ್ಯಾಯವಾಗಿ ಹತ್ತಾರು ವರ್ಷಗಳ ರಾಜ್ಯ ಭಾರ ಮಾಡಿದೆ. ಆಗಲೂ ಅವುಗಳು ಜನ ಪರ ರಾಜ್ಯ ಭಾರ ಮಾಡದೇ ಲೂಟಿಕೋರ ಆಳುವ ವರ್ಗಗಳ ಪರವಾಗಿಯೇ ರಾಜ್ಯ ಭಾರ ಮಾಡಿರುವುದು ವೇದ್ಯವಾಗಿದೆ.

ಪುಟ 12 ಕ್ಕೆ



ಸೌಹಾರ್ಧ– ಸಮೃದ್ಧ ಜನತಾ ಕರ್ನಾಟಕ ನಿರ್ಮಾಣಕ್ಕಾಗಿ, ಎಡ ಮತ್ತು ಜಾತ್ಯಾತೀತ ಪ್ರಜಾಸತ್ತಾತ್ಮಕ ಪರ್ಯಾಯದ ಪ್ರಮುಖಾಂಶಗಳು:

ಬಂಧುಗಳೇ,

ರಾಜ್ಯವನ್ನು ಆರ್ಥಿಕ ದುಸ್ಥಿತಿಯಿಂದ ಮೇಲೆತ್ತಲು, ಬಿಕ್ಕಟ್ಟಿನಿಂದ ಪಾರು ಮಾಡಲು, ಜನತೆಯ ದೌರ್ಜನ್ಯ ದಬ್ಬಾಳಿಕೆಗಳನ್ನು ಗಣನೀಯವಾಗಿ ನಿಯಂತ್ರಿಸಲು, ಸೌಹಾರ್ಧತೆ ಹಾಗೂ ಸಾಮರಸ್ಯ ಸಾಧನೆಗೆ ಕ್ರಮವಹಿಸಲು, ಸ್ವಾವಲಂಬಿ ಬದುಕನ್ನು ವಿಸ್ಥರಿಸಲು, ತಲಾ ಆದಾಯವನ್ನು ವಿಸ್ಥರಿಸಿ ಬಲಗೊಳಿಸಲು ಮತ್ತು ಸಾಮಾಜಿಕ ತಾರತಮ್ಯದ ನಿವಾರಣೆಗಾಗಿ ಈ ಕೆಳಕಂಡ ಪರ್ಯಾಯ ಕಾರ್ಯಕ್ರಮ ನಮ್ಮದು.

1) ಭೂಮಿ ಹಾಗೂ ಕೃಷಿಯ ಪ್ರಶ್ನೆ:

ಭೂಸುಧಾರಣಾ ತಿದ್ದುಪಡಿ ಕಾಯ್ದೆ – 2020 ನ್ನು ವಾಪಾಸು ಪಡೆಯುವುದು. ಭೂ ಮಿತಿಯನ್ನು ಕಡಿತಗೊಳಿಸುವುದು. ಉಳುಮೆಯಲ್ಲಿ ತೊಡಗಿರುವ ದಲಿತರು ಮತ್ತು ಬಡವರಿಗೆ ವಿತರಿಸುವುದು. ಕಾರ್ಪೋರೇಟ್ ಕೃಷಿಗೆ ಬದಲಾಗಿ ಸಹಕಾರಿ ಕೃಷಿಯನ್ನು ಅಭಿವೃದ್ಧಿ ಪಡಿಸುವುದು. ಸರಕಾರಿ ಹಾಗೂ ಅರಣ್ಯ ಜಮೀನು ಸಾಗುವಳಿ ಮಾಡಿದ ಬಡವರಿಗೆ ಹಕ್ಕು ಪತ್ರಕ್ಕೆ ಕ್ರಮವಹಿಸುವುದು. ಅರಣ್ಯ ವಿಸ್ಥರಿಸಲು ಕ್ರಮವಹಿಸುವುದು. ಪ್ಲಾಂಟೇಶನ್ ಭೂಮಿಗಳ ಬಡ ಸಾಗುವಳಿದಾರರಿಗೆ ಭೂಮಿ ಹಕ್ಕು ನೀಡುವುದು. ಕೃಷಿಕೂಲಿಕಾರರು, ಬಡರೈತರು ಹಾಗೂ ಕಸುಬುದಾರ ಮತ್ತತರೆ ಬಡವರಿಗೆ ಅಗತ್ಯತೆಯನುಸರಿಸಿ ಹಿತ್ತಲು ಹಾಗು ನಿವೇಶನ, ಶೌಚ ಸಹಿತ ಉಚಿತ ವಸತಿ ಒದಗಿಸುವುದು. ಬಲವಂತದ ಭೂ ಸ್ವಾಧೀನವನ್ನು ಕೈಬಿಡುವುದು. ಭೂ ಕಬಳಿಕೆಯನ್ನು ನಿಷೇಧಿಸುವುದು ಮತ್ತು ಭೂ ಕಬಳಿಕೆದಾರರ ಮೇಲೆ ಕಾನೂನಿನ ಕ್ರಮವಹಿಸುವುದು ಹಾಗೂ ಭೂಮಿಯನ್ನು ವಾಪಾಸು ಪಡೆಯುವುದು. ಸಹಕಾರಿ ಹಾಗೂ ಸಾರ್ವಜನಿಕ ಬ್ಯಾಂಕ್ ಸಾಲದ ಜಾಲವನ್ನು ವ್ಯಾಪಕವಾಗಿ ವಿಸ್ಥಾರಗೊಳಿಸುವುದು. ಋಣ ಮುಕ್ತ ಕಾಯ್ದೆಯನ್ನು ಜಾರಿಗೊಳಿಸುವುದು. ರೈತರ, ಕೃಷಿಕೂಲಿಕಾರರ, ಮಹಿಳೆಯರ, ದಲಿತರು ಮುಂತಾದ ದುರ್ಬಲರ ಸಾಲ ಮನ್ನಾ ಮಾಡುವುದು. ಏಪಿಎಂಸಿ ತಿದ್ದುಪಡಿ ಕಾಯ್ದೆ – 2020 ನ್ನು ವಾಪಾಸು ಪಡೆಯುವುದು. ಸುಗ್ಗಿ ಪೂರ್ವದಿಂದಲೆ ಡಾ.ಎಂ.ಎಸ್ ಸ್ವಾಮಿನಾಥನ್ ಕೃಷಿ ಆಯೋಗದ ಸಲಹೆಯಂತೆ ಉತ್ಪಾದನಾ ವೆಚ್ಚಕ್ಕೆ ಶೇ 50 ಲಾಭಾಂಶ ಸೇರಿಸಿದ ಬೆಂಬಲ ಬೆಲೆ ಖಾತರಿಗೆ ಕ್ರಮವಹಿಸುವುದು. ಅಗತ್ಯವಿದ್ದರೇ ಪ್ರೋತ್ಸಾಹ ಧನವನ್ನು ಒದಗಿಸುವುದು. ಸುಗ್ಗಿಯ ಪೂರ್ವದಿಂದಲೇ ಖರೀದಿ ಕೇಂದ್ರಗಳನ್ನು ತೆರೆದು ಖರೀದಿಸಲು ಅಗತ್ಯ ಬಂಡವಾಳಕ್ಕೆ ಮತ್ತು ವಿತರಣೆಗೆ ಕ್ರಮವಹಿಸುವುದು. ಮಳೆ ನೀರು ಸಂಗ್ರಹಕ್ಕೆ ಮತ್ತು ಅಂತರ್ಜಲ ಭರ್ತಿಗೆ ಕ್ರಮವಹಿಸುವುದು. ಹನಿ ಹಾಗೂ ತುಂತುರು ನೀರಾವರಿಗಳನ್ನು ಪ್ರೋತ್ಸಾಹಿಸುವುದು. ಪಶ್ಚಿಮ ಘಟ್ಟಗಳಲ್ಲಿ ಸುರಿದು ಸಮುದ್ರಕ್ಕೆ ಸೇರುವ ನೀರನ್ನು ಬಳಸಿಕೊಳ್ಳಲು ಕ್ರಮವಹಿಸುವುದು. ಅಂತರ್ರಾಜ್ಯ ನದಿ ನೀರಿನ ವಿವಾದಗಳನ್ನು ಮಾತುಕತೆಗಳ ಮೂಲಕ ಪರಿಹರಿಸಿಕೊಳ್ಳಲು ಕ್ರಮವಹಿಸುವುದು.

ರೈತರು, ಕೃಷಿಕೂಲಿಕಾರರು ಮತ್ತು ಕಸುಬುದಾರರಿಗೆ ಭವಿಷ್ಯ ನಿಧಿ ಯೋಜನೆಗೆ ಕ್ರಮವಹಿಸುವುದು. ಕೃಷಿಕೂಲಿಕಾರರ ಸಾಮಾಜಿಕ ಸುರಕ್ಷತೆ ಮತ್ತು ಕೂಲಿಗಾಗಿ ಕೇಂದ್ರೀಯ ಶಾಸನಕ್ಕಾಗಿ ಒತ್ತಾಯ. ಉದ್ಯೋಗ ಖಾತ್ರಿ ವಿಸ್ಥರಣೆ ಹಾಗೂ ಕೂಲಿ ಹೆಚ್ಚಳಕ್ಕೆ ಅಗತ್ಯ ಕ್ರಮ ಅಗತ್ಯವಿರುವ ಎಲ್ಲರ ಸಾಮಾಜಿಕ ಪಿಂಚಣಿಯನ್ನು 3000 ರೂಗಳಿಗೆ ವಿಸ್ತರಿಸುವುದು.

2. ಕೈಗಾರಿಕಾ ರಂಗ:

ಕಾರ್ಮಿಕ ಸಂಹಿತೆಗಳ ವಾಪಾಸಾತಿಗಾಗಿ ಒತ್ತಾಯ ಮತ್ತು ಜಾರಿಗೊಳಿಸದಿರಲು ಕ್ರಮ. ಗುಪ್ತಮತದಾನದ ಮೂಲಕ ಕಾರ್ಮಿಕ ಸಂಘಗಳಿಗೆ ಮಾನ್ಯತೆ ಎಲ್ಲಾ ಗೌರವ ಧನದಲ್ಲಿ ದುಡಿಯುವವರಿಗೆ ಕನಿಷ್ಠ ವೇತನ. ಎಲ್ಲಾ ದುಡಿಯುವ ಜನತೆಗೆ

ಒಂದು ಪ್ರದೇಶ ನಾಲ್ಕು ವಾರ್ಡುಗಳಿಗೆ ಹಂಚಿಕೆ!
ಬಿಬಿಎಂಪಿ ವಾರ್ಡ್ ಮರುವಿಂಗಡಣೆಯ ಕುತಂತ್ರಗಳು



741 ಚದರ ಕಿಮೀ ವಿಸ್ತೀರ್ಣದ ಬೆಂಗಳೂರು ನಗರದಲ್ಲಿ 2011ರ ಜನಗಣತಿಯಂತೆ ಸುಮಾರು 85 ಲಕ್ಷ ಮತದಾರರಿದ್ದಾರೆ. 11 ವರ್ಷಗಳಲ್ಲಿ ಬೆಂಗಳೂರು ಸಾಕಷ್ಟು ಬೆಳೆದಿದೆ. ಜನಸಂಖ್ಯೆ ಏರಿಕೆಯಾಗಿದೆ. ಹೀಗಾಗಿ ದಶಕದ ಹಿಂದಿನ ಗಣತಿ ಆಧಾರದಲ್ಲಿ ರಚಿಸುವ ವಾರ್ಡ್ ವೈಜ್ಞಾನಿಕವಾಗಿರಲು ಸಾಧ್ಯವಿಲ್ಲ. ಇದು ಒಂದೆಡೆಯಾದರೆ. ಪುನರ್ ವಿಂಗಡಣೆ ವೇಳೆ 'ಪಕ್ಷ'ಪಾತದಿಂದ ನಡೆದುಕೊಳ್ಳಲಾಗಿದೆ ಎಂದು ಜಯನಗರ ಶಾಸಕಿ ಸೌಮ್ಯರೆಡ್ಡಿ ನೇರವಾಗಿ ಆರೋಪಿಸಿದ್ದಾರೆ. ಅದಕ್ಕೆ ಆಧಾರಗಳನ್ನೂ ಒದಗಿಸಿದ್ದಾರೆ.

ಲಿಂಗರಾಜ್ ಮಳವಳ್ಳಿ


ಆಡಳಿತ ಕೇಂದ್ರೀಕರಣವಾಗಿರುವುದನ್ನು ಸಡಿಲಗೊಳಿಸುವ ಉದ್ದೇಶದಿಂದ 1976ರ ಕರ್ನಾಟಕ ಮುನ್ಸಿಪಲ್ ಕಾರ್ಪೊರೇಷನ್ಸ್ (ಕೆಎಂಸಿ) ಕಾಯ್ದೆಗೆ ತಿದ್ದುಪಡಿ ತಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡುಗಳ ಸಂಖ್ಯೆಯನ್ನು 198 ವಾರ್ಡುಗಳಿಂದ 243ಕ್ಕೆ ಹೆಚ್ಚಿಸಲಾಗಿದೆ. ನಗರದ ವ್ಯಾಪ್ತಿಯನ್ನು ಹೆಚ್ಚಿಸದೇ ವಾರ್ಡುಗಳ ರಚನೆಯ ಗಾತ್ರವನ್ನು ಕಡಿಮೆ ಮಾಡಲಾಗಿದೆ.

ದೇಶದ ನಾಲ್ಕನೇ ಅತಿದೊಡ್ಡ ಪಾಲಿಕೆಯಾದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ 2019ರಲ್ಲೇ ನಡೆಯಬೇಕಿದ್ದ ಚುನಾವಣೆಯನ್ನು ಕುಂಟು ನೆಪಗಳನ್ನು ಮುಂದೊಡ್ಡಿ ಬರೊಬ್ಬರಿ ಎರಡು ವರ್ಷ ತಳ್ಳಿತ್ತು. ಆದರೆ ಸುಪ್ರೀಂ ಆದೇಶದಿಂದಾಗಿ ಒಲ್ಲದ ಮನಸ್ಸಿಂದ ಚುನಾವಣೆ ನಡೆಸುವ ಅನಿವಾರ್ಯ ನಿರ್ಧಾರಕ್ಕೆ ಸರ್ಕಾರ ಬಂದಿದೆ.

ವಾರ್ಡುಗಳ ಪುನರ್ ವಿಂಗಡಣೆ ಕಸರತ್ತು ಪೂರ್ಣಗೊಳಿಸಿ, ಇದೀಗ ಕೆಟಗರಿ ಕಸರತ್ತು ಶುರುಮಾಡಿಕೊಂಡಿದೆ. ಎಂಟು ವಾರಗಳಲ್ಲಿ ಚುನಾವಣೆ ನಡೆಸಬೇಕಾದ ಗಡುವು ಇರುವುದರಿಂದಾಗಿ ಚುನಾವಣೆ ದಿನಾಂಕ ಘೋಷಣೆಗೆ ಕ್ಷಣಗಣನೆ ಆರಂಭವಾಗಿದೆ. ಆದರೆ ವಾರ್ಡ್‌ಗಳ ರಚನೆ ವೈಜ್ಞಾನಿಕವಾಗಿಲ್ಲ, ಪ್ರಾಯೋಗಿಕವಾಗಿಲ್ಲ, ಭೌಗೋಳಿಕ ರಚನೆ ಅಸಂಬದ್ಧವಾಗಿದೆ, ಒಂದು ಪ್ರದೇಶವನ್ನು ಹಲವು ವಾರ್ಡ್‌ಗಳಿಗೆ ಹಂಚಲಾಗಿದೆ, ಇದರಿಂದ ವಾರ್ಡ್‌ನ ನಾಗರಿಕರಿಗೆ ಅನಾನುಕೂಲತೆ ಆಗಲಿದೆ, ವಾರ್ಡ್ ಅಭಿವೃದ್ಧಿ ಯೋಜನೆ ರೂಪಿಸಲು ಇದು ತೊಡಕಾಗಲಿದೆ ಎಂಬ ಹಲವು ದೂರು ಕೇಳಿ ಬಂದಿವೆ. ಹೀಗಾಗಿ ನಗರದ ಅಭಿವೃದ್ಧಿಗೆ ಸಹಕಾರಿಯಾಗಲಿ ಎಂಬ ಉದ್ದೇಶದಿಂದ ಮಾಡಲಾಗುತ್ತಿರುವ ಈ ಮರು ವಿಂಗಡಣೆ, ಅಭಿವೃದ್ಧಿ ಯೋಜನೆ ಜಾರಿಗೆ ಕಂಟಕವಾಗಿ ಪರಿಣಮಿಸಲಿದೆ ಎಂದು ತಜ್ಞರು ಆತಂಕ ವ್ಯಕ್ತಪಡಿಸಿದ್ದಾರೆ.

ಇದೀಗ ವಾರ್ಡುಗಳ ಪುನರ್ ವಿಂಗಡಣೆ ಮುಗಿದಿದೆಯಾದರೂ, ಪಾರದರ್ಶಕವಾಗಿ ನಡೆದಿಲ್ಲ, ಪಕ್ಷಪಾತದಿಂದ ಮಾಡಲಾಗಿದೆ, ಸ್ಥಳೀಯ ನಾಗರಿಕರ ಅಭಿಪ್ರಾಯ ಪಡೆದಿಲ್ಲ, ಸ್ಥಳೀಯ ಶಾಸಕರ ಮರ್ಜಿಯಂತೆ ಮರುವಿಂಗಡಣೆ ಮಾಡಲಾಗಿದೆ ಎಂಬ ಆಕ್ಷೇಪವೂ ಬಲವಾಗಿದೆ. 198 ವಾರ್ಡುಗಳಿದ್ದಾಗ ಕೆಲ ವಾರ್ಡುಗಳು 80 ಸಾವಿರಕ್ಕೂ ಹೆಚ್ಚು ಜನಸಂಖ್ಯೆ ಹೊಂದಿದ್ದಲ್ಲಿ, ಕೆಲವು ವಾರ್ಡುಗಳಲ್ಲಿ ಕೇವಲ 25 ಸಾವಿರ ಜನಸಂಖ್ಯೆ ಇತ್ತು. ಜತೆಗೆ ವಿಸ್ತೀರ್ಣದಲ್ಲೂ ಅಸಮಾನತೆ ಇತ್ತು. ಗಡಿಯನ್ನು ಗುರುತಿಸುವಾಗಲೂ ಗೊಂದಲಗಳಿದ್ದವು. ಹಾಗೆಯೇ ಜನಸಂಖ್ಯೆಯನ್ನು ಸರಾಸರಿ ಲೆಕ್ಕ ಹಾಕಿದರೂ ಪ್ರತಿ ವಾರ್ಡ್ 40 ಸಾವಿರ ಮೀರುತ್ತಿತ್ತು. ಹೀಗಾಗಿ ವಾರ್ಡುಗಳ ಮರುವಿಂಗಡಣೆ ಆಗಲೇಕೆಂಬ ಕೂಗು ಕೇಳಿ ಬಂದಿತ್ತು. ಹೀಗಾಗಿ ಕೆಎಂಸಿ 2020 ತಿದ್ದುಪಡಿ ಕಾಯ್ದೆ ರೂಪಿಸಿ ವಾರ್ಡುಗಳ ಸಂಖ್ಯೆಯನ್ನು ಹೆಚ್ಚಿಸಲಾಯಿತು. ಎರಡು ವರ್ಷ ಚುನಾವಣೆ ಮುಂದೂಡಿದ್ದಕ್ಕೆ ಕೊಟ್ಟ ಕಾರಣಗಳಲ್ಲಿ ಇದು ಬಲವಾದ ಕಾರಣವಾಗಿತ್ತು!

ನಗರ ತಜ್ಞರು ಮತ್ತು ಬಿ.ಎಸ್. ಪಾಟೀಲ್ ವರದಿಯೂ ಹೇಳುವಂತೆ ವಾರ್ಡ್‌ನ ಮಿತಿಯನ್ನು 25 ಸಾವಿರ ಜನಸಂಖ್ಯೆಗೆ ಸೀಮಿತಗೊಳಿಸಬೇಕೆನ್ನುವ ಸಲಹೆ ಆಧರಿಸಿ, ಇದೀಗ 2011ರ ಜನಗಣತಿಯಂತೆ ಪ್ರತಿ ವಾರ್ಡ್ 30 ಸಾವಿರ ಜನಸಂಖ್ಯೆಗೆ ರೂಪಿಸಲಾಗಿದೆ ಎನ್ನಲಾಗಿದೆ. ರಾಜಕಾಲುವೆ, ಮುಖ್ಯರಸ್ತೆ,



ವಿಧಾನಸಭಾ ಕ್ಷೇತ್ರದ ಗಡಿ ಇತ್ಯಾದಿ ಆಧಾರದಲ್ಲಿ ವಾರ್ಡ್‌ನ ಗಡಿಗಳನ್ನು ತೀರ್ಮಾನಿಸಬೇಕು ಎಂಬುದಾಗಿತ್ತು. ಆದರೆ ಬಿಜೆಪಿ ಶಾಸಕರ ಅಣತಿಯಂತೆ ಗಡಿಗಳನ್ನು ಗುರುತಿಸಲಾಗಿದೆ ಎಂದು

ಪುಟ 15 ಕ್ಕೆ

ಉದ್ಯೋಗದ ಭದ್ರತೆಗೆ ಕ್ರಮ. ಕರ್ನಾಟಕ ಕಾರ್ಮಿಕ ಸಮ್ಮೇಳನಕ್ಕೆ ಕ್ರಮ. ಹಮಾಲಿ, ಕಟ್ಟಡ ಕಾರ್ಮಿಕರು ಮುಂತಾದವರ ಕಲ್ಯಾಣ ಮಂಡಳಿ ಬಲಪಡಿಕೆಗೆ ಕ್ರಮ. ಸಣ್ಣ ಕೈಗಾರಿಕೆಗಳಿಗೆ ನೆರವು. ಕೃಷಿ ಹಾಗೂ ಉಪ ಕಸುಬು ಆಧಾರಿತ ಕೈಗಾರಿಕೆಗಳಿಗೆ ಪ್ರೋತ್ಸಾಹ ಖಾಸಗೀ ಸಹಭಾಗಿತ್ವದಡಿ BOOT ನೀತಿ ಜಾರಿಗೆ ಕ್ರಮ. ಹಿಂದುಳಿದ ಪ್ರದೇಶಗಳ ಕೈಗಾರಿಕಾಭಿವೃದ್ಧಿಗೆ ವಿಶೇಷ ಕ್ರಮಗಳು. ಸಾರ್ವಜನಿಕ ರಂಗದ ಉದ್ದಿಮೆಗಳ, ಇಲಾಖೆಗಳ ಖಾಸಗೀಕರಣಕ್ಕೆ ವಿರೋಧ.

3. ಶಿಕ್ಷಣ ಮತ್ತು ಉದ್ಯೋಗ

ನೂತನ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ವಾಪಾಸು ಪಡೆಯುವುದು. ಸಾರ್ವಜನಿಕ ಗುಣಮಟ್ಟದ ಶಿಕ್ಷಣಕ್ಕೆ ಆದ್ಯತೆ ನೀಡುವುದು. ಮಾತೃ ಭಾಷೆಯ ಶಿಕ್ಷಣ, ಇಂಗ್ಲೀಷ್ ಕಲಿಕೆಗೆ ಕ್ರಮ ವೈಜ್ಞಾನಿಕ ಹಾಗೂ ಧರ್ಮನಿರಪೇಕ್ಷತೆಯ ಜಾತ್ಯತೀತ ಮನೋಭಾವದ ಶಿಕ್ಷಣ. ಜಾತಿತಾರತಮ್ಯಕ್ಕೊಳಗಾದ ದುರ್ಬಲರಿಗೆ ಉನ್ನತ ಹಂತದ ವರೆಗೆ ಉಚಿತ ಶಿಕ್ಷಣ. ಇವುಗಳಿಗಾಗಿ ಅಗತ್ಯ ಹೆಚ್ಚುವರಿ ಅನುದಾನಕ್ಕೆ ಕ್ರಮ. ಖಾಲಿ ಇರುವ ಎಲ್ಲ ಸರಕಾರಿ ಹುದ್ದೆಗಳ ಭರ್ತಿಗೆ ಕ್ರಮವಹಿಸುವುದು. ಕರ್ನಾಟಕದಲ್ಲಿನ ಕೇಂದ್ರ ಸರಕಾರದ ಸಂಸ್ಥೆಗಳಲ್ಲಿನ ಹುದ್ದೆಗಳಲ್ಲಿ ಕರ್ನಾಟಕದವರಿಗೆ ಆದ್ಯತೆಗೆ ಕ್ರಮ ಉದ್ಯೋಗ ಸೃಷ್ಠಿಗೆ ಮುಚ್ಚಿರುವ ಆಯ್ದ ಕೈಗಾರಿಕೆಗಳನ್ನು ಸಾರ್ವಜನಿಕ ರಂಗದಲ್ಲಿ ಮುನ್ನಡೆಸಲು ಕ್ರಮವಹಿಸುವುದು. ಸಾರ್ವಜನಿಕ ಬಂಡವಾಳ ಹೂಡಿಕೆಗೆ ಕ್ರಮವಹಿಸುವುದು. ಸ್ವಯಂ ಉದ್ಯೋಗಕ್ಕೆ ಪ್ರೋತ್ಸಾಹ. ಉದ್ಯೋಗ ದೊರೆಯದ ನಿರುದ್ಯೋಗಿಗಳಿಗೆ, ನಿರುದ್ಯೋಗ ಭತ್ಯೆಗೆ ಕ್ರಮ.

4. ಸಾರ್ವಜನಿಕ ಆರೋಗ್ಯ:

ಸಾರ್ವಜನಿಕ ಆರೋಗ್ಯ ಸಂರಕ್ಷಣೆಗಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸೇರಿದಂತೆ ಎಲ್ಲಾ ಆಸ್ಪತ್ರೆಗಳ ಖಾಸಗೀಕರಣದಿಂದ ಸಂರಕ್ಷಣೆ, ಸಾರ್ವಜನಿಕ ಆರೋಗ್ಯ ಕೇಂದ್ರಗಳ ಬಲ ಪಡಿಕೆಗೆ ಕ್ರಮಗಳು. ಖಾಸಗೀ ಆರೋಗ್ಯ ಸೌಲಭ್ಯಗಳ ಮೇಲೆ ನಿಯಂತ್ರಣ ಮತ್ತು ಔಷಧಿ ಬೆಲೆಗಳ ಇಳಿಕೆಗೆ ಕ್ರಮ ಮತ್ತು ಒತ್ತಾಯ. ಅಪೌಷ್ಠಿಕತೆ ನಿವಾರಣೆಗೆ ಸಾರ್ವಜನಿಕ ಪಡಿತರ ವ್ಯವಸ್ಥೆಯನ್ನು ಬಲ ಪಡಿಸುವುದು. ಎಲ್ಲಾ ಅಗತ್ಯ ವಸ್ತುಗಳನ್ನು ಪಡಿತರ ಪಟ್ಟಿಯಲ್ಲಿ ಸೇರ್ಪಡೆ ಮಾಡುವುದು. ಸಾರ್ವಜನಿಕರಿಗೆ ಸುರಕ್ಷಿತ ಕುಡಿಯುವ ನೀರು ಒದಗಿಸುವುದು.

5. ಅಧಿಕಾರ ಹಾಗೂ ಸಂಪನ್ಮೂಲಗಳ ವಿಕೇಂದ್ರೀಕರಣ ಮತ್ತು ಒಕ್ಕೂಟ ತತ್ವ:

ಒಕ್ಕೂಟ ಸರಕಾರದ ಕೈನಲ್ಲಿ ಬಹುತೇಕ ಅಧಿಕಾರಗಳು ಸಂಪನ್ಮೂಲಗಳು ಕೇಂದ್ರೀಕರಿಸಲ್ಪಟ್ಟಿವೆ. ಅವುಗಳ ವಿಕೇಂದ್ರೀಕರಣವು ಅಗತ್ಯವಿದೆ. ಅದೇ ರೀತಿ, ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚಿನ ಅಧಿಕಾರ ಮತ್ತು ಸಂಪನ್ಮೂಲಗಳ ವಿಕೇಂದ್ರೀಕರಣದ ಅಗತ್ಯವಿದೆ. ರಾಜ್ಯವು ಹೆಚ್ಚಿನ ಅಧಿಕಾರ ಹಾಗು ಸಂಪನ್ಮೂಲಗಳನ್ನು ಒದಗಿಸಬೇಕು. ಒಕ್ಕೂಟ ಸರಕಾರವು ಒಕ್ಕೂಟವಾದಿ ಸ್ವರೂಪದ ಮೇಲೆ ನಿರಂತರವಾದ ದಾಳಿಯನ್ನು ನಡೆಸುತ್ತಿದೆ. ಇರುವ ಅಧಿಕಾರಗಳನ್ನು ಕಿತ್ತುಕೊಂಡು ಸರ್ವಾಧಿಕಾರವನ್ನು ಹೇರುತ್ತಿದೆ. ಅದೇ ರೀತಿ, ಸಂಪನ್ಮೂಲಗಳ ಕ್ರೋಢೀಕರಣಕ್ಕೆ ಇದ್ದ ಅವಕಾಶಗಳನ್ನು ಮೊಟಕುಗೊಳಿಸಲಾಗಿದೆ. ಒಕ್ಕೂಟ ಸರಕಾರ ನ್ಯಾಯವಾಗಿ ನೀಡಬೇಕಾದ ಜಿಎಸ್‌ಟಿ ಪಾಲನ್ನು ನೀಡುತ್ತಿಲ್ಲ. ತೆರಿಗೆ ಪಾಲು ನೀಡುವುದರಲ್ಲು ಸಮಸ್ಯೆಗಳಿವೆ. ತೆರಿಗೇಯೆತರ ಆದಾಯ ಹಂಚಿಕೆಗಳಿಗೆ ಮತ್ತು ತೆರಿಗೆ ಹಕ್ಕುಗಳಿಗಾಗಿ ಒತ್ತಾಯ. ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಒತ್ತು. ನಿಜಾರ್ಥದಲ್ಲಿ ಹೈದ್ರಾಬಾದ್ ಕರ್ನಾಟಕದಲ್ಲಿ ಸಂವಿಧಾನದ ವಿಧಿ 371 ರ ಜಾರಿ. ಮಲೆನಾಡು ಪ್ರದೇಶದ ಅಭಿವೃದ್ಧಿಗೆ ಪರಿಸರ ಸಂರಕ್ಷಣೆಗೆ ಪೂರಕವಾದ ಕ್ರಮಗಳು. ಒಕ್ಕೂಟ ಸರಕಾರವನ್ನು ಸರ್ವಾಧಿಕಾರಿಯಾಗಿಸುವ, ಅಧಿಕಾರ ಮತ್ತು ಸಂಪನ್ಮೂಲಗಳ ಕೊರತೆಯಿಂದ ನರಳುವ ಸಣ್ಣ ಸಣ್ಣ ರಾಜ್ಯಗಳ ರಚನೆಗೆ ವಿರೋಧ. ಇವುಗಳ ಸರಿಪಡಿಕೆಗೆ ಕ್ರಮವಹಿಸಬೇಕಾಗಿದೆ.

6. ಜಾತ್ಯತೀತ ಸ್ವರೂಪದ ಹಾಗೂ ಸೌಹಾರ್ಧತೆ, ಜನ ಪರ ಸಂಸ್ಕೃತಿಯ ಸಂರಕ್ಷಣೆಗೆ ಕ್ರಮ:

ಪ್ರಭುತ್ವ ಮತ್ತು ರಾಜಕೀಯದಿಂದ ಧರ್ಮವನ್ನು ಪ್ರತ್ಯೇಕಿಸುವ ಬದಲು ಎಲ್ಲಾ ಧರ್ಮಗಳಿಗೂ ಸಮಾನ ಅವಕಾಶವೆಂದು ಮತ್ತು ಹಿಂದು ಮತಾಂಧತೆಗೆ ಆಧ್ಯತೆಯೆಂದು ತಿರುಚಲಾಗಿದೆ. ಇದರಿಂದ ರಾಜ್ಯದ ಧರ್ಮ ನಿರಪೇಕ್ಷತೆ ಅಥವಾ ಜಾತ್ಯತೀತ ಸ್ವರೂಪಕ್ಕೆ ಧಕ್ಕೆಯಾಗಿದೆ. ಮತಾಂಧತೆಯ ಆಧಾರದಲ್ಲಿ ಕಾರ್ಯ ನಿರ್ವಹಿಸುವುದನ್ನು ಎಲ್ಲಾ ಆಯಾಮಗಳಲ್ಲಿ ತಡೆಯುವುದು. ದ್ವೇಷ ಮತ್ತು ಹಿಂಸೆಯಾಧಾರಿತ ಪ್ರಚಾರಾಂದೋಲನಗಳ ನಿಷೇಧ ಜನತೆಯಿಂದ ಪ್ರತ್ಯೇಕಿಸಿ ದುರ್ಬಲಗೊಳಿಸಲು ಕ್ರಮವಹಿಸುವುದು. ಸೌಹಾರ್ಧ ವಾತಾವರಣವನ್ನು ಬಲಗೊಳಿಸಲು ಕ್ರಮವಹಿಸುವುದು. ಅಲ್ಪ ಸಂಖ್ಯಾತರ ಹಕ್ಕುಗಳ ರಕ್ಷಣೆಗೆ ಕ್ರಮವಹಿಸುವುದು. ಸರಕಾರಿ ಸಂಸ್ಥೆಗಳು ಹಾಗೂ ಇಲಾಖೆಗಳನ್ನು ಕೋಮುವಾದದಿಂದ ಮುಕ್ತಿಗೊಳಿಸುವುದು. ಖಾಸಗೀ ಸೇನೆಗಳ ನಿಷೇಧ. ಜಾತ್ಯಾತೀತ ಹಾಗೂ ಪ್ರಜಾಸತ್ತಾತ್ಮಕ ಸಂಸ್ಕೃತಿಗಳ ಬೆಳವಣಿಗೆಗೆ ಪ್ರೋತ್ಸಾಹ. ಜಾನಪದ ಕಲೆಗಳು ಹಾಗೂ ವೈವಿದ್ಯಮಯ ಸಾಂಸ್ಕೃತಿಕ ಪ್ರಾಕಾರಗಳ ಪೋಷಣೆ. ಸಾಂಸ್ಕೃತಿಕ ವ್ಯಕ್ತಿಗಳು ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಿನ ಧಾಳಿಯ ನಿಗ್ರಹಕ್ಕೆ ಧೃಡವಾದ ಕ್ರಮ.

7. ಸಾಮಾಜಿಕ ನ್ಯಾಯ ಮತ್ತು ಜಾತಿ ತಾರತಮ್ಯ ಸಡಿಲಗೊಳಿಸಲು ಕ್ರಮಗಳು:

ಜಾತಿ ವ್ಯವಸ್ಥೆ ಮತ್ತು ಎಲ್ಲಾ ರೀತಿಯ ಜಾತಿ ದಬ್ಬಾಳಿಕೆ ಅಸ್ಪೃಶ್ಯಾಚರಣೆಯ ರದ್ದತಿ, ಅಂತರ್ಜಾತೀಯ ವಿವಾಹಗಳಿಗೆ ಪ್ರೋತ್ಸಾಹ ಮತ್ತು ನೆರವು. ದೌರ್ಜನ್ಯದ ದೇವದಾಸಿ ಪದ್ದತಿ ನಿವಾರಿಸಲು ಮತ್ತು ಬಾಲ ಕಾರ್ಮಿಕ ಪದ್ದತಿ, ಜೀತ ಪದ್ದತಿ, ಬಿಟ್ಟಿ ಚಾಕರಿ, ಮ್ಯಾನುವಲ್ ಸ್ಕ್ಯಾವೆಂಜಿಂಗ್ ಗೆ ಪರಿಣಾಮ ಕಾರಿ ತಡೆ ಮತ್ತು ಪುನರ್ವಸತಿಗೆ ಕ್ರಮಗಳು. ಜಾತಿ ತಾರತಮ್ಯ ಹಾಗೂ ಅಸ್ಪೃಶ್ಯತೆ ನಿವಾರಣೆಯ ಭಾಗವಾಗಿ ದುರ್ಬಲರ ಜನ ಸಂಖ್ಯೆಗನುಗುಣವಾದ ಮೀಸಲಾತಿ ನೀತಿಗೆ ಕ್ರಮ. ಖಾಸಗೀ ವಲಯದ ಮೀಸಲಾತಿಗೂ ಕ್ರಮ. ಪರಿಶಿಷ್ಠ ಜಾತಿ ಮತ್ತು ಪಂಗಡಗಳ ವಿಶೇಷ ಘಟಕ ಯೋಜನೆಯ ಕಾಯ್ದೆಯಲ್ಲಿನ ಸೋರುವಿಕೆಗೆ ತಡೆ ಮತ್ತು ಕೇಂದ್ರೀಯ ಶಾಸನಕ್ಕಾಗಿ ಒತ್ತಾಯ. ಆದಿವಾಸಿ ಜನಗಳ ಅರಣ್ಯ ಭೂಮಿ, ಸಂಸ್ಕೃತಿ ರಕ್ಷಣೆಗೆ ಒತ್ತು. ಜಾತಿಗಣತಿ ಗೆ ಕ್ರಮ. ದಲಿತರು ಮತ್ತು ಮಹಿಳೆಯರು ಮತ್ತು ಅಲ್ಪ ಸಂಖ್ಯಾತರ ಮೇಲಿನ ಧಾರ್ಮಿಕ ದ್ವೇಷದ ಧಾಳಿಗಳನ್ನು ತಡೆಯಲು ಕ್ರಮಗಳು ಮತ್ತು ಪುನರ್ವಸತಿ. ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಸಂರಕ್ಷಣೆ ವಿಧೇಯಕ ವಾಪಾಸು ಪಡೆಯಬೇಕು. ಜಾನುವಾರು ಹತ್ಯೆ ನಿಷೇಧ ತಿದ್ದುಪಡಿ ಕಾಯ್ದೆ-2020 ವಾಪಾಸು ಪಡೆಯುವುದು. ಮರ್ಯಾದ ಹತ್ಯೆಗಳ ನಿಗ್ರಹ. ದೇವದಾಸಿ ಮಹಿಳೆಯರು ಅವರ ಹೆಣ್ಣು ಮಕ್ಕಳು, ಗಂಡ ಸತ್ತವರು, ಒಂಟಿ ಮಹಿಳೆಯರು, ಪರಿತ್ಯಕ್ತೆಯರು, ಅಂಗವಿಕಲ ಮಹಿಳೆಯರ ವಿವಾಹಕ್ಕೆ ಪ್ರೋತ್ಸಾಹ. ಮಹಿಳಾ ಮೀಸಲಾತಿಗೆ ಕ್ರಮ ಮಹಿಳೆಯರ ಸಮಾನ ಹಕ್ಕು ಮತ್ತು ಸಂಭಾವನೆಯ ಖಾತರಿ. ಮಂಗಳಮುಖಿ ನಾಗರೀಕರ ಹಾಗೂ ಅಂಗ ವಿಕಲರ ಹಕ್ಕುಗಳ ರಕ್ಷಣೆಗೆ ಕ್ರಮ. ಗಂಡ- ಹೆಂಡತಿ ಹೆಸರಿನಲ್ಲಿ ಜಂಟಿ ಪಟ್ಟಕ್ಕೆ ಕ್ರಮವಹಿಸುವುದು. ಮಹಿಳೆಯರಿಗೆ ಆಸ್ತಿಯಲ್ಲಿ ಪಾಲನ್ನು ಖಾತರಿ ಪಡಿಸುವುದು.

8. ಆಡಳಿತ ಭಾಷೆ:

ಕನ್ನಡ ಮತ್ತಿತರೆ ಪ್ರಮುಖ ಭಾಷೆಗಳಲ್ಲಿ ಆಡಳಿತಕ್ಕೆ ಕ್ರಮ. ಅಳಿವಿನಂಚಿನಲ್ಲಿರುವ ಭಾಷೆಗಳ ಸಂರಕ್ಷಣೆಗೆ ಕ್ರಮ.

9. ಭ್ರಷ್ಟಾಚಾರ ನಿಗ್ರಹ:

ಲೋಕಾಯುಕ್ತವನ್ನು ಬಲಪಡಿಸುವುದು. ಹಾಲಿ ಗುತ್ತಿಗೆ ಕೆಲಸದಲ್ಲಿ ಶೇ 40 ಹಾಗೂ ಬಿಟ್ ಕಾಯಿನ್ ಲೂಟಿ ಮತ್ತಿತರೆ ಭ್ರಷ್ಟಾಚಾರದ ಪ್ರಕರಣಗಳನ್ನು ನ್ಯಾಯಾಲಯದ ಸುಪರ್ಧಿಯಡಿ ನ್ಯಾಯಾಂಗ ತನಿಖೆಗೊಳಪಡಿಸುವುದು.

10. ಪ್ರಜಾಸತ್ತಾತ್ಮಕ ಹಕ್ಕುಗಳು ಹಾಗೂ ನಾಗರೀಕ ಸ್ವಾತಂತ್ರ್ಯ ರಕ್ಷಣೆ:

ಸಂವಿಧಾನ ನೀಡಿರುವ ಈ ಹಕ್ಕುಗಳ ರಕ್ಷಣೆಗಾಗಿ ಒತ್ತಾಯ. ಯುಎಪಿಎ ಮತ್ತು ದೇಶ ದ್ರೋಹದ ಕಾಯ್ದೆ AFSPA ಹಾಗೂ ರಾಷ್ಟ್ರೀಯ ಭದ್ರತಾ ಕಾಯ್ದೆ NSA ರದ್ದತಿ, ಮರಣದಂಡನೆ ರದ್ದತಿ, ಚುನಾವಣಾ ಬಾಂಡ್ ಗಳ ಯೋಜನೆಗೆ ನಿಷೇದ, ಚುನಾವಣಾ ಸುಧಾರಣೆ, ಕಡ್ಡಾಯ ಸಾಮಾಜಿಕ ಪರಿಶೋಧನೆ ಮತ್ತು ಹೊಣೆಗಾರಿಕೆಯ ಖಾತರಿ, ಮಾಹಿತಿ ಹಕ್ಕು ಕಾಯ್ದೆ ಜಾರಿಗಳಿಗಾಗಿ ಒತ್ತಾಯ.

ಬನ್ನಿ – ಕೈ ಜೋಡಿಸಿ – ನೈಜ ಅಭಿವೃದ್ಧಿಗೆ ಶ್ರಮಿಸಿ.

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ)–ಸಿಪಿಐ(ಎಂ)
ಭಾರತ ಕಮ್ಯುನಿಸ್ಟ್ ಪಕ್ಷ–ಸಿಪಿಐ
ಸೋಷಲಿಸ್ಟ್ ಯುನಿಟಿ ಸೆಂಟರ್ ಆಫ್ ಇಂಡಿಯ(ಕಮ್ಯುನಿಸ್ಟ್)–ಎಸ್‌ಯುಸಿಐ(ಸಿ)
ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ, ಲೆನಿನ್ ವಾದಿ–ಲಿಬರೇಷನ್)–ಸಿಪಿಐ(ಎಂಎಲ್)
ಅಖಿಲ ಭಾರತಫಾರ್ವರ್ಡ್ ಬ್ಲಾಕ್–ಎಐಎಫ್‌ಬಿ
ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯ–ಆರ್‌ಪಿಐ
ಸ್ವರಾಜ್ ಇಂಡಿಯಾ.
ರಾಜ್ಯ ಘಟಕಗಳು. ಬೆಂಗಳೂರು.

ಪೊಳ್ಳು ಭರವಸೆಗಳ ನಡುವೆ ಸೊರಗಿದ ಕಾಫಿ ಬೆಳೆಗಾರರು



ಇ.ಆರ್. ದುರ್ಗಾ ಪ್ರಸಾದ್

ಜಗತ್ತಿನ ಆರ್ಥಿಕ ರಂಗದಲ್ಲಿ ತೈಲದ ನಂತರ ಅತ್ಯಂತ ವಹಿವಾಟಾಗುವ ಸರಕು ಕಾಫಿ. ಭಾರತದಲ್ಲಿ ಬೆಳೆದ ಶೇ.75 ರಷ್ಟು ಭಾಗ ವಿದೇಶಗಳಿಗೆ ರಫ್ತಾಗುತ್ತದೆ. ಇದರಿಂದ ಭಾರತ ಸರಕಾರದ ಬೊಕ್ಕಸಕ್ಕೆ ಗಣನೀಯ ಪ್ರಮಾಣದ ವಿದೇಶ ವಿನಿಮಯ ಸಿಗುತ್ತದೆ.

ಭಾರತದಲ್ಲಿ ಕಾಫಿಯನ್ನು ಪ್ರಮುಖವಾಗಿ ಕರ್ನಾಟಕ, ಕೇರಳ ಮತ್ತು ತಮಿಳ್ನಾಡು ರಾಜ್ಯಗಳಲ್ಲಿ ಬೆಳೆಸುತ್ತಿದ್ದು ಈ ಪ್ರದೇಶಗಳನ್ನು 'ಪರಂಪರಾಗತವಾಗಿ ಕಾಫಿ ಬೆಳೆಯುವ ಪ್ರದೇಶಗಳು ಎಂದು ಕರೆಯಲಾಗುತ್ತದೆ'. ಇವಲ್ಲದೆ ಆಂಧ್ರ ಪ್ರದೇಶ, ನಮ್ಮ ದೇಶದ ನೈರುತ್ಯ ಭಾಗದ ದೇಶಗಳಲ್ಲೂ ಕಾಫಿಯನ್ನು ಬೆಳೆಸಲಾಗುತ್ತಿದೆ.

ನಮ್ಮ ದೇಶದ ಬೊಕ್ಕಸಕ್ಕೆ ಗಣನೀಯ ಪ್ರಮಾಣದ ಹಣ ತರುತ್ತಿರುವ ಈ ಬೆಳೆಯನ್ನು ಬೆಳೆಸುತ್ತಿರುವವರಲ್ಲಿ ಶೇ.98 ರಷ್ಟು ಬೆಳೆಗಾರರು ಸಣ್ಣ ಬೆಳೆಗಾರರು, ಶೇ. 87ರಷ್ಟು ಬೆಳೆಗಾರರು 2.5 ಹೆ. ಮತ್ತು ಅದಕ್ಕಿಂತ ಕಡಿಮೆ ಹಿಡುವಳಿ ಹೊಂದಿರುವವರಾಗಿದ್ದಾರೆ. ನಮ್ಮ ದೇಶದಲ್ಲಿ ಸುಮಾರು ನಾಲ್ಕು ಲಕ್ಷದಷ್ಟು ಹಿಡುವಳಿದಾರರಿದ್ದು ಈ ರಂಗವು ಸುಮಾರು 5 ಲಕ್ಷ ಕೆಲಸಗಾರರಿಗೆ ಉದ್ಯೋಗ ಸೃಷ್ಟಿಸುತ್ತದೆ. ಈ ರಂಗವು ಪರಿಸರಸ್ನೇಹಿ ರಂಗವೂ ಹೌದು.

ನಮ್ಮ ದೇಶದ ಇತರ ಬೆಳೆಗಳನ್ನು ಬೆಳೆಯುವವರಂತೆ ಈ ಬೆಳೆಗಾರರೂ ಹಲವಾರು ಸಮಸ್ಯೆಗಳನ್ನು ಅನುಭವಿಸುತ್ತಿದ್ದಾರೆ. ಅವರ ಬೆಳೆಗೆ ನ್ಯಾಯವಾದ ಬೆಲೆ ಸಿಗುತ್ತಿಲ್ಲ. ಬೆಲೆಯ ಅಸ್ಥಿರತೆ ಅವರನ್ನು ಸದಾ ಕಾಡುತ್ತಿರುತ್ತದೆ. ಕೆಲಸಗಾರರ ಕೂಲಿಯ ಹೆಚ್ಚಳ, ವನ್ಯ ಪ್ರಾಣಿಗಳಿಂದ ನಿರಂತರ ಧಾಳಿಯಿಂದಾಗಿ ವ್ಯಕ್ತಿಗಳು ಮತ್ತು ಬೆಳೆ ನಾಶ, ಸಾಲದ ಹೊರೆ ಇಂತಹಾ ಹಲವಾರು ಸಮಸ್ಯೆಗಳನ್ನು ಈ ಬೆಳೆಗಾರರು ನಿರಂತರವಾಗಿ ಅನುಭವಿಸುತ್ತಿದ್ದಾರೆ. ಸರಕಾರಗಳಿಂದ ಕಡೆಗಣಿಸಲ್ಪಟ್ಟ ಹಲವು ವಿಭಾಗಗಳಲ್ಲಿ ಕಾಫಿ ಬೆಳೆಗಾರರು ಪ್ರಮುಖರು. ಕೇವಲ ಪೊಳ್ಳು ಭರವಸೆಗಳಲ್ಲದೆ ಬೆಳೆಗಾರರಿಗೆ ಏನೂ ಸಿಕ್ಕಿಲ್ಲ.

ಕಾಫಿಯಲ್ಲಿ ಎರಡು ತರಹವಿದ್ದು ಅವು–ಅರೇಬಿಕಾ ಮತ್ತು ರೋಬಸ್ಟಾ

ಅರೇಬಿಕಾ ಬೆಳೆಯುವ ಪ್ರದೇಶಗಳು:	ವಿಸ್ತೀರ್ಣ (ಹೆಕ್ಟೇರ್)	ಉತ್ಪಾದನೆ (ಮೆಟ್ರಿಕ್ ಟನ್)
ಕರ್ನಾಟಕ	1,07,839	71,750
ತಮಿಳ್ನಾಡು	0,29,338	13,000

ಹೀಗೆ ಅರೇಬಿಕಾ ಬೆಳೆಸುವ ಪ್ರಮುಖ ರಾಜ್ಯಗಳು–ಕರ್ನಾಟಕ ಮತ್ತು ತಮಿಳ್ನಾಡು.

ರೋಬಸ್ಟಾಬೆಳೆಯುವ ಪ್ರದೇಶಗಳು:	ವಿಸ್ತೀರ್ಣ (ಹೆಕ್ಟೇರ್)	ಉತ್ಪಾದನೆ (ಮೆಟ್ರಿಕ್ ಟನ್)
ಕರ್ನಾಟಕ	1,38,080	1,77,150
ಕೇರಳ	081,649	067,000

ಹೀಗೆ ರೋಬಸ್ಟಾ ಬೆಳೆಸುವ ಪ್ರಮುಖ ರಾಜ್ಯಗಳು–ಕರ್ನಾಟಕ ಮತ್ತು ಕೇರಳ.

ರೋಬಸ್ಟಾ ಮತ್ತು ಅರೇಬಿಕಾ–ಎರಡನ್ನೂ ಬೆಳೆಸುವ ಪ್ರಮುಖ ರಾಜ್ಯ ಕರ್ನಾಟಕ. ಹೀಗೆ ಕರ್ನಾಟಕವು ಕಾಫಿ ಬೆಳೆಯುವ ಪ್ರಮುಖ ರಾಜ್ಯವಾಗಿದೆ.

ಕರ್ನಾಟಕದಲ್ಲಿ ಚಿಕ್ಕಮಗಳೂರು, ಹಾಸನ, ಕೊಡಗು ಮತ್ತು ಶಿವಮೊಗ್ಗದ ಭಾಗ ಕಾಫಿ ಬೆಳೆಯ ಪ್ರದೇಶಗಳಾಗಿವೆ

ಜಿಲ್ಲೆಗಳು	ಅರೇಬಿಕಾ		ರೋಬಸ್ಟಾ	
	ವಿಸ್ತೀರ್ಣ– (ಹೆಕ್ಟೇರ್)	ಉತ್ಪಾದನೆ (ಮೆ. ಟನ್)	ವಿಸ್ತೀರ್ಣ– (ಹೆಕ್ಟೇರ್)	ಉತ್ಪಾದನೆ (ಮೆ. ಟನ್)
ಚಿಕ್ಕಮಗಳೂರು	55,225	34,050	42,357	48,250
ಕೊಡಗು	28,146	19,200	79,450	1,07,200
ಹಾಸನ	24,468	18,500	16,273	21,700
ಒಟ್ಟು	**1,07,839**	**71,750**	**1,38,080**	**1,77,150**

ಕರ್ನಾಟಕದಲ್ಲಿ ಕಾಫಿ ಬೆಳೆಯುವ ಒಟ್ಟು ವಿಸ್ತೀರ್ಣ–2,45,919; ಬೆಳೆಯುವ ಕಾಫಿಯ ಒಟ್ಟು ಪ್ರಮಾಣ–2,48,900 ಮೆಟ್ರಿಕ್ ಟನ್.

ಕರ್ನಾಟಕದಲ್ಲಿ ಅರೇಬಿಕಾ ಬೆಳೆಯುವ ಜಿಲ್ಲೆಗಳು (ಅನುಕ್ರಮವಾಗಿ) –ಚಿಕ್ಕಮಗಳೂರು, ಕೊಡಗು, ಹಾಸನ.

ಕರ್ನಾಟಕದಲ್ಲಿ ರೋಬಸ್ಟಾ ಬೆಳೆಯುವ ಜಿಲ್ಲೆಗಳು (ಅನುಕ್ರಮವಾಗಿ)– ಕೊಡಗು, ಚಿಕ್ಕಮಗಳೂರು, ಹಾಸನ.

ಕರ್ನಾಟಕದಲ್ಲಿ ಕಾಫಿ ಬೆಳೆ – ಕೊಡಗು (19200 + 1,07,200)=1,26,400; ಚಿಕ್ಕಮಗಳೂರು (34,050+48,250)=82,300 ಹಾಸನ (18,500+21,700)=40,200

ಭಾರತದಲ್ಲಿ ಕಾಫಿ ಬೆಳೆಯುವ ಮುಖ್ಯ ರಾಜ್ಯ ಕರ್ನಾಟಕ ಮತ್ತು ಕರ್ನಾಟಕದಲ್ಲಿ ಪ್ರಥಮ ಜಿಲ್ಲೆ ಕೊಡಗು ಆಗಿದೆ.

ಕೊಡಗಿನ ಪ್ರಮುಖ ಬೆಳೆಗಳು–ಕಾಫಿ, ಬತ್ತ, ಕರಿಮೆಣಸು, ಏಲಕ್ಕಿ ಮತ್ತಿತರ ಕಾಫಿ 55%, ಬತ್ತ 24%, ಏಲಕ್ಕಿ 5%, ಕರಿಮೆಣಸು 4%, ಈಗ ಕೊಡಗಿನ ಮುಖ್ಯ ಬೆಳೆ ಕಾಫಿಯಾಗಿದೆ. ಅನಂತರ ಬತ್ತ, ಕರಿಮೆಣಸು, ಏಲಕ್ಕಿ ಬರುತ್ತದೆ. ಕೊಡಗಿನಲ್ಲಿ ಒಟ್ಟು 43,765 ಹಿಡುವಳಿದಾರರಿದ್ದಾರೆ. ಇವರಲ್ಲಿ 10 ಹೆ. ಗಿಂತ ಕಡಿಮೆ ಇರುವವರು–43,246 ಹಿಡುವಳಿದಾರರು. 10 ಹೆ. ಗಿಂತ ಜಾಸ್ತಿ ಇರುವವರು–519 ಹಿಡುವಳಿದಾರರು. 2 ಹೆ. ಗಿಂತ ಕೆಳಗಿರುವವರು–29,490, ಹಿ. 2–4 ಹೆ.–7748, ಹಿ. 4–10 ಹೆ. – 3466

ಕಾಫಿ ಬೆಳೆಗಾರರು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಅವರ ಬೇಡಿಕೆಗಳು



1. ಮೊತ್ತ ಮೊದಲ ಸಮಸ್ಯೆ ಬೆಲೆಯ ಅಸ್ಥಿರತೆ–ದೇಶದ ಇತರೆಲ್ಲಾ ಬೆಳೆಗಾರರಂತೆ ಇವರೂ ಬೆಲೆಯ ಅಸ್ಥಿರತೆಯೆಯಿಂದ ನರಳುತ್ತಿದ್ದು ಈ ಹಿನ್ನೆಲೆಯಲ್ಲಿ ಒಮ್ಮೆಗೆ ಸಣ್ಣ ಬೆಳೆಗಾರರ ಸಾಲವನ್ನು ಮತ್ತು ಬಡ್ಡಿಯನ್ನು ಸಂಪೂರ್ಣ ಮನ್ನಾ ಮಾಡಬೇಕು, ಅವರಿಗೆ ಕಡಿಮೆ ದರದಲ್ಲಿ ಹೊಸದಾಗಿ ದೀರ್ಘಾವಧಿ ಕಂತಿನ ಸಾಲ ಕೊಡಬೇಕು.

   ಸ್ವಾಮಿನಾಥನ್ ವರದಿಯ ಅನುಷ್ಠಾನದ ಬಗ್ಗೆ ನರೇಂದ್ರ ಮೋದಿಯವರು ಕೊಟ್ಟ ಭರವಸೆಯನ್ನು ಅನುಷ್ಠಾನಕ್ಕೆ ತರಬೇಕು. ಕಾಫಿ ಬೆಳೆಗೆ ಬರುವ ಖರ್ಚನ್ನು ಪ್ರತಿ ವರ್ಷ ಲೆಕ್ಕ ಮಾಡಿ ಅದಕ್ಕನುಗುಣವಾಗಿ ಲಾಭದಾಯಕ ಬೆಲೆಯನ್ನು ಕೇಂದ್ರ ಸರಕಾರ ಡಿಸೆಂಬರ್‌ನಲ್ಲಿ ಘೋಷಿಸಿ ಘೋಷಿತ ದರದಲ್ಲಿ ಸರಕಾರದ ಏಜೆನ್ಸಿಗಳ ಮೂಲಕ ಸರಕಾರವೇ ಕೊಂಡುಕೊಂಡು ಅದನ್ನು ದೇಶೀಯ, ಅಂತರ್ದೇಶೀಯ ಮಾರುಕಟ್ಟೆಯಲ್ಲಿ ಮಾರುವ ವ್ಯವಸ್ಥೆಯನ್ನು ಸರಕಾರ ಮಾಡಬೇಕು.

2. ಆನೆ ಮತ್ತಿತರ ವನ್ಯ ಮೃಗಗಳ ಹಾವಳಿಯಿಂದ ಬೆಳೆಗಾರರು ಜೀವವನ್ನೂ ಬೆಳೆಯನ್ನೂ ಕಳೆದುಕೊಳ್ಳುತ್ತಿದ್ದಾರೆ. ಈ ಸಮಸ್ಯೆಯ ಪರಿಹಾರಕ್ಕಾಗಿ ಕರ್ನಾಟಕದ ಉಚ್ಚ ನ್ಯಾಯಾಲಯದ ತೀರ್ಪಿನ ಪ್ರಕಾರ ಜನಪರ ಯೋಜನೆಯನ್ನು ತಯಾರಿಸಿ ಅದನ್ನು ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ತರಬೇಕು.

   ಸಿ.ಎ. ಸುಬ್ಬಯ್ಯ ಮತ್ತಿತರರುತ/ ಸರಕಾರ ಮೊಕದ್ದಮೆಯಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯ ತೀರ್ಪು ಕೊಟ್ಟಿದೆ. ಉಚ್ಚ ನ್ಯಾಯಾಲಯದ ತೀರ್ಪಿನಲ್ಲಿರುವ ಅಂಶವನ್ನು ಸರಕಾರ ಅನುಷ್ಠಾನಕ್ಕೆ ತಂದಿಲ್ಲ, ಆದ್ದರಿಂದಲೇ ಇಂದಿಗೂ ವನ್ಯ ಜೀವಿಗಳಿಂದ ಧಾಳಿ ಮತ್ತು ನಾಶ ನಷ್ಟಗಳು ಉಂಟಾಗುತ್ತಿವೆ. ಉಚ್ಚ ನ್ಯಾಯಾಲಯದ ತೀರ್ಪಿನಲ್ಲಿರುವ ಜನಪರ ಅಂಶಗಳಿಗನುಗುಣವಾಗಿ ಕ್ರಿಯಾ ಯೋಜನೆ ರೂಪಿಸಿ ಜನರ ಸಕ್ರಿಯ ಸಹಭಾಗಿತ್ವದೊಂದಿಗೆ ಪ್ರಾಮಾಣಿಕವಾಗಿ ಅನುಷ್ಠಾನಕ್ಕೆ ತರುವಂತೆ ಸರಕಾರದ ಮೇಲೆ ಒತ್ತಡ ಹೇರಬೇಕಾಗಿದೆ.

ಇದರೊಂದಿಗೇ

1. ಆನೆ ಮತ್ತಿತರ ವನ್ಯ ಮೃಗಗಳ ಧಾಳಿಯಿಂದ ಮರಣ ಹೊಂದಿದವರ ಕುಟುಂಬಕ್ಕೆ 20 ಲಕ್ಷ ರೂ. ಪರಿಹಾರ ಕೊಡಬೇಕು ಮತ್ತು ಅಂತಹವರ ಕುಟುಂಬದವರಿಗೆ ಸರಕಾರೀ ಉದ್ಯೋಗ ಕೊಡಬೇಕು.
2. ಆನೆ ಮತ್ತಿತರ ವನ್ಯ ಮೃಗಗಳ ಧಾಳಿಯಿಂದ ಅಂಗವಿಕಲರಾದವರಿಗೆ 10 ಲಕ್ಷ ಪರಿಹಾರ ಕೊಡಬೇಕು.
3. ತೋಟಗಳಲ್ಲಿ ಕಾರ್ಮಿಕರು ಕೆಲಸ ಮಾಡುವ ಸಂದರ್ಭದಲ್ಲಿ ಅವರ ರಕ್ಷಣೆಗೆ ಅರಣ್ಯ ಇಲಾಖೆಯ ಗನ್ ಮ್ಯಾನ್‌ಗಳನ್ನು ನೇಮಿಸಬೇಕು.
4. ಆನೆ ಮತ್ತಿತರ ವನ್ಯ ಮೃಗಗಳ ಹಾವಳಿಯಿಂದ ಬಾಧಿತ ಪ್ರದೇಶಗಳಲ್ಲಿ ಶಾಲಾ ಮಕ್ಕಳನ್ನು ಶಾಲೆಗೆ

ಪುಟ 15 ಕ್ಕೆ

ನಮ್ಮ ದೇಶದ ಆರ್ಥಿಕತೆಗೆ ಗಮನಾರ್ಹ ಕೊಡುಗೆ ಕೊಡುತ್ತಿರುವ ಈ ಬೆಳೆಯ ಬೆಳೆಗಾರರನ್ನು ಸಂಘಟಿಸಿ ಅವರ ಸಮಸ್ಯೆಗಳಿಗೆ ಪರಿಹಾರ ಒದಗಿಸಿಕೊಡಬೇಕೆಂದು ಅಖಿಲ ಭಾರತ ಕಿಸಾನ್ ಸಭಾದ ರಾಷ್ಟ್ರ ನಾಯಕತ್ವ ತೀರ್ಮಾನಿಸಿತು. ಈ ತೀರ್ಮಾನದ ಆಧಾರದಲ್ಲಿ 22–10–18 ರಂದು ಬೆಂಗಳೂರಿನ ಎಸ್.ಸಿ.ಎಂ. ಹೌಸ್‌ನಲ್ಲಿ ಕಾಫಿ ಬೆಳೆಗಾರರ ಅಖಿಲ ಭಾರತ ಸಮಾವೇಶವನ್ನು ಆಯೋಜಿಸಲಾಗಿತ್ತು.

ಕರ್ನಾಟಕ, ಕೇರಳ ಮತ್ತು ತಮಿಳ್ನಾಡು ರಾಜ್ಯಗಳಿಂದ ಮತ್ತು ಕೆ.ಜಿ.ಎಫ್. ಸಂಘಟನೆಯಿಂದ ಪ್ರತಿನಿಧಿಗಳು ಭಾಗವಹಿಸಿದ್ದರು. ಕೆ.ಜಿ.ಎಫ್.ನ ಪ್ರಧಾನ ಕಾರ್ಯದರ್ಶಿಯವರೂ ಭಾಗವಹಿಸಿದ್ದರು. ಸಮಾವೇಶದ ಕೊನೆಯಲ್ಲಿ 11 ಸದಸ್ಯರ ಸಂಘಟನಾ ಸಮಿತಿಯನ್ನು ರಚಿಸಲಾಗಿತ್ತು. ಎ.ಐ.ಕೆ.ಎಸ್.ನ ಪಿ. ಕೃಷ್ಣಪ್ರಸಾದ್ ಸಂಚಾಲಕರಾಗಿ ಆಯ್ಕೆಯಾಗಿದ್ದರು.

ಅನಂತರ ಕೊರೊನಾ ಮತ್ತಿತರ ಕಾರಣಗಳಿಂದ ಈ ಸಮಿತಿಗೆ ಸೇರಲೂ ಚಟುವಟಿಕೆಗಳನ್ನು ಮುಂದುವರಿಸಲೂ ಸಾಧ್ಯವಾಗಿರಲಿಲ್ಲ.

ಈಗ 2022ರಲ್ಲಿ ಕೇಂದ್ರ ನಾಯಕತ್ವದ ತೀರ್ಮಾನದಂತೆ ಈ ಸಂಘಟನೆಯ ವಿಸ್ತೃತ ಸಭೆಯು ಕೊಡಗು ಜಿಲ್ಲೆಯ ವಿರಾಜಪೇಟೆಯಲ್ಲಿ ಜೂನ್ 11 ಮತ್ತು 12 ರಂದು ನಡೆಯಿತು. ಈ ಸಭೆಯಲ್ಲಿ ಕಾಫಿ ಬೋರ್ಡಿನ ಡೆಪ್ಯುಟಿ ಡೈರೆಕ್ಟರ್ ಬಿ.ಶಿವಕುಮಾರ ಸ್ವಾಮಿ, ಕರ್ನಾಟಕ ರಾಜ್ಯ ಪ್ಲಾಂಟೇಶನ್ ಫೆಡರೇಶನ್‌ನ ಕಾರ್ಯಾಧ್ಯಕ್ಷ ಧರ್ಮೇಶ್, ಪಿ. ಸುಂದರಯ್ಯ ಸ್ಮಾರಕ ಟ್ರಸ್ಟ್‌ನ ನಿದೀಶ್‌ಜೆ. ವಿಲ್ಲಾಟ್, ಬ್ರಹ್ಮಗಿರಿ ವೈನಾಡು ಕಾಫಿ ಸಂಸ್ಥೆಯ ಕೆ.ಆರ್. ಜುಬ್ನು, ಕೇರಳದ 'ತಾನಾಯಿ'ಯ ಡೈರೆಕ್ಟರ್ ಸಿ. ಜಯಕುಮಾರ್, ಎಗ್ರಿಬಾಜ಼ಾರ್ ನ ಸೀನಿಯರ್ ಮೇನೇಜರ್ ದೇವಿ ಚೆರಿಮುಲ್ಲಾ ಪ್ರಬಂಧ ಮಂಡಿಸಿ ಮಾತನಾಡಿದರು

ಕೊಡಗಿನ ದುರ್ಗಾ ಪ್ರಸಾದ್ ಕೊಡಗಿನಲ್ಲಿ ಕಾಫಿಯ ಬಗ್ಗೆ ವಿವರಣೆ ಕೊಟ್ಟು ಬೇಡಿಕೆಗಳನ್ನು ಮಂಡಿಸಿದರು. ಕರ್ನಾಟಕ ಬೆಳೆಗಾರರ ಫೆಡರೇಶನ್ನಿನ ಬೋಸ್ ಮಂದಣ್ಣ, ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಮುಖಂಡ ಮತ್ತು ಹಾಸನ ರೈತ ಮುಖಂಡ ನವೀನ್, ಅ.ಭಾ.ಕಿ.ಸ.ದ ತಮಿಳ್ನಾಡು ಘಟಕದ ಅಧ್ಯಕ್ಷ ಡಿ.ರವೀಂದ್ರನ್ ಮತ್ತು ಅ.ಭಾ.ಕಿ.ಸ.ದ ಕೇರಳ ಘಟಕದ ಪಿ.ಕೆ. ಸುರೇಶ್ ವಿರಾಜಪೇಟೆಯ ಅಬ್ದುಲ್ ಲತೀಫ್ ತಮ್ಮ ರಾಜ್ಯಗಳಲ್ಲಿನ ಅನುಭವಗಳನ್ನು ಹಂಚಿಕೊಂಡರು.

ಅನಂತರ ಪಿ. ಕೃಷ್ಣ ಪ್ರಸಾದ್‌ರವರು ಕಾಫಿ ಬೆಳೆಗಾರರ ಸಂಘಟನೆಯನ್ನು ಕಟ್ಟಿ ಬೆಳೆಸುವುದರ ಬಗ್ಗೆ ವಿವರಣೆ ಕೊಟ್ಟರು. ಭವಿಷ್ಯದ ಯೋಜನೆಗಳ ರೂಪರೇಶೆಯನ್ನು ಮಂಡಿಸಿದರು. ಬೇಡಿಕೆಗಳ ಸ್ಥೂಲ ಪಟ್ಟಿಯನ್ನೂ ಮಂಡಿಸಿದರು.

12 ರಂದು ಮಧ್ಯಾಹ್ನ ವಿಚಾರ ಸಂಕಿರಣ ನಡೆಯಿತು. ವಿಚಾರ ಸಂಕಿರಣದ ಅಧ್ಯಕ್ಷತೆಯನ್ನು ನವೀನ್‌ಕುಮಾರ್‌ರವರು ವಹಿಸಿದ್ದರು. ದುರ್ಗಾ ಪ್ರಸಾದ್ ಸ್ವಾಗತಿಸಿ ಅಬ್ದುಲ್ ಲತೀಫ್‌ರವರು ವಂದನಾರ್ಪಣೆ ಸಲ್ಲಿಸಿದರು. ಡಾ. ವಿಜುಕೃಷ್ಣನ್, ಪಿ. ಕೃಷ್ಣಪ್ರಸಾದ್ ಮತ್ತು ಕೊಡಗು ಸಣ್ಣ ಬೆಳೆಗಾರರ ಸಂಘದ ಸಿ.ಎ. ಸುಬ್ಬಯ್ಯನವರು ಮಾತನಾಡಿದರು.

ಎರಡು ದಿನಗಳ ಕಾರ್ಯಕ್ರಮಕ್ಕೆ ಎ.ಐ.ಕೆ.ಎಸ್.ನ ರಾಷ್ಟ್ರ ಮಟ್ಟದ ಸಮಿತಿಯ ನಾಯಕರುಗಳಾದ ಪಿ. ಕೃಷ್ಣ ಪ್ರಸಾದ್, ಡಾ. ವಿಜುಕೃಷ್ಣನ್, ನಿಧೀಶ್ ಜೆ. ವಿಲ್ಲಾಟ್ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯಾಧ್ಯಕ್ಷರಾದ ಬಯ್ಯಾರೆಡ್ಡಿ ಮತ್ತು ರಾಜ್ಯ ಮುಖಂಡರಾದ ನವೀನ್‌ಕುಮಾರ್ ನಾಯಕತ್ವ ಕೊಟ್ಟರು.



ಮನರೇಗಾದಲ್ಲಿ ಹಾಜರಾತಿ “ಆ್ಯಪ್” ಪರಿಹಾರದ ಬದಲು ಅವ್ಯವಸ್ಥೆ ಸೃಷ್ಟಿ

ಮನರೇಗಾದಲ್ಲಿ ಹಾಜರಾತಿಯ ಮೇಲೆ ನಿಗಾ ಇಡಲು ತಂದಿರುವ ಆ್ಯಪ್ ಗೆ ಮನರೇಗಾ ಹೇಗೆ ನಿಜವಾಗಿ ಕೆಲಸ ಮಾಡುತ್ತದೆ ಎಂಬುದರ ಅರಿವೇ ಇದ್ದಂತಿಲ್ಲ. ಸೋಶಿಯಲ್ ಆಡಿಟಿಂಗ್ ಎಂಬುದನ್ನು ಮತ್ತು ಗ್ರಾಮಸಭಾಗಳನ್ನು ಬಲಪಡಿಸುವ ಬದಲು, ಗ್ರಾಮೀಣ ಅಭಿವೃದ್ಧಿ ಮಂತ್ರಾಲಯವು ಸುಲಭವಾಗಿ ಅರ್ಥವಾಗದ ಹಾಗೂ ಮೂಲಭೂತವಾಗಿ ಕೆಲಸಗಾರರಿಗೆ ಎಟುಕದ ತಂತ್ರಜ್ಞಾನ ಸುಧಾರಣೆಗಳನ್ನು ಜಾರಿ ಮಾಡಲು ಉತ್ಸುಕವಾಗಿರುವಂತಿದೆ. ಇದು ಮನರೇಗಾದಲ್ಲಿ ಅಡಕವಾಗಿರುವ ಪಾರದರ್ಶಕತೆ ಮತ್ತು ನಾಗರಿಕರ ಪಾಲ್ಗೊಳ್ಳುವಿಕೆಯ ತತ್ವಗಳಿಗೆ ವಿರುದ್ಧವಾಗಿದೆ. ಈ ಆ್ಯಪ್ ಮನರೇಗಾ ಕಾಯಿದೆಯ ಬುನಾದಿಯಾಗಿರುವ ಕೆಲಸದ ಹಕ್ಕು ತತ್ವವನ್ನು ಶಿಥಿಲಗೊಳಿಸುತ್ತದೆ ಎನ್ನುತ್ತಾರೆ ಇದರ ಅಧ್ಯಯನ ಮಾಡಿರುವ ಲಿಬ್‌ಟೆಕ್ ಇಂಡಿಯ ಸಂಸ್ಥೆಯ ಚಕ್ರಧರ್ ಬುದ್ಧ ಮತ್ತು ಲಾವಣ್ಯ ತಮಂಗ್. (ಕೃಪೆ: ದಿ ಹಿಂದು, ಜೂನ್ 25, 2022)

ಚಕ್ರಧರ್ ಬುದ್ಧ ಮತ್ತು **ಲಾವಣ್ಯ ತಮಂಗ್** ಅನು: **ಶ್ರೀಂಶನಾ**

ಮೇ 2021 ರಲ್ಲಿ ಗ್ರಾಮೀಣ ಅಭಿವೃದ್ಧಿ ಮಂತ್ರಾಲಯವು ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಕಾಯ್ದೆ(ಮನರೇಗಾ) ಕೆಲಸಗಳಲ್ಲಿ “ನಾಗರಿಕ ನಿಗಾ ಮತ್ತು ಪಾರದರ್ಶಕತೆ ಹೆಚ್ಚಿಸುವ” ಉದ್ದೇಶದಿಂದ ರಾಷ್ಟ್ರೀಯ ಮೊಬೈಲ್ ನಿಗಾ ತಂತ್ರಜ್ಞಾನ (NMMS) ಆ್ಯಪ್ ಎಂಬ ಹೊಸ ಅಪ್ಲಿಕೇಷನ್ ಅನ್ನು ಪ್ರಾರಂಭಿಸಿತು. ಇದನ್ನು ಮನರೇಗಾ ಕೆಲಸದ ಸ್ಥಳಗಳ ನಿಗಾವಹಿಸಲು ತರಬೇತಿ ನೀಡಲಾಗುವ ಮನರೇಗಾ ಸಹ-ಕೆಲಸಗಾರರು(Mate) ಮತ್ತು ಪಂಚಾಯತಿ ಮಟ್ಟದ ಸ್ಥಳೀಯ ಮಹಿಳೆಯರು ನಿಯೋಜಿಸಬೇಕು. ಈ ಆ್ಯಪ್ ನ ಪಂಚಾಯತಿ ಮಟ್ಟದ ಸ್ಥಳೀಯ ಮಹಿಳೆಯರು ನಿಯೋಜಿಸಬೇಕು. ಈ ಆ್ಯಪ್ ನ ಪ್ರಮುಖ ಲಕ್ಷಣವೆಂದರೆ ಪ್ರತಿ ದಿನದಲ್ಲಿ ಅರ್ಧ ದಿನಕ್ಕೊಮ್ಮೆ ನಿಜ ಸಮಯದಲ್ಲಿ ಪ್ರತಿ ಕಾರ್ಮಿಕನ / ಕಾರ್ಮಿಕಳ ಪೋಟೋ ಮತ್ತು ಜಿಯೋ ಲೇಬಲ್ ಹಾಜರಾತಿಯನ್ನು ತೆಗೆದುಕೊಳ್ಳುವುದು. ನಾವು ಹಲವು ರಾಜ್ಯಗಳ ಮನರೇಗಾ ಸಹ-ಕೆಲಸಗಾರರು, ಕೆಲಸಗಾರರು ಮತ್ತು ಚಳುವಳಿಕಾರರ ಜೊತೆ ಈ ಆ್ಯಪ್ ಕುರಿತಾದ ಅವರ ಅನುಭವಗಳನ್ನು ಅರಿಯುವ ಪ್ರಯತ್ನ ಮಾಡಿದೆವು.

ಕಾರ್ಮಿಕರನ್ನು ಬಾಧಿಸುವ ಶರತ್ತುಗಳು

ಇಂತಹ ಆ್ಯಪ್ ನಿಗದಿತ ದುಡಿಮೆಯ ಸಮಯ ಹೊಂದಿರುವ ಕಾರ್ಮಿಕರ ಹಾಜರಾತಿಯ ಬಗ್ಗೆ ನಿಗಾ ಇಡಲು ಅನುಕೂಲವಾಗಬಹುದೇನೋ. ಆದರೆ ಹಲವು ರಾಜ್ಯಗಳಲ್ಲಿ ಮನರೇಗಾ ಕೂಲಿಯನ್ನು ದಿನವೊಂದರಲ್ಲಿ ನಿಗದಿತ ಕೆಲಸದ ಪ್ರಮಾಣದ ಮೇಲೆ ಲೆಕ್ಕ ಹಾಕಲಾಗುತ್ತದೆ ಮತ್ತು ಕಾರ್ಮಿಕರು ನಿಗದಿತ ಸಮಯಕ್ಕೆ ಬದ್ಧರಾಗಬೇಕೆಂದೇನೂ ಇಲ್ಲ. ಹೀಗಾಗಿಯೇ ಮನರೇಗಾಗೆ ವ್ಯಾಪಕ ಬೇಡಿಕೆ ದೊರೆತಿರುವುದು. ಆದರೆ ಈ ಆ್ಯಪ್ ಮೂಲಕ ಹಾಜರಾತಿ ಕಡ್ಡಾಯವಾಗಬೇಕಾದರೆ ಕೆಲಸಗಾರರು ತಮ್ಮ ಕೆಲಸದ ಸ್ಥಳದಲ್ಲಿ ದಿನವಿಡೀ ಇರಲೇಬೇಕು. ಇದು ಮನರೇಗಾ ಕೆಲಸಗಾರರಿಗೆ ಬಹಳ ತೊಂದರೆ ಉಂಟು ಮಾಡುತ್ತದೆ.

ರಾಜಸ್ಥಾನದ ಪ್ರಿಯಾದೇವಿ ತನ್ನ ಮನರೇಗಾ ಕೆಲಸವನ್ನು ಬೆಳಿಗ್ಗೆ 9 ಗಂಟೆಗೆ ಮುಗಿಸಿ, ತಾನು ಮನೆಯಂಗಳದಲ್ಲಿ ಬೆಳೆದ ಉತ್ಪನ್ನಗಳನ್ನು ಮಾರಲು ಸ್ಥಳೀಯ ಮಾರುಕಟ್ಟೆಯಲ್ಲಿ ಅಂಗಡಿ ತೆರೆಯುತ್ತಾರೆ. ಈ NMMS ಆ್ಯಪ್ ಬಂದ ಮೇಲೆ ಆಕೆ ಒಂದೋ ತನ್ನ ಕೆಲಸದ ಸ್ಥಳದಲ್ಲಿ ದಿನವಿಡೀ ಇರಬೇಕು, ಇಲ್ಲವೇ ತನ್ನ ಹಾಜರಾತಿ ಹಾಕಲು ಎರಡು ಬಾರಿ ಪ್ರಯಾಣಿಸಬೇಕು. ತನ್ನ ಅನುಪಸ್ಥಿತಿಯಲ್ಲಿ ಅಂಗಡಿಗೆ ಬರುವ ಗ್ರಾಹಕರನ್ನು ತಾನು ಕಳೆದುಕೊಳ್ಳುತ್ತೇನೆ ಎನ್ನುವ ಆತಂಕ ಆಕೆಯದು. ಆಂಧ್ರ ಪ್ರದೇಶದ ಇನ್ನೋರ್ವ ಕೆಲಸಗಾರರು, ಅವರ ಮಗಳು ತ್ಯಾಪಿಯು ಕೆಲವು ಜವಾಬ್ದಾರಿಗಳನ್ನು ನಿರ್ವಹಿಸಬೇಕಾಗಿರುವುದರಿಂದ ಶಾಲೆಗೆ ಸರಿಯಾಗಿ ಹೋಗುತ್ತಿಲ್ಲ ಎಂದರು.

ಐತಿಹಾಸಿಕವಾಗಿ ಮನರೇಗಾದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಹೆಚ್ಚಿನ ಪ್ರಮಾಣದಲ್ಲಿ ಇರುತ್ತಿದೆ(2021-22 ರಲ್ಲಿ ಶೇ. 54.7 ರಷ್ಟು) ಮತ್ತು ಗ್ರಾಮೀಣ ಭಾಗಗಳಲ್ಲಿ ಮಹಿಳೆಯರ ದುಡಿಯುವ ಸ್ಥಿತಿಯನ್ನು ಬದಲಿಸುವಲ್ಲಿ ಮನರೇಗಾ ಮುಖ್ಯಪಾತ್ರ ವಹಿಸಿದೆ. ಪಾರಂಪರಿಕವಾಗಿ ಮಹಿಳೆಯ ಮೇಲೆ ಬೀಳುವ ಮನೆಯ ಜವಾಬ್ದಾರಿಗಳು ಮತ್ತು ಮನೆಯವರನ್ನು ನೋಡಿಕೊಳ್ಳುವ ಜವಬ್ದಾರಿ ಬೀಳುವುದರಿಂದ, ಈ ಆ್ಯಪ್ ಮಹಿಳಾ ಕೆಲಸಗಾರರ ಮೇಲೆ ಅಸಮ ಪ್ರಮಾಣದಲ್ಲಿ ದುಷ್ಪರಿಣಾಮ ಬೀರುವ ಸಾಧ್ಯತೆ ಇದೆ. ಆ್ಯಪ್ ಮೂಲಕ ಮನರೇಗಾ ಗೆ ಹಾಜರಾತಿ ಹಾಕುವ ಶರತ್ತುಗಳಿಂದಾಗಿ, ಇವರು ಮನರೇಗಾ ಕೆಲಸವನ್ನೇ ಕೈಬಿಡಬೇಕಾದ ಗೊಂದಲಕ್ಕೆ ಈಡಾಗುತ್ತಾರೆ. ಇಂತಹುದೇ ಭಾವನೆಯನ್ನು ದೇಶದಾದ್ಯಂತ ಹಲವು ಮಹಿಳಾ ಕೆಲಸಗಾರರು ನಮಗೆ ತಿಳಿಸಿದರು. ಉದಾ: ಪ್ರಿಯಾದೇವಿ, ತನ್ನ ಇಡೀ ದಿನವನ್ನು ಕೇಳುವ ಮನರೇಗಾ ಗೆ ಬದ್ಧವಾಗುವುದು ಅಥವಾ ಮಾರುಕಟ್ಟೆಯಲ್ಲಿಯೇ ಅಂಗಡಿ ನೋಡಿಕೊಂಡು ಉಳಿಯುವ ಈ ಎರಡು ಆಯ್ಕೆಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೇನೋ ಎನ್ನುವ ಆತಂಕ ವ್ಯಕ್ತಪಡಿಸಿದರು.

ಇತರೆ ಸವಾಲುಗಳು:

ಈ NMMS ಆ್ಯಪ್ ಅನ್ನು ಜಾರಿಗೊಳಿಸುವಲ್ಲಿಯೂ ಸವಾಲುಗಳಿವೆ. ನಿಜ ಸಮಯದ ನಿಗಾ ಇಡಲು ಒಂದು ಸುಭದ್ರ ನೆಟವರ್ಕ್ ಅಗತ್ಯವಿದೆ. ದುರದೃಷ್ಟವಶಾತ್ ಗ್ರಾಮೀಣ ಭಾರತದ ಹಲವೆಡೆ ನೆಟ್‌ವರ್ಕ್ ಸರಿಯಾಗಿಲ್ಲ. ಇದರಿಂದಾಗಿ ಕೆಲಸಗಾರರು ತಮ್ಮ ಹಾಜರಾತಿ ದಾಖಲಿಸಲಾಗದೆ ತಮ್ಮ ಒಂದು ದಿನದ ಕೂಲಿಯನ್ನು ಕಳೆದುಕೊಳ್ಳುವಂತೆ ಆಗುತ್ತದೆ. ಈಗಾಗಲೇ ಕೇರಳ ಮತ್ತು ಝಾರ್ಖಂಡ್ ನ ಕೆಲಸಗಾರರು ತಮ್ಮ ಹಾಜರಾತಿಯನ್ನು ಆ್ಯಪ್ ನಲ್ಲಿ ದಾಖಲಿಸಲು ತೊಂದರೆ ಎದುರಿಸುತ್ತಿದ್ದಾರೆ. ಮೇಲಾಗಿ ತಮಿಳುನಾಡಿನ ಭಿನ್ನ-ಚೇತನ ಕೆಲಸಗಾರರು ತಮ್ಮ ಹಾಜರಾತಿ ದಾಖಲಿಸಲು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ನ್ಯೂಸ್‌ಕ್ಲಿಕ್ ವರದಿ ಮಾಡಿದೆ.

ಈ ಆ್ಯಪ್ ಮನ್‌ರೇಗಾ ಸಹ-ಕೆಲಸಗಾರರ ಮೇಲೂ ದುಷ್ಪರಿಣಾಮ ಬೀರಿದೆ. ಪಂಚಾಯತಿ ಮಟ್ಟದಲ್ಲಿ ಸ್ಥಳೀಯ ಮಹಿಳೆಯರಿಗೆ ಹಾಜರಾತಿ ಮತ್ತು ಕೆಲಸದ ಪ್ರಮಾಣವನ್ನು ನೋಡಿಕೊಳ್ಳುವಂತೆ ಅಧಿಕಾರ ವಹಿಸುವ ಕೆಲಸ ಈ ಸಹ-ಕೆಲಸಗಾರರದು. ಆದರೆ, ಈಗ ಸಹ-ಕೆಲಸಗಾರ ಆಗಬೇಕಾದರೆ ಅವರ ಬಳಿ ಸ್ಮಾರ್ಟ್ ಪೋನ್ ಇರಲೇಬೇಕು. ಈ ಶರತ್ತು ಸ್ಮಾರ್ಟ್ ಪೋನ್ ಹೊಂದಿರದ ಸಹಸ್ರಾರು ಮಹಿಳೆಯರನ್ನು ಸಹ ಕೆಲಸಗಾರರಾಗದಂತೆ ತಡೆಯುತ್ತದೆ.

ಇದೇ ಕಾರಣಕ್ಕಾಗಿ ಈಗಾಗಲೇ ಝಾರ್ಖಂಡ್ ಮತ್ತು ಆಂಧ್ರಪ್ರದೇಶದ ಮಹಿಳೆಯರನ್ನು ಈ ಕೆಲಸದ ಆಯ್ಕೆಯಿಂದ ಹೊರಗಿಡಲಾಗಿದೆ ಎಂಬ ವರದಿ ಇದೆ. ಈಗ ಸ್ಮಾರ್ಟ್ ಫೋನ್ ಹೊಂದಿರುವ ಪುರುಷರಿಗೆ ಸಹಕೆಲಸಗಾರರಾಗಿ ತೆಗೆದುಕೊಳ್ಳಲು ಆದ್ಯತೆ ನೀಡಬಹುದು. ಇಲ್ಲವೇ, ಮಹಿಳೆಯರು Proxy ಅಂದರೆ ಬದಲಿ-ಸಹಕೆಲಸಗಾರರಾಗಬಹುದು- ಅಂದರೆ ಅಧಿಕೃತವಾಗಿ ಮಹಿಳೆಯರು ನೋಂದಾಯಿಸಲ್ಪಡುವುದು, ಆದರೆ ಕೆಲಸ ಮಾಡುವ ಮತ್ತು ಕೂಲಿ ಪಡೆಯುವ ಪುಟುಷರಿಗೆ ಹಸ್ತಾಂತರಿಸುವುದು. ಆಯ್ಕೆಯಾದ ಹಲವರು ತಮಗೆ ಸರಿಯಾದ ತರಬೇತಿ ನೀಡಿಲ್ಲ ಎನ್ನುತ್ತಿದ್ದಾರೆ. ಇದರಿಂದಾಗಿ ಕೆಲಸಗಾರರ ಹಾಜರಾತಿಯನ್ನು ದಾಖಲಿಸುವಲ್ಲಿ ಲೋಪಗಳಾಗಬಹುದು ಮತ್ತು ಕೂಲಿ ಪಾವತಿ ವಿಳಂಬವಾಗಬಹುದು ಅಥವಾ ದೊರಕದಿರಬಹುದು.

ಪ್ರಾಯೋಗಿಕ ಪ್ರಕ್ರಿಯೆಯಲ್ಲಿ ಲೋಪಗಳು

ರಾಜ್ಯಗಳು ಸ್ವಯಂ ಆಗಿ ಈ ಆ್ಯಪ್ ಬಳಸುವ ಮೂಲಕ ಕಳೆದ ವರ್ಷ ಈ ಆ್ಯಪ್ ಅನ್ನು ಪ್ರಾಯೋಗಿಕವಾಗಿ ಆರಂಭಿಸಲಾಯಿತು. ಅಧಿಕಾರಿಗಳು ಮತ್ತು ಚಳುವಳಿಗಾರರು ಈ ಇಡೀ ಪ್ರಾಯೋಗಿಕ ಪ್ರಕ್ರಿಯೆಯ ಜಾರಿಯಲ್ಲಿ ಲೋಪಗಳಿದ್ದವು ಎಂದು ಖಾತ್ರಿ ಪಡಿಸಿದ್ದಾರೆ. ಆದರೆ ಈ ಲೋಪಗಳನ್ನು ಗುರುತಿಸಿದ್ದ ಬಗ್ಗೆಯಾಗಲೀ, ಲೋಪ ಸರಿಪಡಿಸಲು ತೆಗೆದುಕೊಂಡ ಕ್ರಮಗಳ ಬಗ್ಗೆಯಾಗಲೀ ಸಾರ್ವಜನಿಕ ಮಾಹಿತಿ ದೊರೆತಿಲ್ಲ. ನಾವು ಮಾಹಿತಿ ಹಕ್ಕು ಕಾಯಿದೆಯಡಿ ಅರ್ಜಿ ಸಲ್ಲಿಸಿದ್ದರೂ, ಯಾವುದೇ ಸಮಾಧಾನಕರ ಪ್ರತಿಕ್ರಿಯೆ ದೊರೆತಿಲ್ಲ. ಈ ಲೋಪಗಳು ಇರುವ ನಡುವೆಯೇ, ಗ್ರಾಮೀಣ ಅಭಿವೃದ್ಧಿ ಮಂತ್ರಾಲಯವು ಮೇ 13, 2022 ರಂದು ಸುತ್ತೋಲೆಯನ್ನು ಹೊರಡಿಸಿ ಇಪ್ಪತ್ತು ಕೆಲಸಗಾರರಿಗಿಂತ ಮೇಲ್ಪಟ್ಟು ಕೆಲಸ ಮಾಡುವ ಸ್ಥಳಗಳಲ್ಲಿ NMMS ಕಡ್ಡಾಯ ಮಾಡಿದೆ ಮತ್ತು ಅಸಾಧಾರಣ ಪರಿಸ್ಥಿತಿ ಹೊರತುಪಡಿಸಿ ಯಾವುದೇ ಕಾರಣಕ್ಕೂ ದೈಹಿಕ ಹಾಜರು ದಾಖಲಿಸಲು ಅವಕಾಶವಿಲ್ಲ ಎಂದಿದೆ. ಈ ಕಡ್ಡಾಯ ಘೋಷಣೆಯಾದ ಒಂದು ವಾರದೊಳಗೆ ಹಲವು ರಾಜ್ಯಗಳು ಪ್ರಾಯೋಗಿಕ ಹಂತದಲ್ಲಿದ್ದ ಲೋಪಗಳೆ ಈಗಲೂ ಇವೆ ಎಂದು ದೂರುಗಳು ಮತ್ತು ವರದಿಯನ್ನು ಸಲ್ಲಿಸಿದವು. ಈವರೆಗೂ ಗ್ರಾಮೀಣ ಅಭಿವೃದ್ಧಿ ಮಂತ್ರಾಲಯವು ಯಾವುದೇ ಪರಿಹಾರ ಭರವಸೆಯಾಗಲೀ ಅಥವಾ ಕನಿಷ್ಟ ಪ್ರತಿಕ್ರಿಯೆಯನ್ನಾಗಲೀ ನೀಡಿಲ್ಲ.

ಭೌತಿಕ ದಾಖಲೆಗಳಿಲ್ಲ:

ಜಾರಿಯಲ್ಲಿದ್ದ ತೊಂದರೆಗಳಲ್ಲದೆ, ಈ ಆ್ಯಪ್ ನ ಉದ್ದೇಶ ಮತ್ತು ಪರಿಣಾಮಗಳು ಈಗಲೂ ಅಸ್ಪಷ್ಟವಾಗಿವೆ. ಘೋಷಿತ ಉದ್ದೇಶಕ್ಕೆ ವಿರುದ್ಧವಾಗಿ ಈ ಆ್ಯಪ್ ಕಾರ್ಯ ನಿರ್ವಹಿಸುತ್ತಿದೆ. ಕೆಲಸಗಾರರು ದೈಹಿಕ ಹಾಜರಾತಿ ದಾಖಲಿಸಲು ಆಗದಿರುವುದರಿಂದ ಯಾವುದೇ ಭೌತಿಕ ದಾಖಲೆಗಳಿಲ್ಲದೆ ಕೆಲಸಗಾರರಿಗೆ ತಾವು ಹಾಜರಾಗಿದ್ದಕ್ಕೆ ಮತ್ತು ಕೆಲಸ ಮಾಡಿದ್ದಕ್ಕೆ ಯಾವುದೇ ಪುರಾವೆಗಳು ದೊರೆಯುತ್ತಿಲ್ಲ. ಝಾರ್ಖಂಡ್ ನ ಪಶ್ಚಿಮ ಸಿಂಘ್‌ಭುಮ್ ಜಿಲ್ಲೆಯಲ್ಲಿ ಕೆಲಸಗಾರರು ಮನರೇಗಾ ಪ್ರಾಜೆಕ್ಟ್ ಒಂದರಲ್ಲಿ ತಾವು ಕೆಲಸ ಮಾಡಿದ್ದಾಗಿ ಹೇಳೀದರೂ, ಮನರೇಗಾ ಅಂತರ್ಜಾಲದಲ್ಲಿ ಇವರ ಹಾಜರಾತಿ ದಾಖಲೆ ದೊರೆಯುತ್ತಿಲ್ಲ. ಯಾವುದೇ ಭೌತಿಕ ದಾಖಲೆಗಳನ್ನು ಪುರಾವೆಗಳನ್ನಾಗಿ ನೀಡುವ ಅವಕಾಶ ಇಲ್ಲದಿರುವುದರಿಂದ ಇವರುಗಳು ತಾವು ಕೆಲಸವನ್ನು ಮಾಡಿರುವುದಾಗಿ ಪುರಾವೆ ಒದಗಿಸಲಾಗುತ್ತಿಲ್ಲ ಮತ್ತು ಹೀಗಾಗಿ ಪೂರ್ಣ ಎರಡು ವಾರಗಳ ಕೆಲಸದ ಕೂಲಿಯನ್ನು ಕಳೆದುಕೊಳ್ಳುತ್ತಾರೆ. ಇದು ಪಾರದರ್ಶಕತೆ ಮತ್ತು ನಾಗರೀಕ ನಿಗಾ ಎಂಬ ಈ ಆ್ಯಪ್ ನ ಘೋಷಿತ ಉದ್ದೇಶಗಳ ಕಡೆಗಣನೆ ಎಂಬುದು ಬಹಳ ಸ್ಪಷ್ಟ.

ಮನರೇಗಾದಲ್ಲಿ ಹುಸಿ ಹಾಜರಾತಿ ದಾಖಲೆಗಳನ್ನು ನಿರ್ಮಿಸಿ ಹಣವನ್ನು ಕೊಳ್ಳೆ ಹೊಡೆಯುವ ಮೂಲಕ ಭ್ರಷ್ಟಾಚಾರ ಹೆಚ್ಚುತ್ತಲೇ ಇದೆ. ಈ ಭ್ರಷ್ಟಾಚಾರವನ್ನು ತಡೆಯಲು NMMS ಮೂಲಕ ದಾಖಲಾಗುವ ನಿಜ ಸಮಯ, ಜಿಯೋ ಲೇಬಲ್ ಹಾಜರಾತಿ ಒಂದು ವಿಧಾನವಾದರೂ, ಭ್ರಷ್ಟಾಚಾರದ ವ್ಯಾಪಕತೆ ಬಗ್ಗೆಯಾಗಲೀ ಅಥವಾ NMMS ಇದನ್ನು ನಿರ್ಮೂಲಗೊಳಿಸುವಲ್ಲಿ ನಿರ್ವಹಿಸುವ ಪಾತ್ರದ ಕುರಿತಾಗಲೀ ಗ್ರಾಮೀಣ ಅಭಿವೃದ್ಧಿ ಮಂತ್ರಾಲಯವು ಹೆಚ್ಚು ಸ್ಪಷ್ಟತೆ ನೀಡುತ್ತಿಲ್ಲ. ಈ ಆ್ಯಪ್ ನ ಸಾಧನೆಯನ್ನು ಅಳೆಯಲು-ಪಾರದರ್ಶಕತೆ ಬಗ್ಗೆಯಾಗಲೀ ಅಥವಾ ವಿಳಂಬರಹಿತ ಪಾವತಿ ಪ್ರಕ್ರಿಯೆಯನ್ನಾಗಲೀ – ಯಾವುದೇ ಮಾನದಂಡಗಳನ್ನು ನಿಗದಿಪಡಿಸಿಲ್ಲ.

ಸಾಮಾಜಿಕ ಪರಿಶೋಧನೆ ಬಲಪಡಿಸಿ:

ಈ ಆ್ಯಪ್ ಬಗ್ಗೆ ಗಮನ ಹರಿಸುವುದರ ಬದಲು ಅಥವಾ ಇನ್ನಾವುದೇ ಸಂಕೀರ್ಣವಾದ ತಂತ್ರಜ್ಞಾನದ ಸುಧಾರಣೆಗಳನ್ನು ಜಾರಿ ಮಾಡುವ ಬದಲು, ಸಾಮಾಜಿಕ ಪರಿಶೋಧನೆ(ಸೋಶಿಯಲ್ ಆಡಿಟಿಂಗ್)ಯನ್ನು ಬಲಪಡಿಸುವುದು ಅಗತ್ಯ ಎಂದು ನಾವು ಬಲವಾಗಿ ನಂಬುತ್ತೇವೆ. ಸಾಮಾಜಿಕ ಪರಿಶೋಧನೆಗಳು ನಾಗರಿಕ-ಕೇಂದ್ರಿತ ಸಂಸ್ಥೆಗಳು ಮತ್ತು ಇಲ್ಲಿ ತಮ್ಮ ಪಂಚಾಯತಿಗಳಲ್ಲಿ ಮನರೇಗಾ ಕಾರ್ಯ ಹೇಗೆ ನಿರ್ವಹಿಸುತ್ತಿದೆ ಎಂಬುದರ ಬಗ್ಗೆ ನೇರವಾಗಿ ಹೇಳಲು, ಪಾತ್ರ ವಹಿಸಲು ಅಲ್ಲಿನ ನಾಗರೀಕರಿಗೆ ಅವಕಾಶವಿರುತ್ತದೆ. ಸ್ಥಳೀಯ ಹಕ್ಕುದಾರರಿಗೆ ನಿರ್ಧಾರಗಳಲ್ಲಿ ಪಾಲ್ಗೊಳ್ಳಲು ಅವಕಾಶ ನೀಡುವ ಮೂಲಕ ಮತ್ತು ಆಡಳಿತಗಾರರನ್ನು ಹೊಣೆಯಾಗಿಸುವ ಮೂಲಕ ಈ ಹಿಂದೆ ಆಡಿಟ್‌ಗಳು ಚೆನ್ನಾಗಿ ಕೆಲಸ ಮಾಡಿವೆ. ಇಂತಹ ಸಾಮಾಜಿಕ ಪರಿಶೋಧನೆಗಳು ಮತ್ತು ಗ್ರಾಮಸಭಾಗಳನ್ನು ಬಲಪಡಿಸುವ ಬದಲು, ಗ್ರಾಮೀಣ ಅಭಿವೃದ್ಧಿ ಮಂತ್ರಾಲಯವು ಸುಲಭವಾಗಿ ಅರ್ಥವಾಗದ ಹಾಗೂ ಮೂಲಭೂತವಾಗಿ ಕೆಲಸಗಾರರಿಗೆ ಎಟುಕದ ತಂತ್ರಜ್ಞಾನ ಸುಧಾರಣೆಗಳನ್ನು ಜಾರಿ ಮಾಡಲು ಉತ್ಸುಕವಾಗಿರುವಂತಿದೆ.

ನಾಗರಿಕ ನಿಗಾ ಮತ್ತು ಪಾರದರ್ಶಕತೆಯನ್ನು ಉತ್ತಮಗೊಳಿಸಲು ತರಲಾದ ಈ ಆ್ಯಪ್ ಅನ್ನು ಜಾರಿಗೊಳಿಸುವ ಮೊದಲು ಮನರೇಗಾ ಕೆಲಸಗಾರರು, ಕಾರ್ಯನಿರ್ವಾಹಕರು ಅಥವಾ ಸರ್ಕಾರಿ ಮಾರುಕಟ್ಟೆ ಅಧಿಕಾರಿಗಳ ಜೊತೆ ಚರ್ಚಿಸದಿರುವುದು ಒಂದು ಅಣಕವೇ ಸರಿ.

NMMS ಆ್ಯಪ್ ಗೆ ಮನರೇಗಾ ಹೇಗೆ ನಿಜವಾಗಿ ಕೆಲಸ ಮಾಡುತ್ತದೆ ಎಂಬುದರ ಅರಿವಿಲ್ಲ. ಸುಧಾರಣೆಗಳನ್ನು ಜಾರಿ ಮಾಡುವ ಮೊದಲು ಸಂಬಂಧಪಟ್ಟ ಹಿತಾಸಕ್ತಿದಾರರನ್ನು ಸಂಪರ್ಕಿಸದ ಗ್ರಾಮೀಣ ಅಭಿವೃದ್ಧಿ ಮಂತ್ರಾಲಯದ ಈ ಅಭ್ಯಾಸ ಮನರೇಗಾದಲ್ಲಿ ಅಡಕವಾಗಿರುವ ಪಾರದರ್ಶಕತೆ ಮತ್ತು ನಾಗರಿಕರ ಪಾಲ್ಗೊಳ್ಳುವಿಕೆಯ ತತ್ವಗಳಿಗೆ ವಿರುದ್ಧವಾಗಿದೆ. NMMS ನಲ್ಲಿರುವ ಸ್ಪಷ್ಟ ಸಮಸ್ಯೆಗಳಿಂದಾಗಿ ಕೆಲಸಗಾರರಿಗೆ ಮನರೇಗಾದಲ್ಲಿ ದುಡಿಯುವುದು ಇನ್ನಷ್ಟು ಕಷ್ಟವಾಗುತ್ತದೆ ಮತ್ತು ಇದು ಮನರೇಗಾ ಕಾಯಿದೆಯ ಬುನಾದಿಯಾಗಿರುವ ಕೆಲಸದ ಹಕ್ಕು ತತ್ವವನ್ನು ಶಿಥಿಲಗೊಳಿಸುತ್ತದೆ.

ಗ್ರಾಚ್ಯುಟಿ ಕುರಿತ ಸುಪ್ರಿಂ ಕೋರ್ಟ್ ತೀರ್ಪನ್ನು ಜಾರಿಗೊಳಿಸಿ – ಅಂಗನವಾಡಿ ನೌಕರರ ಒಕ್ಕೂಟದ ಆಗ್ರಹ

ಜುಲೈ 26 ರಿಂದ ನವದೆಹಲಿಯಲ್ಲಿ ನಾಲ್ಕು ದಿನಗಳ 'ಮಹಾಪಡಾವ್'ಗೆ ಕರೆ

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ದೇಶದ ಎಲ್ಲಾ ಅಂಗನವಾಡಿ ನೌಕರರಿಗೆ ಮೂಲ ಸಾಮಾಜಿಕ ಭದ್ರತಾ ಕ್ರಮವಾದ ಗ್ರಾಚ್ಯುಟಿಯನ್ನು ನೀಡಬೇಕೆಂದು ಒತ್ತಾಯಿಸಿ, ಅಖಿಲ ಭಾರತ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಒಕ್ಕೂಟ (ಎಐಎಫ್ಎಡಬ್ಲ್ಯುಎಚ್) ಜುಲೈ 26 ರಿಂದ ನವದೆಹಲಿಯಲ್ಲಿ ನಾಲ್ಕು ದಿನಗಳ 'ಮಹಾಪಡಾವ್'ಗೆ ಕರೆ ನೀಡಿದೆ..

ರಾಷ್ಟ್ರ ರಾಜಧಾನಿಯಲ್ಲಿರುವ ಬಿಟಿಆರ್ ಭವನದಲ್ಲಿ ನಡೆದ ಸಮಾವೇಶದಲ್ಲಿ, ಸಿಐಟಿಯುಗೆ ಸಂಯೋಜಿತವಾಗಿರುವ ಅಖಿಲ ಭಾರತ ಅಂಗನವಾಡಿ ಕಾರ್ಯಕರ್ತೆಯು ಮತ್ತು ಸಹಾಯಕಿಯರ ಒಕ್ಕೂಟ(ಎಐಎಫ್ಎಡಬ್ಲ್ಯುಎಚ್) ಸುಪ್ರೀಂ ಕೋರ್ಟ್ ದೇಶದ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಸೇವಾ ಸ್ಥಿತಿಗತಿಗಳನ್ನು ಉತ್ತಮಗೊಳಿಸುವ ಅಗತ್ಯವನ್ನು ಒತ್ತಿಹೇಳಿದ ತೀರ್ಪನ್ನು ಜಾರಿಗೆ ತರಲು ಕೇಂದ್ರವು ತುರ್ತು ಕ್ರಮಗಳನ್ನು ತೆಗೆದುಕೊಳ್ಳಬೇಕು ಒತ್ತಾಯಿಸಿದೆ.

ಈ ವರ್ಷದ ಏಪ್ರಿಲ್‌ನಲ್ಲಿ ನ್ಯಾಯಮೂರ್ತಿಗಳಾದ ಅಜಯ್ ರಸ್ತೋಗಿ ಮತ್ತು ಎ.ಕೆ. ಓಕಾ ಕೇಂದ್ರ ಸರ್ಕಾರದ ಹಿಂದಿನ ಸಮಗ್ರ ಮಕ್ಕಳ ಅಭಿವೃದ್ಧಿ ಯೋಜನೆ (ಐಸಿಡಿಎಸ್) – ಈಗ 'ಸಕ್ಷಮ್ ಅಂಗನವಾಡಿ ಮತ್ತು ಪೋಶನ್ 2.0' ಯೋಜನೆ ಅಡಿಯಲ್ಲಿ ಅಂಗನವಾಡಿ ಆರೈಕೆದಾರರು ಗ್ರಾಚ್ಯುಟಿ ಪಾವತಿ ಕಾಯ್ದೆ, 1972 ರ ಅಡಿಯಲ್ಲಿ ಗ್ರಾಚ್ಯುಟಿಗೆ ಅರ್ಹರಾಗಿದ್ದಾರೆ ಎಂದು ತೀರ್ಪಿತ್ತಿದ್ದಾರೆ.

72 ಪುಟಗಳ ಆ ತೀರ್ಪು, ತಳಮಟ್ಟದಲ್ಲಿ ಹತ್ತು ಹಲವು ಪ್ರಮುಖ ಸೇವೆಗಳನ್ನು ನಿರ್ವಹಿಸುತ್ತಿದ್ದರೂ, ಮಹಿಳೆಯರೇ ಇರುವ ಈ ವಿಭಾಗದ ಉದ್ಯೋಗಿಗಳಿಗೆ ಅತ್ಯಲ್ಪ ಸಂಭಾವನೆ ನೀಡಲಾಗುತ್ತಿದೆ, ಅವರ ದುಃಸ್ಥಿತಿಯನ್ನು "ಗಂಭೀರವಾಗಿ ಗಮನಿಸಿ" ಎಂದು ಕೇಂದ್ರ ಮತ್ತು ರಾಜ್ಯಗಳಿಗೆ ಹೇಳಿತ್ತು. ಸಿಐಟಿಯು–ಸಂಯೋಜಿತ ಗುಜರಾತ್ ರಾಜ್ಯ ಅಂಗನವಾಡಿ ಕರಮಚಾರಿ ಸಂಘ ಸೇರಿದಂತೆ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಂಘಟನೆಗಳು ಸಲ್ಲಿಸಿದ ಅರ್ಜಿಯ ಮೇಲೆ ಈ ತೀರ್ಪು ನೀಡಲಾಗಿದೆ.

ಐಸಿಡಿಎಸ್ ಕೇವಲ ಕಲ್ಯಾಣ ಯೋಜನೆಯಾಗಿರದೆ ಆರು ವರ್ಷದೊಳಗಿನ ಮಕ್ಕಳ ಪೌಷ್ಟಿಕಾಂಶ, ಆರೋಗ್ಯ ಮತ್ತು ಸಂತೋಷದಾಯಕ ಕಲಿಕೆ ಮತ್ತು ಗರ್ಭಿಣಿಯರ ಹಕ್ಕುಗಳನ್ನು ರಕ್ಷಿಸುವ ಸಾಧನವಾಗಿದೆ ಎಂಬ ಎಐಎಫ್ಎಡಬ್ಲ್ಯುಎಚ್ ಕಣ್ಣೋಟವನ್ನು ಈಗ ಸುಪ್ರೀಂ ಕೋರ್ಟ್ ಕೂಡ ಅನುಮೋದಿಸಿದೆ. ತಮ್ಮ ಶ್ರಮವನ್ನು ಗುರುತಿಸಬೇಕು ಎಂದು ವರ್ಷಗಳಿಂದ ಹೋರಾಡುತ್ತಿರುವ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ಈಗಲಾದರೂ ಸೂಕ್ತ ತರಬೇತಿ ಕೊಟ್ಟು ಸರಕಾರೀ ನೌಕರರಾಗಿ ನೇಮಿಸಕೊಳ್ಳಬೇಕು ಎಂದು ಎಐಎಫ್ಎಡಬ್ಲ್ಯುಎಚ್ ಹೇಳಿದೆ.

ಈಗ, ಪೋಶನ್ 2.0 ಯೋಜನೆ ಎನ್ನುವ ಇದನ್ನು ಐಸಿಡಿಎಸ್ ಎಂಬ ಹೆಸರಿನಲ್ಲಿ 1975 ರಲ್ಲಿ ಪ್ರಾರಂಭಿಸಲಾಯಿತು. ಪ್ರಸ್ತುತ, ದೇಶಾದ್ಯಂತ ಲಕ್ಷಗಟ್ಟಲೆ ಸರ್ಕಾರ ನಡೆಸುವ ಹಗಲು ಆರೈಕೆ ಕೇಂದ್ರಗಳಿವೆ. ಇವುಗಳಲ್ಲಿ ಸುಮಾರು 27 ಲಕ್ಷ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕರು ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದಾರೆ. ಇದಕ್ಕೆ ಪ್ರತಿಯಾಗಿ ಅವರಿಗೆ ಕೊಡುತ್ತಿರುವುದು ;ಗೌರವಧನ' ಎಂಬ ಅಲ್ಪ ಮೊತ್ತವನ್ನು ಮಾತ್ರ. ಇದನ್ನು ಹೆಚ್ಚಿಸಬೇಕು ಮತ್ತು ಸಾಮಾಜಿಕ ಭದ್ರತೆ ಒದಗಿಸಬೇಕು ಎಂದು ಅವರು ಒತ್ತಾಯಿಸುತ್ತ ಬಂದಿದ್ದಾರೆ.

ಇತ್ತೀಚಿನ ವರ್ಷಗಳಲ್ಲಿ, ಅಂಗನವಾಡಿ ನೌಕರರು ಸೇರಿದಂತೆ ಸ್ಕೀಮ್ ವರ್ಕರ್‌ಗಳ ವಿವಿಧ ವಿಭಾಗಗಳು ತಮ್ಮ ಗೌರವಧನ ಮತ್ತು ಸಾಮಾಜಿಕ ಭದ್ರತೆಯನ್ನು ಹೆಚ್ಚಿಸುವಂತೆ ಒತ್ತಾಯಿಸಲು ದೇಶಾದ್ಯಂತ ಪ್ರತಿಭಟನೆಗಳನ್ನು ಹೆಚ್ಚಿಸಿವೆ. 2020 ರಿಂದ ದೇಶಾದ್ಯಂತ ಒಟ್ಟು 157 ಪ್ರತಿಭಟನೆಗಳು ನಡೆದಿವೆ ಎಂದು ಅಂದಾಜು ಮಾಡಲಾಗಿದೆ. ಇವನ್ನು "ಗೌರವಧನ"ದ ಕೆಲಸಗಳೆಂದು ವರ್ಗೀಕರಿಸದೆ, "ಉದ್ಯೋಗ' ಎಂದು ಪರಿಗಣಿಸಬೇಕು ಎಂಬ ಬೇಡಿಕೆ ಈ ಹೋರಾಟಗಳ ಭಾಗವಾಗಿದೆ.

ಈ ಹೋರಾಟಗಳ ಮೇಲೆ ಸುಪ್ರಿಂ ಕೋರ್ಟ್ ತೀರ್ಪು "ಸಕಾರಾತ್ಮಕ ಪರಿಣಾಮಗಳನ್ನು" ಹೊಂದಿರುತ್ತದೆ ಎಂದು ಎಐಎಫ್ಎಡಬ್ಲ್ಯುಎಚ್‌ನ ಪ್ರಧಾನ ಕಾರ್ಯದರ್ಶಿ ಎ ಆರ್ ಸಿಂಧು ಹೇಳುತ್ತಾರೆ.

"ಅಂಗನವಾಡಿ ಆರೈಕೆ ನೀಡುವ ಕೆಲಸದ ಸ್ವರೂಪಕ್ಕೆ ಸಂಬಂಧಿಸಿದಂತೆ ಸುಪ್ರಿಂ ಕೋರ್ಟ್ ತೀರ್ಪು ಗಮನಾರ್ಹವಾದ ಟಿಪ್ಪಣಿಗಳನ್ನು ಒಳಗೊಂಡಿದೆ" ಎಂದು ಸಿಂಧು ಹೇಳಿದರು, ನ್ಯಾಯಮೂರ್ತಿ ಓಕಾ ತಮ್ಮ ತೀರ್ಪಿನಲ್ಲಿ ಇದು ಒಂದು ಅರೆಕಾಲಿಕ ಕೆಲಸ ಎಂಬ ತರ್ಕವನ್ನು ಒಪ್ಪಲು ಸಾಧ್ಯವಿಲ್ಲ ಎಂದು ಟಿಪ್ಪಣಿ ಮಾಡಿರುವುದು ಗಮನಾರ್ಹವಾಗಿದೆ.

ಈ ಸಂದರ್ಭದಲ್ಲಿ ಫಿರ್ಯಾದುದಾರರ ಪರ ವಾದ ಮಂಡಿಸಿದ ಹಿರಿಯ ವಕೀಲ ಮತ್ತು ಅಖಿಲ ಭಾರತ ವಕೀಲರ ಸಂಘ(ಎಐಎಲ್‌ಯು) ಪ್ರಧಾನ ಕಾರ್ಯದರ್ಶಿಪಿ.ವಿ.ಸುರೇಂದ್ರನಾಥ್, ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಸೇವೆಯನ್ನು ಸರ್ವೋಚ್ಚ ನ್ಯಾಯಾಲಯವು ಇದೇ ಮೊದಲ ಬಾರಿಗೆ ಗಮನಕ್ಕೆ ತಗೊಂಡಿದೆ, ಗೌರವಯುತವಾಗಿ ಗುರುತಿಸಿದೆ ಎಂದು ಸಭೆಯನ್ನುದ್ದೇಶಿಸಿ ಮಾತನಾಡುತ್ತ ಹೇಳಿದರು.

ಅವರ ಪ್ರಕಾರ, ಈ ತೀರ್ಪು ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಬಹುಕಾಲದ ಬೇಡಿಕೆಗಳನ್ನು ಈಡೇರಿಸಲು ದಾರಿ ಮಾಡಿಕೊಡುತ್ತದೆ. ಆದಾಗ್ಯೂ, ನಾವು ಬುಡಮಟ್ಟದ ಸಂಘಟನೆಗಳೊಂದಿಗೆ ಇದರ ಜಾರಿಗಾಗಿ ಹೋರಾಡಬೇಕಾಗುತ್ತದೆ..

ಗ್ರಾಚ್ಯುಟಿಗೆ ಸಂಬಂಧಿಸಿದಂತೆ, ನಿವೃತ್ತ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕರಿಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಕಾನೂನು ಹಕ್ಕುಗಳನ್ನು ಸಲ್ಲಿಸಲು ಗುಜರಾತ್‌ನ ಕಾರ್ಮಿಕ ಸಂಘಗಳು ಈಗಾಗಲೇ ರಾಜ್ಯದ ಸಹಾಯ ಮಾಡಲು ಪ್ರಾರಂಭಿಸಿವೆ ಎಂದು ಸಮಾವೇಶದ ಪ್ರತಿನಿಧಿಗಳನ್ನು ಉದ್ದೇಶಿಸಿ ಮಾತನಾಡುತ್ತ ಹೇಳಿದ ಗುಜರಾತ್ ರಾಜ್ಯ ಅಂಗನವಾಡಿ ಕರಮಚಾರಿ ಸಂಘದ ರಾಜ್ಯ ಅಧ್ಯಕ್ಷ ಅರುಣ್ ಮೆಹ್ತಾ, ಈ ಸಮಾವೇಶದಲ್ಲಿ ಭಾಗವಹಿಸುತ್ತಿರುವವರು, ತಮ್ಮ ರಾಜ್ಯಗಳಲ್ಲಿ ಇದೇ ರೀತಿಯಲ್ಲಿ ದಾವೆಗಳನ್ನು ಸಲ್ಲಿಸಲು ನಿವೃತ್ತರಿಗೆ ಸಹಾಯ ಮಾಡಬೇಕೆಂದು ಒತ್ತಾಯಿಸಿದರು.

"ಮಧ್ಯಪ್ರದೇಶ, ಹರಿಯಾಣ, ಮಹಾರಾಷ್ಟ್ರ ಮತ್ತು ಅಸ್ಸಾಂನ ಕೆಲವು ಭಾಗಗಳಲ್ಲಿ ಇದುವರೆಗೆ ಗ್ರಾಚ್ಯುಟಿಗಾಗಿ ಅಂತಹ ಕ್ಲೈಮ್‌ಗಳನ್ನು ಸಲ್ಲಿಸಲಾಗಿದೆ. ಸುಪ್ರಿಂ ಕೋರ್ಟಿನ ತೀರ್ಪಿನ ಆಧಾರದ ಮೇಲೆ ಅಖಿಲ ಭಾರತ ಆದೇಶವನ್ನು ಹೊರಡಿಸಲು ಕೇಂದ್ರದ ಮೇಲೆ ಒತ್ತಡ ಹೇರಲು ಯೋಜಿಸುತ್ತಿದ್ದೇವೆ. ಮುಂಬರುವ ಮಹಾಪಡಾವ್‌ನಲ್ಲಿ ಇದು ನಮ್ಮ ಪ್ರಮುಖ ಬೇಡಿಕೆಗಳಲ್ಲಿ ಒಂದಾಗಿದೆ" ಎಂದು ಈ ಬಗ್ಗೆ ಮಾತನಾಡುತ್ತ ಎಐಎಫ್ಎಡಬ್ಲ್ಯುಎಚ್ ಪ್ರಧಾನ ಕಾರ್ಯದರ್ಶಿ ಎ.ಆರ್.ಸಿಂಧು ಹೇಳಿದರು.

ಸ್ಕೀಮ್ ವರ್ಕರ್‌ಗಳ ಮೇಲಿನ 45 ಮತ್ತು 46 ನೇ ಭಾರತೀಯ ಕಾರ್ಮಿಕ ಸಮ್ಮೇಳನದ ಶಿಫಾರಸುಗಳನ್ನು ಜಾರಿಗೆ ತರಲು ಕೇಂದ್ರವು ಕ್ರಮಗಳನ್ನು ತೆಗೆದುಕೊಳ್ಳಬೇಕು, ಇದರಲ್ಲಿ ವಿಶೇಷವಾಗಿ ಕನಿಷ್ಠ ವೇತನ, ಪಿಂಚಣಿ ಮತ್ತು ಭವಿಷ್ಯ ನಿಧಿಯ ನಿಬಂಧನೆಗಳನ್ನು ಜಾರಿಗೆ ತರಲು ಇದು ಸೂಕ್ತ ಸಮಯ ಎಂದು ಅಂಗನವಾಡಿ ಒಕ್ಕೂಟವು ಹೇಳಿದೆ.




ಲೂಟಿಕೋರ ಹಾಗೂ ವಿಭಜನಕಾರಿ ರಾಜಕಾರಣಕ್ಕೆ ಎಡ ಮತ್ತು ಪ್ರಜಾಸತ್ತಾತ್ಮಕ ಪರ್ಯಾಯ......... ಪುಟ 8 ರಿಂದ

ಲೂಟಿಕೋರತನಕ್ಕೆದುರಾಗಿ

ನೈಜ ಅಭಿವೃದ್ಧಿಗೆ – ಎಡ ಮತ್ತು ಪ್ರಜಾಸತ್ತಾತ್ಮಕ ಪರ್ಯಾಯ

ಒಂದೆಡೆ ಬಿಜೆಪಿ, ಆರ್.ಎಸ್.ಎಸ್. ಮುಂತಾದ ಕೋಮುವಾದಿಶಕ್ತಿಗಳು ಕಾರ್ಪೊರೇಟ್ ಲೂಟಿಯ ನೆರವಿಗೆ ನಿಂತಿರುವಾಗಲೇ, ಅದೇ ರೀತಿ, ಆಳುವ ಪಕ್ಷಕ್ಕೆದುರಾಗಿ, ವಿರೋಧ ಪಕ್ಷಗಳೆಂದು ಕರೆಸಿಕೊಳ್ಳುವ ಕಾಂಗ್ರೆಸ್, ಜೆಡಿಎಸ್ ಪಕ್ಷಗಳು ಜನತೆಯ ನಿಜವಾದ ಪ್ರತಿಪಕ್ಷಗಳಾಗಿ ಕಾರ್ಯ ನಿರ್ವಹಿಸುವದನ್ನು ಕೈಬಿಟ್ಟು, ಅಧಿಕಾರಶಾಹಿ ಸಂಕುಚಿತ ರಾಜಕಾರಣದಲ್ಲಿ ತೊಡಗಿ, ಲೂಟಿಕೋರತನ ಮುಂದೆ ಸಾಗಲು ಅನುವು ಮಾಡಿಕೊಡುತ್ತಿರುವ ಸಂದರ್ಭದಲ್ಲಿಯೇ, ಇನ್ನೊಂದೆಡೆ, ರಾಜ್ಯದಲ್ಲಿ ಸಣ್ಣ ಶಕ್ತಿಗಳಾದರೂ, ಜನಪರವಾದ, ಎಡ ಮತ್ತು ಜಾತ್ಯಾತೀತ ಪ್ರಜಾಸತ್ತಾತ್ಮಕ ಪಕ್ಷಗಳಾದ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ), ಭಾರತ ಕಮ್ಯುನಿಸ್ಟ್ ಪಕ್ಷ, ಸೋಷಲಿಷ್ಟ್ ಯುನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯುನಿಸ್ಟ್), ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ, ಲೆನಿನ್ ವಾದಿ) ಲಿಬರೇಷನ್, ಅಖಿಲ ಭಾರತ ಫಾರ್ವರ್ಡ್ ಬ್ಲಾಕ್, ಆರ್‌ಪಿಐ (ಅಂಬೇಡ್ಕರ್) ಮತ್ತು ಸ್ವರಾಜ್ ಇಂಡಿಯಾ ಈ ಏಳು ಪಕ್ಷಗಳು ಒಟ್ಟಾಗಿ, ಆಳುವ ವರ್ಗಗಳ ಈ ಲೂಟಿಕೋರತನದ ದುರ್ನೀತಿಗಳ ವಿರುದ್ದ ದುಡಿಯುವ ಜನತೆಯ ಅಭಿವೃದ್ಧಿಯ ಪರವಾದ ಹಾಗೂ ಸೌಹಾರ್ಧ, ಸಮೃದ್ಧ ಹಾಗೂ ಜನತಾ ಕರ್ನಾಟಕ ನಿರ್ಮಾಣಕ್ಕಾಗಿ, ಎಡ ಮತ್ತು ಜಾತ್ಯತೀತ ಪ್ರಜಾಸತ್ತಾತ್ಮಕ ನೀತಿಗಳನ್ನು ರೂಪಿಸಲು ಕ್ರಮವಹಿಸಿವೆ. ಇದೊಂದು ಸಕಾರಾತ್ಮಕ ಹಾಗೂ ಸ್ವಾಗತಾರ್ಹ ಬೆಳವಣಿಗೆಯಾಗಿದೆ. ಇವುಗಳು ಇದಕ್ಕಾಗಿ ಜುಲೈ 16 ರಂದು ರಾಜ್ಯ ಮಟ್ಟದ ರಾಜಕೀಯ ಸಮಾವೇಶವನ್ನು ಸಂಘಟಿಸಲಿವೆ.

ಇವುಗಳು ವಾಸ್ತವಿಕವಾಗಿ ಲೂಟಿಕೋರ ಮತ್ತು ವಿಭಜನಕಾರಿ ಶಕ್ತಿಗಳ ವಿರುದ್ಧ ಜನ ಸಮುದಾಯಗಳನ್ನು ಸಂಘಟಿಸುತ್ತಾ ಒಟ್ಟಾಗಿ ಚಳುವಳಿಯಲ್ಲಿ ತೊಡಗಿವೆ. ರಾಜ್ಯದಲ್ಲಿ ರಾಜಕೀಯ ಶಕ್ತಿಗಳಾಗಿ ಇವುಗಳು ದುರ್ಬಲವಾಗಿದ್ದರೂ, ಜನ ಚಳುವಳಿಗಳನ್ನು ಸಂಘಟಿಸಿ ಪ್ರತಿರೋಧ ಒಡ್ಡುವಲ್ಲಿ ಇವುಗಳು ಪರಿಣಾಮಕಾರಿ ಪಾತ್ರ ಹೊಂದಿವೆ.

ಲೂಟಿಕೋರ ಆಳುವ ವರ್ಗಗಳ ರಾಜಕೀಯ ಪಕ್ಷಗಳಿಗೆ, ಇವುಗಳು ಬಹುತೇಕ ನಿಜವಾದ ದುಡಿಯುವ ವರ್ಗಗಳನ್ನು ಪ್ರತಿನಿಧಿಸುವ ಮತ್ತು ದುಡಿಯುವ ಜನತೆಯ ಮತ್ತು ರಾಜ್ಯದ ನೈಜ ಅಭಿವೃದ್ಧಿಯನ್ನು ಸಾಧಿಸಲು ಶ್ರಮಿಸುವ ಪಕ್ಷಗಳಾಗಿವೆ. ಭಿನ್ನ ಬಿನ್ನವಾದ ಪರ್ಯಾಯ ಹಾದಿಗಳನ್ನು ಹೊಂದಿದ್ದರೂ, ಜನತೆಯ ತುರ್ತು ಪ್ರಶ್ನೆಗಳ ವಿಚಾರದಲ್ಲಿ ಸಮಾನ ಅಭಿಪ್ರಾಯದೊಂದಿಗೆ ಮಧ್ಯ ಪ್ರವೇಶ ನಡೆಸುತ್ತಿವೆ.

ಈ ಏಳು ಪಕ್ಷಗಳೀಗ ಹಲವು ಸುತ್ತಿನ ಮಾತುಕತೆ ಮತ್ತು ಸಭೆಗಳ ಮೂಲಕ ಕರ್ನಾಟಕ ರಾಜ್ಯದ ನೈಜ ಅಭಿವೃದ್ಧಿ ಸಾಧನೆಗಾಗಿ ಕ್ರಮವಹಿಸಿವೆ.

ಕಳೆದ ಸ್ವಾತಂತ್ರ್ಯ ನಂತರ ರಾಜ್ಯದಲ್ಲಿ ಆಡಳಿತ ನಡೆಸಿದ ಕಾಂಗ್ರೆಸ್, ಜೆಡಿಎಸ್ ಮತ್ತು ಬಿಜೆಪಿ ಪಕ್ಷಗಳು ಜನತೆಯ ಮೂಲ ಭೂತ ಸಮಸ್ಯೆಗಳನ್ನು ನಿವಾರಿಸುವಲ್ಲಿ ಘೋರವಾಗಿ ವಿಫಲವಾಗಿರುವುದನ್ನು ಗುರುತಿಸಿವೆ. ಸ್ವಾತಂತ್ರ್ಯ ಹೋರಾಟದ ಘೋಷಣೆಯಾದ ಉಳುವವನನ್ನ ಹೊಲದೊಡೆಯನನ್ನಾಗಿಸಲು ಪರಿಣಾಮಕಾರಿ ಕ್ರಮವಹಿಸದೇ ಹೋದುದರಿಂದ ಈಗಲೂ ಜಾತಿ ಹಾಗೂ ಲಿಂಗ ತಾರತಮ್ಯ, ಅಸ್ಪೃಶ್ಯಾಚರಣೆ ಮುಂದುವರೆದಿದೆ ಎಂದಿವೆ.

ಶ್ರೀಮಂತರು ಹಾಗೂ ಬಡವರ ನಡುವೆ ಭಾರೀ ಅಂತರ ನಿರ್ಮಾಣವಾಗಿರುವುದು, ಅದು ಮತ್ತಷ್ಟು ವ್ಯಾಪಕ ಗೊಳ್ಳುತ್ತಿರುವುದು ಬಡವರು, ದಲಿತರು, ಅಲ್ಪ ಸಂಖ್ಯಾತರು ಮತ್ತು ಮಹಿಳೆಯರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯಗಳ ಮೂಲವಾಗಿದೆಯೆಂದಿವೆಯಲ್ಲದೇ ಜನತೆಯ ಕೊಂಡು ಕೊಳ್ಳುವ ಶಕ್ತಿಯ ತೀವ್ರ ಕುಸಿತವು ಕೈಗಾರಿಕಾಭಿವೃದ್ಧಿಗೆ, ಆ ಮೂಲಕ ನಿರುದ್ಯೋಗ ನಿವಾರಣೆಗೆ ಮತ್ತು ರಾಜ್ಯದ ನೈಜ ಅಭಿವೃದ್ಧಿಗೆ ಮಾರಕವಾಗಿರುವುದನ್ನು ಗುರುತಿಸಿವೆ.

ಇವುಗಳಿಗೆ ಪರ್ಯಾಯವಾಗಿ, ಉಳುವವನನ್ನು ಹೊಲದೊಡೆಯನಾಗಿಸುವುದು, ರೈತ ವಿರೋಧಿ ಕಾಯ್ದೆಗಳನ್ನು ವಾಪಾಸು ಪಡೆದು, ಬೆಂಬಲ ಬೆಲೆ ಕಾಯ್ದೆಯ ಮೂಲಕ ಬೆಂಬಲ ಬೆಲೆ ಖಾತರಿಗೆ ಕಮ. ಋಣ ಮುಕ್ತ ಕಾಯ್ದೆಯ ಮೂಲಕ ರೈತ–ಕೂಲಿಕಾರರ ಸಾಲ ಮನ್ನಗಳಿಗೆ ಕ್ರಮವಹಿಸುವುದು. ಉದ್ಯೋಗ ಖಾತರಿ ವಿಸ್ತರಣೆಯ ಮೂಲಕ ವ್ಯಾಪಕ ಉದ್ಯೋಗ ಸೃಷ್ಠಿಸುವುದು, ಕನಿಷ್ಠ ವೇತನ ಹೆಚ್ಚಳಕ್ಕೆ ಕ್ರಮ, ಮುಂತಾದುವುಗಳ ಮೂಲಕ ಆದಾಯ ಹೆಚ್ಚಿಸಿ, ಸ್ವಾವಲಂಬನೆಗೆ ಕ್ರಮವಹಿಸಿ, ಬಡತನ, ಅನಕ್ಷರತೆ, ಹಸಿವು, ಸಾಲಬಾಧೆಯ ಆತ್ಮಹತ್ಯೆ ಹೆಸರಿನ ಕೊಲೆಗಳು, ನಿರುದ್ಯೋಗ, ಭಿಕ್ಷಾಟನೆ, ಲಿಂಗ ಹಾಗು ಜಾತಿತಾರತಮ್ಯ, ಅಸ್ಪೃಶ್ಯಾಚರಣೆ, ಬಿಟ್ಟಿಚಾಕರಿ, ಜೀತಗಾರಿಕೆ, ದೌರ್ಜನ್ಯದ ದೇವದಾಸಿ ಪದ್ಧತಿ, ದೌರ್ಜನ್ಯದ ವೇಶ್ಯಾವಾಟಿಕೆ, ಕೋಮುವಾದ ಮುಂತಾದ ಮೂಲ ಭೂತ ಸಮಸ್ಯೆಗಳ ನಿವಾರಣೆಗಾಗಿ ಕ್ರಮವಹಿಸುವ ಮತ್ತು ಕೊಂಡುಕೊಳ್ಳುವ ಶಕ್ತಿ ಅಭಿವೃದ್ಧಿಗಾಗಿ, ಆಂತರಿಕ ಮಾರುಕಟ್ಟೆ ವಿಸ್ಥರಣೆಗಾಗಿ, ಸಾರ್ವಜನಿಕ ಬಂಡವಾಳ ಹೂಡಿಕೆಯ ಹೆಚ್ಚಳ, ಕೈಗಾರಿಕಾಭಿವೃದ್ಧಿಯ ವಿಸ್ತರಣೆಯ ಮತ್ತು ಪ್ರದೇಶಿಕ ಅಸಮತೋಲನ ನಿವಾರಣೆಯ ಕ್ರಮಗಳ ಸಾಧನೆಯ ನೀತಿಗಳನ್ನು ರೂಪಿಸಿವೆ. ಖಂಡಿತಾ ಇದೊಂದು ಐತಿಹಾಸಿಕ ಹೆಜ್ಜೆಯಾಗಿದೆ. ಈ ಏಳು ಪಕ್ಷಗಳ ಈ ಐಕ್ಯ ನಡೆ ಖಂಡಿತಾ ಭವಿಶ್ಯದ ಜನತಾ ಕರ್ನಾಟಕದ ನಿರ್ಮಾಣದ ನಾಂದಿಯಾಗಿದೆ. ಈ ಏಳು ಪಕ್ಷಗಳು ಸಮೃದ್ಧ, ಸೌಹಾರ್ಧ ಮತ್ತು ಜನತಾ ಕರ್ನಾಟಕ ನಿರ್ಮಾಣವನ್ನು ಈ ಪರ್ಯಾಯ ನೀತಿಗಳನ್ನು ಪ್ರಚುರಿಸುವ ಮೂಲಕ ಹಾಗೂ ರಾಜ್ಯದ ಎಡ ಮತ್ತು ಜಾತ್ಯಾತೀತ ಪ್ರಜಾಸತ್ತಾತ್ಮಕ ಜನತಾ ಶಕ್ತಿಗಳನ್ನು ಒಗ್ಗೂಡಿಸುವ ಮೂಲಕ ಸಾಧಿಸುವುದಾಗಿ ಘೋಷಿಸಿವೆ.

ಆಳುವ ಲೂಟಿಕೋರ ವರ್ಗಗಳ ಪರ ಆಡಳಿತ ನಡೆಸುವ ಒಂದು ಪಕ್ಷದ ಬದಲಿಗೆ ಮತ್ತೊಂದು ಅದೇ ಲೂಟಿಕೋರರ ಪರವಾಗಿರುವ ನೀತಿಗಳನ್ನು ಜಾರಿಗೆ ತರುವ ಮತ್ತೊಂದು ಪಕ್ಷ ಜನ ಪರ್ಯಾಯವಾಗಲಾರದೆಂದು ಜನತೆಗೆ ಮನವಿ ಮಾಡಿರುವ ಈ ಪಕ್ಷಗಳು ದುಡಿಯುವ ಜನತೆಯ ಪರವಾದ ಪರ್ಯಾಯ ನೀತಿಗಳನ್ನು ಹೊಂದಿರುವ ತಾವುಗಳೇ ಜನತೆಯ ನೈಜ ಪರ್ಯಾಯವೆಂದು ಬಿಂಬಿಸಿಕೊಂಡಿವೆ.



ಪಳೆಯುಳಿಕೆ ಇಂಧನಗಳಿಂದ ನವೀಕರಿಸಬಹುದಾದ ಇಂಧನಗಳತ್ತ: ಕಾರ್ಮಿಕ ವರ್ಗದ ಮುಂದಿರುವ ಸವಾಲುಗಳು



ನ್ಯಾಯಸಮ್ಮತತೆಯನ್ನು ಅಥವಾ 'ಸಲ್ಲುವ ಪರಿವರ್ತನೆ'ಗಳನ್ನು, ಅವು ಎಷ್ಟೇ ಅಪೂರ್ಣವಾಗಿರಲಿ, ಸಂಘಟಿತ ವರ್ಗ ಮಧ್ಯಪ್ರವೇಶಗಳ ಮೂಲಕವೇ ಬಲವಂತವಾಗಿ ಪಡೆದುಕೊಳ್ಳಬೇಕಾಗುತ್ತದೆ. ಆದ್ದರಿಂದ, ಈ ಸ್ಥಿತ್ಯಂತರದ ಪ್ರಶ್ನೆಯನ್ನು ಅದರ ಎಲ್ಲಾ ಆಯಾಮಗಳಲ್ಲಿ, ವರ್ಗ-ತಿಳುವಳಿಕೆಯ ಆಧಾರದ ಮೇಲೆ ಮತ್ತು ಅದರ ಸಂಪೂರ್ಣ ರಾಜಕೀಯ-ಆರ್ಥಿಕ ಆಶಯದೊಂದಿಗೆ ನಿಖರವಾಗಿ ಅರ್ಥಮಾಡಿಕೊಳ್ಳುವ ಅಗತ್ಯವಿದೆ. ಈ ಕಾರ್ಯಭಾರವು ಕಾರ್ಮಿಕ ವರ್ಗದ ಮುಂದಿದೆ.

ಸುದೀಪ್ ದತ್ತ **ಅನು: ಕೆ ಎಂ ನಾಗರಾಜ್**

ಪ್ರಕೃತಿಯಿಂದಲೇ ಮನುಷ್ಯನ ಬದುಕು, ಅಂದರೆ, ಪ್ರಕೃತಿಯೇ ನಮ್ಮ ಶರೀರ,
ಮತ್ತು ನಾವು ಅಳಿಯಬಾರದು ಎಂದಾದರೆ ಪ್ರಕೃತಿಯೊಂದಿಗೆ ನಮ್ಮ ಮಾತು ಕತೆ
ಮುಂದುವರೆಯುತ್ತಲೇ ಇರಬೇಕಾಗುತ್ತದೆ – ಕಾರ್ಲ್ ಮಾರ್ಕ್ಸ್, 1844

ಪಳೆಯುಳಿಕೆ ಇಂಧನಗಳಿಂದ ನವೀಕರಿಸಬಹುದಾದ ಇಂಧನಗಳಿಗೆ ಹೊರಳುವ ಅಗತ್ಯದ ಅಭಿಯಾನವನ್ನು ವಿಶ್ವದ ಕೆಲವು ದೊಡ್ಡ ಕಾರ್ಪೊರೇಟ್ ಸಂಸ್ಥೆಗಳು ಪ್ರಾರಂಭಿಸಿವೆ. ಪರಿಸರ ಸಂಬಂಧಿತ ವಿಪತ್ತುಗಳಿಂದ ಭೂಮಿಯನ್ನು ರಕ್ಷಿಸುವ ಈ ಪವಿತ್ರ ಕಾರ್ಯದಲ್ಲಿ ಭಾರತದ ದೊಡ್ಡ ಕಾರ್ಪೊರೇಟ್ ಸಂಸ್ಥೆಗಳೇನೂ ಹಿಂದೆ ಬಿದ್ದಿಲ್ಲ. ಅದೇ ಸಮಯದಲ್ಲಿ ನಮ್ಮ ಈ ಕುಳಗಳು ಜಾಗತಿಕವಾಗಿ ಅತ್ಯಂತ ಮಾಲಿನ್ಯಕಾರಕ ಪಳೆಯುಳಿಕೆ-ಇಂಧನ ಯೋಜನೆಗಳನ್ನುನಡೆಸುವಲ್ಲಿ ಈಗಲೂ ತೊಡಗಿದ್ದಾರೆ. ಭಾರತದ ಒಂದು ಅತಿ ದೊಡ್ಡ ಕಾರ್ಪೊರೇಟ್ ಸಮೂಹವು ಆಸ್ಟ್ರೇಲಿಯಾದಲ್ಲಿ ಕೈಗೊಂಡಿರುವ ಕಲ್ಲಿದ್ದಲು-ಯೋಜನೆಯು ವಿಶ್ವದಲ್ಲೇ ಅತಿ ಹೆಚ್ಚು ಇಂಗಾಲಾಮ್ಲವನ್ನು (ಕಾರ್ಬನ್ ಡೈಆಕ್ಸೈಡ್) ಹೊರಸೂಸುತ್ತದೆ. ಭಾರತದ ಅದೇ ಕಾರ್ಪೊರೇಟ್ ಸಮೂಹವು, ಸರ್ಕಾರದ ಕೃಪಾಪೋಷಣೆಯೊಂದಿಗೆ, ಈಗ ಹಸಿರು-ಶಕ್ತಿಯ ಚಾಂಪಿಯನ್ ಎಂದು ಬಿಂಬಿಸಿಕೊಳ್ಳಲು ಪ್ರಯತ್ನಿಸುತ್ತಿದೆ.

ಈ ಬಂಟ-ಬಂಡವಾಳಶಾಹಿಗಳ ನೇತೃತ್ವದ ಕಾರ್ಪೊರೇಟ್ ಜಗತ್ತು ಹವಾಮಾನ ಬಿಕ್ಕಟ್ಟಿನ ಬಗ್ಗೆ ಕಣ್ಣೀರು ಸುರಿಸುತ್ತಿರುವಾಗ, ಕಾರ್ಮಿಕ ವರ್ಗವು ಮೂಕ ಪ್ರೇಕ್ಷಕನಾಗಿ ಉಳಿಯಲಾಗದು. ನಿಸ್ಸಂಶಯವಾಗಿಯೂ ಅದು ಮಹತ್ವದ ಈ ವಿಷಯವನ್ನು ಚರ್ಚಿಸಬೇಕು ಮತ್ತು ಇರುವುದೊಂದೇ ಭೂಮಿಯನ್ನು ಉಳಿಸಲು ಹೋರಾಡಬೇಕು. ಆದ್ದರಿಂದ, ಹವಾಮಾನ ಬದಲಾವಣೆ-ಹಸಿರು ಇಂಧನದ ಸಂಕಥನವನ್ನು ವರ್ಗ ದೃಷ್ಟಿಕೋನದಿಂದ ಮತ್ತು ಕಾರ್ಮಿಕ ವರ್ಗದ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವ ದೃಷ್ಟಿಯಿಂದ ಅರ್ಥಮಾಡಿಕೊಳ್ಳಬೇಕು.

ಪ್ಯಾರಿಸ್ ಒಪ್ಪಂದ, ಹಸಿರು ಯೋಜನೆಗಳು ಮತ್ತು ಸಲ್ಲುವ ಪರಿವರ್ತನೆ

2008 ಮತ್ತು 2009ರ ವರ್ಷಗಳು ಜಗತ್ತಿನಲ್ಲಿ ಅತಿಯಾದ ಉತ್ಪಾದನೆ, ಲಾಭಗಳ ದರ ಕುಸಿತ, ನಿರುದ್ಯೋಗ ಸೃಷ್ಟಿಸುವ ಹೂಡಿಕೆಗಳ ಹಿಂತೆಗೆತ, ಆದಾಯಗಳಲ್ಲಿ ಕಾರ್ಮಿಕರ ಪಾಲಿನ ಕುಸಿತ, ಮತ್ತು, ದುಡಿಯುವ ಜನತೆಯ ಸಂಕಷ್ಟಗಳು ಹೆಚ್ಚುತ್ತಿದ್ದ ಪರಿಸ್ಥಿತಿಯನ್ನು ಕಂಡವು. ಈ ಎಲ್ಲವೂ ಆಗತಾನೇ ಕಾಣಿಸಿಕೊಳ್ಳಲಾರಂಭಿಸಿದ್ದ ಆರ್ಥಿಕ ಹಿಂಜರಿತದ ಸ್ಪಷ್ಟ ಸಂಕೇತಗಳಾಗಿದ್ದವು. ಸೆಪ್ಟೆಂಬರ್ 2009ರಲ್ಲಿ, ವಿಶ್ವಸಂಸ್ಥೆಯು 'ಗ್ಲೋಬಲ್ ಗ್ರೀನ್ ನ್ಯೂ ಡೀಲ್' (ರೂಸ್‌ವೆಲ್ಟ್ ಅವರ ಹೊಸ ನೀತಿಗಳ ಹೆಸರನ್ನು ಅನುಕರಿಸುವ ರೀತಿಯಲ್ಲಿ) ಎಂಬ ಶೀರ್ಷಿಕೆಯ ಒಂದು ವರದಿಯನ್ನು ಬಿಡುಗಡೆ ಮಾಡಿತು. ನಂತರ ಹಲವಾರು ಇತರ ಹೊಸ ಹೊಸ ಹಸಿರು-ವ್ಯವಹಾರಗಳು ಘೋಷಣೆಯಾದವು. ಅವುಗಳೊಂದಿಗೆ, ಸಲ್ಲುವ ಪರಿವರ್ತನೆ (ಜಸ್ಟ್ ಟ್ರಾನ್ಸಿಷನ್) ಎಂಬ ವಿಚಾರವೂ ಬಂತು. ಈ ಎಲ್ಲಾ ಪ್ರಸ್ತಾಪಗಳೂ ಹಸಿರು-ಕೀನ್ಸ್‌ವಾದ, ಪರಿಸರ ಆಧುನಿಕತಾವಾದ ಮತ್ತು ಕಾರ್ಪೊರೇಟಿಸ್ಟ್ ತಂತ್ರಗಾರಿಕೆಗಳ ಕಲಸುಮೇಲೋಗರಗಳೇ. ಜನವಿರೋಧಿ, ಲಾಭ-ಆಧಾರಿತ ಬಂಡವಾಳಶಾಹಿಯ ಮೂಲ ಸಂರಚನೆಗೆ ಯಾವ ಸವಾಲೂ ಹಾಕದಿರುವ ಇಂತಹ ಕಂತೆ ಕಂತೆ ಭರವಸೆಗಳನ್ನು ನೀಡಲಾಯಿತಾದರೂ ಒಂದೂ ಸಹ ಸಾಕಾರಗೊಳ್ಳಲಿಲ್ಲ.

ಹಿಂದಿನ ಇಡೀ ದಶಕದುದ್ದಕ್ಕೂ ಹವಾಮಾನ ಬದಲಾವಣೆ ಕುರಿತ ಅಂತರ್-ಸರ್ಕಾರ ಸಮಿತಿಯು (ಐಪಿಸಿಸಿ, ಯುಎನ್) ಜಾಗತಿಕ ತಾಪಮಾನ ಏರಿಕೆಗೆ ಸಂಬಂಧಿಸಿದ ಅವಲೋಕನಗಳು ಮತ್ತು ಹವಾಮಾನ ಪರಿಸ್ಥಿತಿಯ ತೀವ್ರತೆಯ ಬಗ್ಗೆ ಹಲವಾರು ವರದಿಗಳನ್ನು ನಿರಂತರವಾಗಿ ಪ್ರಕಟಿಸಿತು. ಹವಾಮಾನ ಬದಲಾವಣೆ ಕುರಿತ 2015ರ ಪ್ಯಾರಿಸ್ ಒಪ್ಪಂದವು ಈ ಶತಮಾನದಲ್ಲಿ ಜಾಗತಿಕ ತಾಪಮಾನ ಏರಿಕೆಯನ್ನು ಕೈಗಾರಿಕಾ-ಪೂರ್ವ ಅವಧಿಯ (1850) ಮೇಲಿನ ಮಟ್ಟಕ್ಕಿಂತ 2 ಡಿಗ್ರಿ ಸೆಲ್ಸಿಯಸ್‌ಗಿಂತ ಕೆಳಗೆ ಇರಿಸುವ ಮೂಲಕ ಹವಾಮಾನ ಬದಲಾವಣೆಯ ಅಪಾಯದ ವಿರುದ್ಧವಾಗಿ ಜಾಗತಿಕ ಪ್ರತಿಕ್ರಿಯೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಒಂದು ಜಾಗತಿಕ ಚೌಕಟ್ಟನ್ನು ರೂಪಿಸಿತು. ತಾಪಮಾನವನ್ನು 1.5ಡಿಗ್ರಿ ಸೆಲ್ಸಿಯಸ್‌ಗಿಂತ ಕೆಳಗೆ ತಗ್ಗಿಸುವುದನ್ನು ಆದ್ಯತೆಯಾಗಿ ಮಾಡಿಕೊಳ್ಳಲಾಯಿತು. ಈ ಉದ್ದೇಶಕ್ಕಾಗಿ ಜಾಗತಿಕ ನಿವ್ವಳ ಇಂಗಾಲಾಮ್ಲ ಹೊರಸೂಸುವಿಕೆಯನ್ನು 2030ರ ವೇಳೆಗೆ 2010ರ ದಶಕದ ಮಟ್ಟದಿಂದ ಶೇ.45ರಷ್ಟನ್ನು ಇಳಿಕೆ ಮಾಡುವ ಮತ್ತು 2050ರ ಸುಮಾರಿಗೆ 'ನಿವ್ವಳ ಶೂನ್ಯ' ಹೊರಸೂಸುವಿಕೆ ತಲುಪುವ ಗುರಿಯನ್ನು ಹೊಂದಲಾಯಿತು. 1997ರ ಕ್ಯೋಟೋ(ಜಪಾನ್) ಶಿಷ್ಟಾಚಾರಕ್ಕೆ ಹೋಲಿಸಿದರೆ, ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ನಡುವಿನ ವ್ಯತ್ಯಾಸ ಮತ್ತು ವಿಭಿನ್ನ ವಿಧಾನವು ಪ್ಯಾರಿಸ್ ಒಪ್ಪಂದದಲ್ಲಿ ಮಬ್ಬುಗೊಂಡಿತು. ಆದಾಗ್ಯೂ, ಬಹುಸಂಖ್ಯಾತ ದೇಶಗಳು ಈ ಪ್ರಸ್ತಾಪವನ್ನು ಒಪ್ಪಿಕೊಂಡವು. ಆದರೆ, ಪಾಶ್ಚಾತ್ಯ ಕೈಗಾರಿಕಾ ದೇಶಗಳ ಮತ್ತು ಬಂಡವಾಳಶಾಹಿ ವರ್ಗದ ಕಡ್ಡಾಯ ಉತ್ತರದಾಯಿತ್ವದ ಕೆಲಸ ಇನ್ನೂ ಬಾಕಿ ಇದೆ.

ಜಾಗತಿಕ ಇಂಗಾಲ ಅಸಮಾನತೆ ವರದಿ, 2022ರ ಪ್ರಕಾರ, ಉತ್ತರ ಅಮೆರಿಕ (ಶೇ.27) ಮತ್ತು ಯುರೋಪ್ (ಶೇ.22) ಒಟ್ಟಾಗಿ 1850ರಿಂದ ಬಿಡುಗಡೆ ಮಾಡಿದ ಮಾನವ-ಪ್ರೇರಿತ ಇಂಗಾಲದ ಸುಮಾರು ಶೇ.50 ಭಾಗಕ್ಕೆ ಜವಾಬ್ದಾರಿ ಹೊಂದಿವೆ. 2019 ರಲ್ಲಿ ಸರಾಸರಿ ಜಾಗತಿಕ ತಲಾ ಹೊರಸೂಸುವಿಕೆಯು ಪ್ರತಿ ವ್ಯಕ್ತಿಗೆ ವರ್ಷಕ್ಕೆ 6.6 ಟನ್‌ಗಳಾಗಿದ್ದರೆ, ಉತ್ತರ ಅಮೆರಿಕದಲ್ಲಿ ಇದು 21 ಟನ್ ಆಗಿತ್ತು. ಜಾಗತಿಕವಾಗಿ, ತಳಭಾಗದ ಶೇ.50ರಷ್ಟು ಮಂದಿಯು ಪ್ರತಿ ವ್ಯಕ್ತಿಗೆ ವರ್ಷಕ್ಕೆ 1.6 ಟನ್, ಮಧ್ಯಮ ಭಾಗದ ಶೇ.40ರಷ್ಟು ಮಂದಿಯು ಪ್ರತಿ ವ್ಯಕ್ತಿಗೆ ವರ್ಷಕ್ಕೆ 6.6 ಟನ್, ಮೇಲಿನ ಶೇ.10ರಷ್ಟು ಮಂದಿಯು ಪ್ರತಿ ವ್ಯಕ್ತಿಗೆ ವರ್ಷಕ್ಕೆ 31 ಟನ್ ಮತ್ತು ಮೇಲ್ತುದಿಯ ಶೇ.1ರಷ್ಟು ಮಂದಿಯು ಪ್ರತಿ ವ್ಯಕ್ತಿಗೆ ವರ್ಷಕ್ಕೆ 110 ಟನ್ ಹೊರಸೂಸಿದ್ದಾರೆ. ಬಂಡವಾಳಗಾರ ವರ್ಗದ ಐತಿಹಾಸಿಕ ಜಾಗತಿಕ ಕೇಂದ್ರಗಳು ಪ್ರಕೃತಿಯ ಈ ವಿನಾಶಕಾರಿ ಸ್ಥಿತಿಗೆ ಕಾರಣವಾಗುವ ಪರಿಸರ-ಅಪರಾಧಿಗಳು ಎಂಬುದು ಈ ಅಂಕಿ ಅಂಶಗಳಿಂದ ಸ್ಪಷ್ಟವಾಗುತ್ತದೆ.

ಮೋಸದ ಪರಿಭಾಷೆ


"ಸಲ್ಲುವ ಬದಲಾವಣೆ"ಯ (ಜಸ್ಟ್ ಟ್ರಾನ್ಸಿಶನ್) ಘೋಷಣೆಯನ್ನು ಈಗ ಮೊಳಗಿಸಲಾಗಿದೆ. ಆಗ ತಾನೇ ಜಾಗತೀಕರಣವನ್ನು ವಿಶ್ವದ ಮೂಲೆ ಮೂಲೆಗಳಲ್ಲಿ ವಿರೋಧಿಸುವ ಪ್ರಕ್ರಿಯೆ ಆರಂಭವಾಗಿದ್ದ ಸಂದರ್ಭದಲ್ಲಿ "ನ್ಯಾಯೋಚಿತ ಜಾಗತೀಕರಣ" ಎಂಬ ಘೋಷಣೆಯನ್ನು ಐಎಲ್‌ಒ(ಅಂತರ್ರಾಷ್ಟ್ರೀಯ ಶ್ರಮ ಸಂಘಟನೆ) ಸಾರ್ವಜನಿಕ ಚರ್ಚೆಗೆ ತಂದಿತ್ತು. 'ಸುಸ್ಥಿರ ಅಭಿವೃದ್ಧಿ'ಯ ಘೋಷಣೆಯು ಅಭಿವೃದ್ಧಿ ಎಂಬುದು ತನ್ನ ದೌರ್ಬಲ್ಯಗಳನ್ನು ಮತ್ತು ಲಾಭದ ಅನಾಗರಿಕ ಸ್ವಾಹಾ ಪ್ರಕ್ರಿಯೆಯನ್ನು ನಗ್ನವಾಗಿ ಬಹಿರಂಗಪಡಿಸಲು ಪ್ರಾರಂಭಿಸಿದಾಗ ಮೊಳಗಿತು. ಸಮಾಜದ ಪದರ ಪದರಗಳಲ್ಲೂ ತೀವ್ರ ಮತ್ತು ಅಸಹ್ಯಕರ ಅಸಮಾನತೆಗಳು ಎದ್ದು ಕಾಣಲಾರಂಭಿಸಿದಾಗ "ಎಲ್ಲರನ್ನೂ ಒಳಗೊಂಡ ಬೆಳವಣಿಗೆ" ಎಂಬ ಘೋಷಣೆಯನ್ನು ಮೊಳಗಿಸಲಾಯಿತು. "ಘನತೆಯ ಉದ್ಯೋಗ" ಎಂಬ ಭರವಸೆಯನ್ನು ನೀಡಿದಾಗ, ದರಲ್ಲಿ ಘನತೆಯೂ ಇರಲಿಲ್ಲ, ಉದ್ಯೋಗವೂ ಇರಲಿಲ್ಲ. ಬದಲಿಗೆ, ಗುಣಮಟ್ಟದ ಉದ್ಯೋಗಗಳೇ ಆತಂಕಕಾರೀ ರೀತಿಯಲ್ಲಿ ಕ್ಷೀಣಿಸಿದವು. ಈ ರೀತಿಯಲ್ಲಿ, ಹೊಸ ಹೊಸ ಪರಿಭಾಷೆಯ ಮೂಲಕ ಬಂಡವಾಳಶಾಹಿ ವರ್ಗವು ಜನರನ್ನು ಮೋಸಗೊಳಿಸಿದೆ. ಈಗ ಈ 'ಸಲ್ಲುವ' 'ಂಬುದು ಕೂಡ ಅವರ್ಮ ಅವಿಶ್ವಸನೀಯ ಮತ್ತು ಜನವಿರೋಧಿ ಯೋಜನೆಗಳನ್ನು ಮಾರಾಟ ಮಾಡುವ ಸಲುವಾಗಿ ಆವಿಷ್ಕರಿಸಿದ ಹೊಸದಾಗಿ ಪದ.

ಅಸ್ತಿತ್ವದಲ್ಲಿರುವ ವ್ಯವಸ್ಥೆಯಿಂದ ಹೈರಾಣಾದ ದುಡಿಯುವ ಜನತೆಯು ವ್ಯವಸ್ಥೆಗೆ ಸವಾಲೆಸೆದು ಬೀದಿಗೆ ಇಳಿದಾಗಲೆಲ್ಲಾ ಜನರ ಗಮನವನ್ನು ಬೇರೆಡೆಗೆ ತಿರುಗಿಸುವ ಉದ್ದೇಶ ಹೊಂದಿದ ಇಂತಹ ಕೊಳಕು ತಂತ್ರಗಳನ್ನು ಬಳಸಲಾಗಿದೆ. 1980ರ ದಶಕದಲ್ಲಿ ಅಮೆರಿಕದಲ್ಲಿ ಹುಟ್ಟಿಕೊಂಡ ಈ "ಸಲ್ಲುವ ಪರಿವರ್ತನೆ" ಯ (ಜಸ್ಟ್ ಟ್ರಾನ್ಸಿಶನ್) ಕಲ್ಪನೆಯನ್ನು ಜಾಗತಿಕ ಬಂಡವಾಳಶಾಹಿಯು 2007–08 ರಿಂದ ಈಚೆಗೆ ಒಂದು ಆಕ್ರಮಣಕಾರಿ ಶೈಲಿಯಲ್ಲಿ, ಯೋಚನೆಗೂ ನಿಲುಕದ ದೈತ್ಯ ಗಾತ್ರದ ಹೂಡಿಕೆಯ ಹೊಸ ಆರ್ಥಿಕ ವಲಯವವೊಂದನ್ನು ರಚಿಸುವ ಉದ್ದೇಶದ ಪ್ರಚಾರವನ್ನು ಆರಂಭಿಸಿತು. ಇದು ಬಿಕ್ಕಟ್ಟಿನಿಂದ ಬಳಲುತ್ತಿರುವ ಬಂಡವಾಳಶಾಹಿಯನ್ನು ತಾತ್ಕಾಲಿಕವಾಗಿ ರಕ್ಷಿಸುವ ಒಂದು ಹತಾಶ ಪ್ರಯತ್ನವಾಗಿದೆ. ಅದನ್ನು ಜಾರಿಗೊಳಿಸುವುದು ಅಷ್ಟು ಸುಲಭವಲ್ಲ ಮತ್ತು ದುಡಿಯುವ ಜನರ ಮೇಲೆ ಇದು ಬೀರುವ ಪರಿಣಾಮವು ಗಂಭೀರವಾಗಿಯೇ ಇರುತ್ತದೆ.

"ಸಲ್ಲುವ ಬದಲಾವಣೆ"ಯ ಭಾರತ ಕಾಂಡ

ಅಂತಾರಾಷ್ಟ್ರೀಯ ಇಂಧನ ಸಂಸ್ಥೆಯ 2020ರ ವರದಿಯ ಪ್ರಕಾರ, ಭಾರತದ ಇಂಧನ ಬೇಡಿಕೆಯ ಸುಮಾರು ಶೇ.70 ರಷ್ಟನ್ನು ಕಲ್ಲಿದ್ದಲು (ಶೇ.44) ಮತ್ತು ತೈಲ (ಶೇ.25) ಪೂರೈಸುತ್ತವೆ. ಭಾರತದ ಶೇ.78ರಷ್ಟು ವಿದ್ಯುತ್ ಕಲ್ಲಿದ್ದಲಿನಿಂದ ಬರುತ್ತದೆ. ದೇಶದ ಒಟ್ಟು ವಿದ್ಯುತ್ ಉತ್ಪಾದನೆಯಲ್ಲಿ ಎನ್‌ಟಿಪಿಸಿ ಶೇ.23ರಷ್ಟು ಕೊಡುಗೆ ನೀಡುತ್ತಿದ್ದು, ಇದರಲ್ಲಿ ಶೇ.70ರಷ್ಟು ವಿದ್ಯುತ್ ಉತ್ಪಾದನೆಯು ಕಲ್ಲಿದ್ದಲಿನ ಮೇಲೆ ಅವಲಂಬಿತವಾಗಿದೆ. ಸರ್ಕಾರಿ ಸ್ವಾಮ್ಯದ ಕೋಲ್ ಇಂಡಿಯಾ ಲಿಮಿಟೆಡ್ (ಸಿಐಎಲ್) ಏಕಮೇವವಾಗಿ

ಪುಟ 14 ಕ್ಕೆ





ಭಾರತದಲ್ಲಿ ಅದಾನಿ ಗುಂಪಿನ 'ಹಸಿರು ಇಂಧನ'ಕ್ಕೆ ರಾಜಾಶ್ರಯ ಮತ್ತು ಆಸ್ಟ್ರೇಲಿಯಾದಲ್ಲಿ ಅದಾನಿಯ ಕಲ್ಲಿದ್ದಲು ಉದ್ಯಮದ ಪರಿಸರ ಮಾಲಿನ್ಯಕ್ಕೆ ಜನಗಳ ವಿರೋಧ

ಕಾರ್ಮಿಕ ವರ್ಗದ ಮುಂದಿರುವ ಸವಾಲುಗಳು........ ಪುಟ 13 ರಿಂದ

ದೇಶದ ಒಟ್ಟು ಕಲ್ಲಿದ್ದಲು ಉತ್ಪಾದನೆಯಲ್ಲಿ ಶೇ. 80ರಷ್ಟು ಪಾಲನ್ನು ಹೊಂದಿದೆ.

ಕೋಲ್ ಇಂಡಿಯಾ ಮತ್ತು ಎನ್‌ಟಿಪಿಸಿ ಒಟ್ಟಾಗಿ ಭಾರತದ ಒಟ್ಟು ಆದಾಯ ಸ್ವೀಕೃತಿಗಳಲ್ಲಿ ಸುಮಾರು ಶೇ.3ರಷ್ಟು ಪಾಲನ್ನು ಹೊಂದಿದ್ದರೆ, ಭಾರತೀಯ ರೈಲ್ವೆಯ ಸರಕು ಆದಾಯದ ಶೇ.50 ರಷ್ಟು ಕಲ್ಲಿದ್ದಲು ಸಾರಿಗೆ ಒಂದರಿಂದಲೇ ಬರುತ್ತದೆ. ಭಾರತದಲ್ಲಿ ಪಳೆಯುಳಿಕೆ ಇಂಧನ ಮತ್ತು ಅದಕ್ಕೆ ಸಂಬಂಧಿಸಿದ ವಲಯಗಳಲ್ಲಿ ಕಡಿಮೆ ಅಂದರೂ 2.15 ಕೋಟಿ ಮಂದಿ ಉದ್ಯೋಗಿಗಳಿದ್ದಾರೆ. ಜಾಗತಿಕವಾಗಿ ಇಂಧನ ವಲಯದ ಬಗ್ಗೆ ಹೇಳುವುದಾದರೆ, ಪಳೆಯುಳಿಕೆ ಇಂಧನ ಕೈಗಾರಿಕೆಗಳಲ್ಲಿ 12.6 ಮಿಲಿಯನ್, ನವೀಕರಿಸಬಹುದಾದ ಇಂಧನ ವಲಯದಲ್ಲಿ 4.6 ಮಿಲಿಯನ್ ಮತ್ತು ಪರಮಾಣು ಇಂಧನ ವಲಯದಲ್ಲಿ 0.8 ಮಿಲಿಯನ್ ನೇರ ಉದ್ಯೋಗಗಳಿವೆ. 2050ರ ವೇಳೆಗೆ ಇಂಧನ ವಲಯದ ಒಟ್ಟು ಉದ್ಯೋಗಗಳಲ್ಲಿ ಶೇ.84ರಷ್ಟು ಉದ್ಯೋಗಗಳು ನವೀಕರಿಸಬಹುದಾದ ಇಂಧನ ವಲಯದಲ್ಲಿರುತ್ತವೆ (ಈ ಉದ್ಯೋಗಗಳ ಮೂರನೇ ಒಂದು ಭಾಗವು ಉಪಕರಣಗಳ ಉತ್ಪಾದನೆಯಲ್ಲಿ ಮತ್ತು ಅವುಗಳ ಅನುಗೊಳಿಸುವಿಕೆಯಲ್ಲಿರುತ್ತವೆ), ಶೇ.11 ರಷ್ಟು ಪಳೆಯುಳಿಕೆ ಇಂಧನ ವಲಯದಲ್ಲಿ ಮತ್ತು ಶೇ.5ರಷ್ಟು ಪರಮಾಣು ವಲಯದಲ್ಲಿರುತ್ತವೆ ಎಂದು ಅಂದಾಜಿಸಲಾಗಿದೆ.

ಅಂದಾಜು ಮಾಡಿದ ಈ ಉದ್ಯೋಗಗಳು ಒಂದು ವೇಳೆ ಸೃಷ್ಟಿಯಾದರೂ ಸಹ, ಸಾಂಪ್ರದಾಯಿಕ ಪಳೆಯುಳಿಕೆ ಇಂಧನ ಕಾರ್ಮಿಕರು, ವಿಶೇಷವಾಗಿ ಕಲ್ಲಿದ್ದಲು ಗಣಿಗಾರರಿಗೆ ಯಾವುದೇ ಪ್ರಯೋಜನ ದೊರಕುವುದಿಲ್ಲ. ಉದ್ಯೋಗಗಳ ಚದುರಿದ ಸ್ವರೂಪವು ಕೆಲಸಗಾರರು ಒಗ್ಗೂಡುವ ಸಾಧ್ಯತೆಯನ್ನೇ ತೊಡೆದುಹಾಕುತ್ತದೆ. ಆದ್ದರಿಂದ ಸಾಮೂಹಿಕ ಚೌಕಾಶಿ, ಉದ್ಯೋಗ ರಕ್ಷಣೆ, ಮುಷ್ಕರದ ಹಕ್ಕು ಮತ್ತು ಇಲ್ಲಿಯವರೆಗೂ ನೂರಕ್ಕೆ ನೂರರಷ್ಟು ಸಂಘಟಿತರಾದ ಪಳೆಯುಳಿಕೆ-ಇಂಧನ ಕಾರ್ಮಿಕರು ಗಳಿಸಿದ ಹಕ್ಕುಗಳು ಇಲ್ಲವಾಗುತ್ತವೆ.

ಜಾಗತಿಕ ಪರಿಸ್ಥಿತಿಗೆ ಹೋಲಿಸಿದರೆ ಭಾರತದ ಇಂಧನ ವಲಯವು ಒಂದು ಅಪವಾದವಾಗಿ ಕಾಣುತ್ತದೆ. ಏಕೆಂದರೆ, ಶೇ.90 ರಷ್ಟು ಕಲ್ಲಿದ್ದಲು, ಶೇ.57ರಷ್ಟು ತೈಲ ಸಂಸ್ಕರಣೆ; ವಿದ್ಯುತ್ ಉತ್ಪಾದನೆಯ ಶೇಕಡಾ 51 ರಷ್ಟು ಮತ್ತು ಅದರ ಚಿಲ್ಲರೆ ವಿತರಣೆಯನ್ನು ಪೂರ್ಣವಾಗಿ ಸರ್ಕಾರದಿಂದ ನಿರ್ಮಿಸಲ್ಪಟ್ಟ ಸಾರ್ವಜನಿಕ ಉದ್ದಿಮೆಗಳು ನಿರ್ವಹಿಸುತ್ತವೆ. ಭಾರತದ ಉಷ್ಣ ಸ್ಥಾವರಗಳ ಸಾಮರ್ಥ್ಯದ ಶೇ.64ರಷ್ಟನ್ನು ಸಾರ್ವಜನಿಕ ಉದ್ದಿಮೆಗಳು ಹೊಂದಿರುವ ಸನ್ನಿವೇಶಕ್ಕೆ ಹೋಲಿಸಿದರೆ, ಬಂಟ-ಬಂಡವಾಳಗಾರರಿಗೆ ಕೊಡುಗೆಗಳ ಸುರಿಮಳೆಯನ್ನೇ ಸುರಿಸುವ ಮೋದಿ ಸರ್ಕಾರದ ನೀತಿಯಿಂದಾಗಿ, ನವೀಕರಿಸಬಹುದಾದ ಇಂಧನಗಳ ಸ್ಥಾಪಿತ ಸಾಮರ್ಥ್ಯದ ಶೇ.96ರಷ್ಟು ಭಾಗವು ಖಾಸಗಿ ಕಾರ್ಪೊರೇಟ್‌ಗಳ ಕೈಯಲ್ಲಿದೆ. 2021ರ ಗ್ಲಾಸ್ಗೋದಲ್ಲಿ ನಡೆದ ಸಿಒಪಿ26ರಲ್ಲಿ, ಭಾರತವು 2030ರ ವೇಳೆಗೆ ತನ್ನ ಇಂಧನ ಅಗತ್ಯದ ಅರ್ಧದಷ್ಟನ್ನು ನವೀಕರಿಸಬಹುದಾದ ಇಂಧನಗಳಿಂದ ಪೂರೈಸಿಕೊಳ್ಳುವುದಾಗಿ ಪ್ರತಿಜ್ಞೆ ಮಾಡಿದೆ.

ಈ ನಡುವೆ, ಮೋದಿ ಸರ್ಕಾರವು ರಾಷ್ಟ್ರೀಯ ನಗದೀಕರಣ (ಎನ್‌ಎಂಪಿ) ಯೋಜನೆಯ ಮೂಲಕ, ಕಲ್ಲಿದ್ದಲು ಗಣಿಗಳು, ಪೆಟ್ರೋಲಿಯಂ ಸಾಗಣೆಯ ಕೊಳವೆ ಜಾಲವನ್ನು, ವಿದ್ಯುಚ್ಛಕ್ತಿ ಸರಬರಾಜು ಜಾಲವನ್ನು, ಆಪ್ಟಿಕಲ್ ಫೈಬರ್ ಜಾಲವನ್ನು ಮತ್ತು ವಿಶೇಷವಾಗಿ ಸಾರ್ವಜನಿಕ ವಲಯವು ನವೀಕರಿಸಬಹುದಾದ ಇಂಧನವನ್ನು ಉತ್ಪಾದಿಸುವಂತಹ ಆಸ್ತಿಗಳನ್ನು ಬಂಟ-ಬಂಡವಾಳಗಾರರಿಗೆ ಹಸ್ತಾಂತರಿಸಲಿದೆ. ನವೀಕರಿಸಬಹುದಾದ ಇಂಧನ ವಲಯದಲ್ಲಿ ಸರ್ಕಾರವು 'ಉಸ್ತುವಾರಿ'ಯ ಪಾತ್ರವನ್ನು ವಹಿಸುತ್ತದೆ ಮತ್ತು ಖಾಸಗಿ ಕಾರ್ಪೊರೇಟ್‌ಗಳ ಏಕಸ್ವಾಮ್ಯವನ್ನು ಖಾತರಿಪಡಿಸುತ್ತದೆ ಎಂಬುದನ್ನು ನೀತಿ ಆಯೋಗವೇ ಸ್ಪಷ್ಟಪಡಿಸಿದೆ.

ಆದ್ದರಿಂದ, ಭಾರತದಲ್ಲಿ ನವೀಕರಿಸಬಹುದಾದ ಇಂಧನಗಳಿಗೆ ಹೊರಳುವ ಈ ಪ್ರಕ್ರಿಯೆಯಲ್ಲಿ ಭಾರತದ ಇಂಧನ ವಲಯವನ್ನು ದೇಶೀಯ-ವಿದೇಶಿ ಕಾರ್ಪೊರೇಟ್‌ಗಳ ವಶಕ್ಕೊಪ್ಪಿಸಲಾಗುವುದು ಎಂಬುದು ಸ್ಪಷ್ಟವಾಗುತ್ತದೆ ಮತ್ತು ಸಾರ್ವಜನಿಕ ಬೊಕ್ಕಸದಿಂದ ದೊಡ್ಡ ಪ್ರಮಾಣದ ಸಬ್ಸಿಡಿಗಳನ್ನು ಒದಗಿಸುವ ಮೂಲಕ ಈ ಪ್ರಕ್ರಿಯೆಯನ್ನು ಪ್ರೋತ್ಸಾಹಿಸಲಾಗುವುದು. ಉದ್ಯೋಗ ನಾಶದಿಂದಾಗಿ ಪಳೆಯುಳಿಕೆ-ಇಂಧನ ವಲಯದ ಅಂಚಿನಲ್ಲಿರುವ ಕೋಟ್ಯಂತರ ಕಾರ್ಮಿಕರು ಮತ್ತು ಸಂಬಂಧಿತ ಸೇವೆಗಳಲ್ಲಿ ತೊಡಗಿರುವ ಕಾರ್ಮಿಕರು ವಿನಾಶಕಾರಿ ಪರಿಣಾಮಗಳಿಗೆ ಒಳಗಾಗುತ್ತಾರೆ.

ಬಂಡವಾಳಶಾಹಿ: ಪ್ರಕೃತಿ ಮತ್ತು ಶ್ರಮಿಕರ ಶತ್ರು

ಶ್ರಮ ಮತ್ತು ಪರಿಸರ ಈ ಎರಡರ ಬಿಕ್ಕಟ್ಟು, ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಅಂತರ್ಗತವಾಗಿರುವ ಬಿಕ್ಕಟ್ಟಿನ ಮತ್ತು ಅದರ ಉತ್ಪಾದನಾ ತರ್ಕದ ಅಭಿವ್ಯಕ್ತಿಯಾಗಿದೆ. ಬಂಡವಾಳಶಾಹಿ ವ್ಯವಸ್ಥೆಯು ದುಡಿಮೆಗಾರರಿಂದ ಹೆಚ್ಚುವರಿಯನ್ನು ಮತ್ತು ಲಾಭವನ್ನು ಅಪರಿಮಿತವಾಗಿ ಹಿಂಡುವ ಉದ್ದೇಶದಿಂದ ಸಾಧ್ಯವಿರುವ ಎಲ್ಲಾ ವಿಧಾನಗಳ ಮೂಲಕವೂ ಪ್ರಕೃತಿ ಮಾತೆಯನ್ನೂ ಶೋಷಿಸುತ್ತದೆ. ಲಾಭ ದರ-ಕುಸಿತಗಳಿಂದ ವೃದ್ಧಿಸುವ ಬಂಡವಾಳವಾದಿ ವ್ಯವಸ್ಥೆಯ ಬಿಕ್ಕಟ್ಟು, ಮಾರುಕಟ್ಟೆಯಲ್ಲಿ ಬಂಡವಾಳ ಹೂಡಿಕೆಯ ಹಿಂತೆಗೆತದ ಮೂಲಕವಾಗಿ ಕಾಣಿಸಿಕೊಳ್ಳುತ್ತದೆ. ಲಾಭದ ಸರಾಸರಿ ದರ ಇನ್ನೂ ಸ್ಥಿರಗೊಳ್ಳದ ಹೊಸ ಆರ್ಥಿಕ ವಲಯದಲ್ಲಿ ದೊರಕುವ ತಾತ್ಕಾಲಿಕ ಹೆಚ್ಚಿನ ಲಾಭ-ದರವು ಬಂಡವಾಳವನ್ನು ಆಕರ್ಷಿಸುತ್ತದೆ ಮತ್ತು ಈ ವಿದ್ಯಮಾನವು ಮಾರುಕಟ್ಟೆಗೆ ಅನುಕರಣೀಯವಾಗುತ್ತದೆ.

ಬಂಡವಾಳಶಾಹಿಯ ಬೌದ್ಧಿಕ ಬಾಡಿಗೆಯಾಳುಗಳು ಶ್ರಮವನ್ನು ಪ್ರಕೃತಿಯಿಂದ ಬೇರ್ಪಡಿಸಲು ಪ್ರಯತ್ನಿಸುತ್ತಾರೆ. ಪ್ರಕೃತಿಯನ್ನು ಒಂದು ಪವಿತ್ರ ಸ್ಥಾನದಲ್ಲಿರಿಸಿ, ಶ್ರಮಿಕರನ್ನು ಅವರ ಸಾಂಪ್ರದಾಯಿಕ ಉತ್ಪಾದನಾ ವಲಯದಿಂದ ಉಚ್ಚಾಟನೆಗೊಳಿಸುವ ಒಂದು ಸಂಘರ್ಷರಹಿತ ಪರಿವರ್ತನೆಯನ್ನು ಖಚಿತಪಡಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಈ ಕ್ರಮವು ಮುಂದಿನ ದಿನಗಳಲ್ಲಿ ಸೂರ್ಯನ ಬೆಳಕಿನ ಮೇಲೂ ಶುಲ್ಕ ವಿಧಿಸುವ ಅನಿವಾರ್ಯ ಸಾಧ್ಯತೆಯ ಸೂಚನೆಯಾಗಿದೆ. ನವ ಉದಾರೀಕರಣದ ಆಳ್ವಿಕೆಯಲ್ಲಿ ಒಂದು ತುತ್ತು ಅನ್ನವೂ ಉಚಿತವಾಗಿ ಲಭಿಸದು. ಪ್ರಕೃತಿಯ ಉಚಿತ ದತ್ತಿಯನ್ನೂ (ಅಂದರೆ, ಗಾಳೀ ನೀರು ಮುಂತಾದವುಗಳನ್ನೂ) ಸಹ ನಗದೀಕರಿಸುವ ಮತ್ತು ಸ್ವಾಧೀನಪಡಿಸಿಕೊಳ್ಳುವ ಪ್ರಯತ್ನಗಳ ಬಗ್ಗೆ ಅಚ್ಚರಿ ಪಡಬೇಕಾದ್ದಿಲ್ಲ.

"ಸಲ್ಲುವ ಪರಿವರ್ತನೆ" (ಜಸ್ಟ್ ಟ್ರಾನ್ಸಿಶನ್) ಘೋಷಣೆಯ ಅಡಿಯಲ್ಲಿ ಮರೆಮಾಚಲ್ಪಟ್ಟ ಪವಿತ್ರ-ಪ್ರಕೃತಿಯ ಮೇಲೆ ನೆಡೆಸಿದ ಶೋಷಣೆಯ ಬಗ್ಗೆ ಬಂಡವಾಳಶಾಹಿಗಳ ಆಣೆ-ಪ್ರಮಾಣ-ಪ್ರತಿಜ್ಞೆಗಳಿಂದ ವಿಚಲಿತರಾಗುವುದು ಅಥವಾ ಒಪ್ಪಿಕೊಳ್ಳುವುದು ಸಾಧ್ಯವಿಲ್ಲ. ನ್ಯಾಯಸಮ್ಮತತೆಯನ್ನು ಅಥವಾ ಸಲ್ಲುವ ಬದಲಾವಣೆಗಳನ್ನು, ಅವು ಎಷ್ಟೇ ಅಪೂರ್ಣವಾಗಿರಲಿ, ಸಂಘಟಿತ ವರ್ಗ ಮಧ್ಯಪ್ರವೇಶಗಳ ಮೂಲಕವೇ ಬಲವಂತವಾಗಿ ಪಡೆದುಕೊಳ್ಳಬೇಕಾಗುತ್ತದೆ. ಆದ್ದರಿಂದ, ಈ ಸ್ಥಿತ್ಯಂತರದ ಪ್ರಶ್ನೆಯನ್ನು ಅದರ ಎಲ್ಲಾ ಆಯಾಮಗಳಲ್ಲಿ, ವರ್ಗ-ತಿಳುವಳಿಕೆಯ ಆಧಾರದ ಮೇಲೆ ಮತ್ತು ಅದರ ಸಂಪೂರ್ಣ ರಾಜಕೀಯ-ಆರ್ಥಿಕ ಆಶಯದೊಂದಿಗೆ ನಿಖರವಾಗಿ ಅರ್ಥಮಾಡಿಕೊಳ್ಳುವ ಅಗತ್ಯವಿದೆ. ಈ ಕಾರ್ಯಭಾರವು ನಮ್ಮ ಮುಂದಿದೆ.

- ನೈಸರ್ಗಿಕ ಸಂಪನ್ಮೂಲಗಳ ಸರಕೀಕರಣ ನಿಲ್ಲಲಿ; ಭೂಮಿ ಎಲ್ಲರಿಗೂ ಮುಕ್ತವಾಗಿರಲಿ.
- ಖಾಸಗಿ ಬಂಟರಿಗೆ ಇಂಧನ ವಲಯದ ಸ್ವತ್ತುಗಳ ಹಸ್ತಾಂತರ ನಿಲ್ಲಲಿ; ರಾಷ್ಟ್ರೀಯ ನಗದೀಕರಣ (ಎನ್‌ಎಂಪಿ) ಯೋಜನೆ ಬೇಡವೇ ಬೇಡ.
- ನವೀಕರಿಸಬಹುದಾದ ಇಂಧನ ವಲಯವನ್ನು ಅಭಿವೃದ್ಧಿಪಡಿಸಲು ಸಾರ್ವಜನಿಕ ಉದ್ದಿಮೆಗಳಿಗೆ ಬೆಂಬಲ ನೀಡಿ; ಸಲ್ಲುವ ಪರಿವರ್ತನೆಯ ಹೆಸರಿನಲ್ಲಿ ಖಾಸಗಿ ಕಾರ್ಪೊರೇಟ್‌ಗಳಿಗೆ ಬೊಕ್ಕಸದ ಬೆಂಬಲ ಸಲ್ಲದು.
- ಪಳೆಯುಳಿಕೆ ಇಂಧನಗಳೇ ಇರಲಿ, ನವೀಕರಿಸಬಹುದಾದ ಇಂಧನಗಳೇ ಆಗಿರಲಿ, ಖಾಸಗಿ ಕಾರ್ಪೊರೇಟ್‌ಗಳ ಏಕಸ್ವಾಮ್ಯವನ್ನು ತಡೆಯಲು ಇಂಧನ ವಲಯದ ಸಾರ್ವಜನಿಕ ಉದ್ದಿಮೆಗಳನ್ನು ಬಲಗೊಳಿಸಿ.
- ಪರಿಸರ-ಅಪರಾಧಿಗಳಿಗೆ ತೆರಿಗೆ ವಿಧಿಸಿ; ಎತ್ತಂಗಡಿಯಾದ ಕಾರ್ಮಿಕರಿಗೆ ಮತ್ತು ಸಮುದಾಯಗಳಿಗೆ ಜೀವನಾಧಾರ ಭತ್ಯೆಗಳನ್ನು ಒದಗಿಸಿ.
- ಸಲ್ಲುವ ಪರಿವರ್ತನೆಯ ಹೆಸರಿನಲ್ಲಿ ಸಂಗ್ರಹಿಸಿದ ನಿಧಿಯನ್ನು ಪೂರ್ಣವಾಗಿ ಉದ್ಯೋಗ ವಂಚಿತ ಕಾರ್ಮಿಕರಿಗಾಗಿ ವಿನಿಯೋಗಿಸಿ.

ಸಾಮಾಜಿಕ ಅಸ್ವಸ್ಥತೆ ಮತ್ತು ಸನಾತನವಾದ..... ಪುಟ 6 ರಿಂದ

ವ್ಯಕ್ತಿಗಳನ್ನು ಯಾರೂ 'ಅಂಗವಿಕಲರು' ಎನ್ನುವುದಿಲ್ಲ. ಅಂಥವರು ಪ್ರಭಾವಶಾಲಿಗಳಾದರೆ ಮುಗ್ಧರೆಂದು, ನಿರ್ಲಿಪ್ತರೆಂದು, ಗಟ್ಟಿ ವ್ಯಕ್ತಿತ್ವದವರೆಂದು, ಉಕ್ಕಿನ ಮನಸ್ಸಿನವರೆಂದು ಹೊಗಳುತ್ತಾರೆ. ನಿರ್ಬಲರು ಅಥವಾ ಬಡವರಾದರೆ ಪೆದ್ದರೆಂದು ಲೇವಡಿ ಮಾಡುತ್ತಾರೆ. ಹುಟ್ಟಿನಿಂದಲೇ ಬರುವ ದೈಹಿಕ, ಬೌದ್ಧಿಕ ಅಥವಾ ಮಾನಸಿಕ ವಿಕಲತೆಯ ವ್ಯಕ್ತಿಗಳು ಈ ಗುಂಪಿಗೆ ಸೇರುವುದಿಲ್ಲ. ಈ ಕಾರಣಕ್ಕಾಗಿಯೇ ಅಂಥವರನ್ನು ಭಿನ್ನ ಸಾಮರ್ಥ್ಯದ ಅಥವಾ ವಿಶೇಷ ಸಾಮರ್ಥ್ಯದವರೆಂದು ಗುರುತಿಸಬೇಕಾದ ಮಾನವೀಯ ಅಗತ್ಯ ಹುಟ್ಟಿಕೊಂಡಿದೆ. ಆದರೆ ಅಂಗವಿಕಲತೆಗೂ, ವಸ್ತುನಿಷ್ಠತೆ, ವಿವೇಕ ಮತ್ತು ತರ-ತಮದ ಜ್ಞಾನ (ಡಿಸ್‌ಕ್ರಿಶನ್) ಇಲ್ಲದಿರುವ ಸ್ಥಿತಿಗೂ ಇರುವ ನಿಜವಾದ ವ್ಯತ್ಯಾಸ ಮಕ್ಕಳಿಗೆ ಹೇಗೆ ತಿಳಿಯುವುದಿಲ್ಲವೋ ಹಾಗೆಯೇ ಸ್ವತಹ ತಾವೇ ಮಾನಸಿಕ ಮತ್ತು ಸಾಮಾಜಿಕ ಅಸ್ವಸ್ಥತೆಯಿಂದ ನರಳುವ ಪೆದ್ದರಿಗೂ ತಿಳಿಯುವುದಿಲ್ಲ.

ಆಳುವ ವರ್ಗದ ಬುದ್ಧಿವಂತರು ಮತ್ತು ಪೆದ್ದರು

ಸಾವಿರಾರು ವರ್ಷಗಳ ಹಿಂದೆ ಇದ್ದ ಗುಲಾಮೀ ಸಮಾಜದ ಒಡೆಯ-ಗುಲಾಮ ಸಂಬಂಧಗಳಲ್ಲಿ ಕ್ರೌರ್ಯವಂತೂ ಇದ್ದೇ ಇತ್ತು. ಜೊತೆಗೆ ಅಪರೂಪಕ್ಕೆ ವರ್ಗತಾರತಮ್ಯ ಬೆರೆತ ಮಾನವೀಯತೆಯೂ ಇತ್ತು. ಆದರೆ ಅವು ಬೇರೆ ಬೇರೆ ಒಡೆಯ-ಗುಲಾಮರ ನಡುವೆ, ಬೇರೆ ಬೇರೆ ಸಂದರ್ಭಗಳಲ್ಲಿ ಇದ್ದಂಥವು. ಗುಲಾಮರು, ಅಸಹಾಯಕರಾಗಿದ್ದರೂ, ಅವರವರ ಒಡೆಯರ ಜನ-ಧನ ಬಲಕ್ಕೆ ಹೋಲಿಸಿದರೆ ದುರ್ಬಲರಾಗಿದ್ದಿರಬಹುದೇ ಹೊರತು ಅವರು ಪೆದ್ದರಾಗಿರಬೇಕೆಂದೇನೂ ಇಲ್ಲ. ಈಸೋಪನಂಥ ಗುಲಾಮ, ಹನುಮಂತನಂಥ ದಾಸ ಬಹುಶಃ ಅವರವರ ಒಡೆಯರಿಗಿಂತಲೂ ಹೆಚ್ಚು ಬುದ್ಧಿವಂತರಾಗಿದ್ದರೆಂಬುದಕ್ಕೆ ಸಾಹಿತ್ಯಕ ದೃಷ್ಟಾಂತಗಳು ಸಿಗುತ್ತವೆ. ಆದರೆ ಒಡೆಯರು ಪೆದ್ದರಾಗಿದ್ದೂ ಅವರ ಪೆದ್ದುತನ ಬೆಳಕಿಗೆ ಬಾರದ್ದಕ್ಕೆ ಅವರ ಪರವಾದ ಶಕ್ತಿ ರಾಜಕಾರಣದ ಚರಿತ್ರೆ ಕಾರಣವಿರಬಹುದು. ರಾಜ-ಪ್ರಜೆ ಮಾದರಿಯ ಊಳಿಗಮಾನ್ಯ ಸಂಬಂಧಗಳು ನೂರಾರು ವರ್ಷಗಳ ಕಾಲ ಜನರ ಮನಸ್ಸನ್ನು ಆವರಿಸಿ ಅವರ ಪ್ರಜ್ಞೆಯ ಭಾಗವಾಗಿರುವುದರಿಂದ, ರಾಜಭಕ್ತಿ, ರಾಜೋಪಚಾರ, ರಾಜಕಾಲುವೆ, ರಾಜಮಾರ್ಗ ಮುಂತಾದ ಪರಿಕಲ್ಪನೆಗಳ ಜೊತೆಗೆ, ರಾಜದ್ರೋಹ ಮುಂತಾದ ಅಪರಾಧದ ಕಲ್ಪನೆಗಳು ಈಗಲೂ ಚಾಲ್ತಿಯಲ್ಲಿವೆ. ಆದರೆ ಆಳುವ ವರ್ಗದ ಪೆದ್ದರಿಗೆ ಇಂಥವು ಈಗಲೂ ಅವರ ನ್ಯಾಯ ಪ್ರಪಂಚದ ವಾಸ್ತವತೆಗಳಾಗಿವೆ.

ಸಂಘಪರಿವಾರದ ನೇತಾರರು ಮತ್ತು ಕಾಲಾಳುಗಳಲ್ಲಿ ಸಮಾನವಾಗಿ ಕಂಡುಬರುವ ತಾತ್ವಿಕತೆ, ಪಿತೃಪ್ರಧಾನ ಸಾಮಾಜಿಕ ಮೌಲ್ಯಗಳು, ತಾರತಮ್ಯಯುಕ್ತ, ಶ್ರೇಣೀಕೃತ ಸಂಬಂಧಗಳು ಹಿಂದಿನ ಗುಲಾಮೀ ಸಮಾಜ ಮತ್ತು ಊಳಿಗಮಾನ್ಯ ಸಮಾಜದಲ್ಲಿ ತಮ್ಮ ಆಳವಾದ ಬೇರುಗಳನ್ನು ಹೊಂದಿವೆ. ಆದ್ದರಿಂದಲೇ ಸಂಘಪರಿವಾರವು ಯಾವಾಗಲೂ ಸನಾತನ ಧರ್ಮದ, ಋಷಿ, ಮುನಿ, ಸಂತರು, ರಾಜ ಮಹಾರಾಜರು ಚಕ್ರವರ್ತಿಗಳು, ಸ್ಮೃತಿಕಾರರ ಜಪ ಮಾಡುತ್ತದೆ. ಸಂಸ್ಕೃತಭಾಷೆಯನ್ನು ತನ್ನ ಸಂಸ್ಕೃತಿ ಭಾಷೆಯೆಂದು ಕೀರ್ತಿಸುತ್ತದೆ. ಅಮೆರಿಕಾದ ಕಾನೂನು ಕವಚಿದ ಧೂರ್ತ ಮಿಲಿಟರಿ ಬಂಡವಾಳವಾದ, ಹಿಟ್ಲರ್ ಜರ್ಮನಿಯ ಶಿಸ್ತುಬದ್ಧ ಸಾಂಘಿಕ ಮೃಗಬಲ, ಇಸ್ರೇಲಿನ ಕ್ರೌರ್ಯ-ಗೂಢಚಾರಿಕೆ, ದೇಶೀಯ ಕಾರ್ಪೊರೇಟ್ ಬಂಡವಾಳದ ಹಣಬಲ-ತಾಂತ್ರಿಕ ಸೌಲಭ್ಯಗಳನ್ನು ಪಡೆದು ಸಾಧು-ಸನ್ಯಾಸಿಗಳ ವೇಷದಲ್ಲಿ ಅಧಿಕಾರ ನಡೆಸುವ ಸಂಘಪರಿವಾರವು ಸಾಮಾಜಿಕವಾಗಿ ಅಸ್ವಸ್ಥರಾದ ಪೆದ್ದರ ಸಂಘಟನೆಯಾಗಿದೆ. ಎಲ್ಲ ಆಧುನಿಕ ಆವಿಷ್ಕಾರ-ತಂತ್ರಜ್ಞಾನಗಳ ಫಲಾನುಭವಿಗಳಾಗಿದ್ದುಕೊಂಡು ಮಧ್ಯಯುಗದ ಮೌಲ್ಯಗಳನ್ನು ಪ್ರತಿಪಾದಿಸುವ ಸಾಮಾಜಿಕ ಸಂಬಂಧಗಳನ್ನು ಮುನ್ನೊತ್ತುತ್ತಿದೆ. ಸರಿ-ತಪ್ಪು, ಸತ್ಯ-ಸುಳ್ಳು, ಒಳ್ಳೆಯದು-ಕೆಟ್ಟದ್ದು, ನ್ಯಾಯ-ಅನ್ಯಾಯ, ವೈಚಾರಿಕ-ಅವೈಚಾರಿಕ, ಜ್ಞಾನ-ಮೌಢ್ಯಗಳ ನಡುವಿನ ಗೆರೆಯನ್ನು ಬೇಕಾದ ಕಡೆಗೆ ಸರಿಸುವ ಮಾನಸಿಕ ಮತ್ತು ಸಾಮಾಜಿಕ ಅಸ್ವಾಸ್ಥ್ಯದಿಂದ ನರಳುತ್ತಿದೆ. ಈ ಆರೇಳು ದಶಕಗಳ ಅವಿರತ ಮತ್ತು ನಿಯೋಜಿತ ಪ್ರಯತ್ನಗಳಿಂದಾಗಿ ರಾಜ್ಯಾಡಳಿತ, ಸಾಂವಿಧಾನಿಕ ಸಂಸ್ಥೆಗಳು, ಪೋಲೀಸು, ಕೋರ್ಟು, ಕಛೇರಿ, ಮೀಡಿಯಾ, ಸರ್ಕಾರಿ ಮತ್ತು ಖಾಸಗಿ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸಂಸ್ಥೆಗಳು ಹೀಗೆ ಎಲ್ಲಾ ಕಡೆಗಳಲ್ಲೂ ಸಾಮಾಜಿಕ ಅಸ್ವಸ್ಥತೆಯಿಂದ ನರಳುವ ಜನರನ್ನು ತುಂಬಿಬಿಟ್ಟಿದೆ. ಇಡೀ ಆಡಳಿತ ಯಂತ್ರವನ್ನು ರಾಚನಿಕವಾಗಿ ಸಾಮಾಜಿಕ ಅಸ್ವಸ್ಥರ ಕೈಗೆ ಕೊಟ್ಟಿದೆ. ಹೀಗಾಗಿ ಸಂಘಪರಿವಾರವು ಒಂದುವೇಳೆ ರಾಜ್ಯಾಧಿಕಾರವನ್ನು ಕಳೆದುಕೊಂಡರೂ ಅದು ಈಗಾಗಲೇ ತಂದು ತುಂಬಿರುವ ಸಾಮಾಜಿಕ ಅಸ್ವಸ್ಥರಿಂದ ಆಡಳಿತ ಯಂತ್ರವನ್ನು ಮುಕ್ತಗೊಳಿಸುವುದು ಅಷ್ಟು ಸುಲಭವಾದ ಕಾರ್ಯವೇನಲ್ಲ.

ಈ ಸನಾತನ ಅಸ್ವಸ್ಥತೆಗೆ ಮದ್ದಿಲ್ಲ ಎಂಬುದು ಅಪ್ರಿಯವಾದ ಕಟ್ಟು ಸತ್ಯ, ನಿಜ. ಆದರೆ ಭಾರತದ ಜನರ ಕಷ್ಟಕ್ಕೆ ಪರಿಹಾರವಿದೆ. ವೈಚಾರಿಕವಾದ, ವೈಜ್ಞಾನಿಕವಾದ ಆರೋಗ್ಯಕರವಾದ ಧೋರಣೆ-ಉದ್ದೇಶ ಮತ್ತು ಗ್ರಹಿಕೆಯುಳ್ಳ ಶ್ರಮಿಕ ಜನರು ಪಡೆಯಬೇಕಾದ ರಾಜಕೀಯ ಅಧಿಕಾರ, ಇಂದಾಗಲಿ, ಎಂದಾಗಲಿ ಸಾಂವಿಧಾನಿಕವಾಗಿ ಸಾಧ್ಯವಿರುವ ಏಕೈಕ ಪರಿಹಾರ. ಯಾವ ಬದಲಾವಣೆಯೂ ತಾನಾಗಿ ಆಗುವುದಿಲ್ಲ. ಬದಲಾವಣೆಯನ್ನು ಮಾಡಬೇಕು.

ನಾವೆಲ್ಲರೂ ವಿಶ್ವಕುಟುಂಬಿಯಾಗೋಣ, ಜಗತ್ತಿನ ಎಲ್ಲ ಜನರೂ ಸುಖ ನೆಮ್ಮದಿಗಳಿಂದ ಬಾಳಲಿ. ಎಲ್ಲೆಡೆ ಸುಖ ಸಮೃದ್ಧಿಗಳು ಸಾಧ್ಯವಾಗಲಿ, ಎಲ್ಲೆಡೆ ಸುಖ ಶಾಂತಿಗಳು ನೆಲಸಲಿ ಎಂದು ಸದಾ ಬಯಸುವುದು ಸ್ವಸ್ಥ ಮನಸ್ಸಿನ ಲಕ್ಷಣ. ಇವು ಹಿಂದಿನಿಂದಲೂ ನಮ್ಮ ಹಿರಿಯರೂ ಸಹ ಹೇಳಿಕೊಂಡು ಬಂದ ಆಶಯಗಳು. ಇವನ್ನು ನಾವೂ ಇಂದು ಸಂಸ್ಕೃತದಲ್ಲಿ ಹೇಳಿದ ಮಾತ್ರಕ್ಕೆ ಅವು ಈಡೇರುವುದಿಲ್ಲ. ಅವನ್ನು ನಿಜ ಜೀವನದಲ್ಲಿ ವಾಸ್ತವವಾಗಿಸಬಲ್ಲ ಭೌತಿಕ ವಸ್ತುಸ್ಥಿತಿಗಳನ್ನು ನಿರ್ಮಿಸಬೇಕಾದ್ದು ಎಲ್ಲ ಸ್ವಸ್ಥ ಮನಸ್ಸಿನ ಜನರ ಜವಾಬ್ದಾರಿ. ಅದಕ್ಕಾಗಿ ಅಗತ್ಯವಾದ ಕ್ರಿಯಾಶೀಲವಾದ ತಿಳುವಳಿಕೆ ಮತ್ತು ಸೃಜನಶೀಲ ಜ್ಞಾನವನ್ನು ಸಂಪಾದಿಸಬೇಕು.

ಒಂದು ಪ್ರದೇಶ ನಾಲ್ಕು ವಾರ್ಡುಗಳಿಗೆ ಹಂಚಿಕೆ!... ಪುಟ 9 ರಿಂದ

ಗಂಭೀರ ಆರೋಪಗಳು ಎದ್ದುಬಂದಿವೆ.

741 ಚದರ ಕಿಮೀ ವಿಸ್ತೀರ್ಣದ ಬೆಂಗಳೂರು ನಗರದಲ್ಲಿ 2011ರ ಜನಗಣತಿಯಂತೆ ಸುಮಾರು 85 ಲಕ್ಷ ಮತದಾರರಿದ್ದಾರೆ. 11 ವರ್ಷಗಳಲ್ಲಿ ಬೆಂಗಳೂರು ಸಾಕಷ್ಟು ಬೆಳೆದಿದೆ. ಜನಸಂಖ್ಯೆ ಏರಿಕೆಯಾಗಿದೆ. ಹೀಗಾಗಿ ದಶಕದ ಹಿಂದಿನ ಗಣತಿ ಆಧಾರದಲ್ಲಿ ರಚಿಸುವ ವಾರ್ಡ್ ವೈಜ್ಞಾನಿಕವಾಗಿರಲು ಸಾಧ್ಯವಿಲ್ಲ. ಇದು ಒಂದೆಡೆಯಾದರೆ. ಪುನರ್ ವಿಂಗಡಣೆ ವೇಳೆ 'ಪಕ್ಷ'ಪಾತದಿಂದ ನಡೆದುಕೊಳ್ಳಲಾಗಿದೆ ಎಂದು ಜಯನಗರ ಶಾಸಕಿ ಸೌಮ್ಯರೆಡ್ಡಿ ನೇರವಾಗಿ ಆರೋಪಿಸಿದ್ದಾರೆ. ಅದಕ್ಕೆ ಆಧಾರಗಳನ್ನೂ ಒದಗಿಸಿದ್ದಾರೆ.

ಉದಾಹರಣೆಗೆ, ಕಾಂಗ್ರೆಸ್ ಶಾಸಕರು ಪ್ರತಿನಿಧಿಸುವ ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಆರೂ ವಾರ್ಡುಗಳು 39 ಸಾವಿರ ಮತದಾರರನ್ನು ಹೊಂದಿವೆ. ಬಿಜೆಪಿ ಶಾಸಕರು ಪ್ರತಿನಿಧಿಸುವ ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ 11 ವಾರ್ಡುಗಳಲ್ಲಿ ತಲಾ 30 ಸಾವಿರ ಮತದಾರರಿದ್ದಾರೆ! ಹೀಗಾಗಿ ಕಾಂಗ್ರೆಸ್ ಶಾಸಕರ ಆರೋಪ ಸುಖಾಸುಮ್ಮನದಲ್ಲ ಎಂಬುದು ಸ್ಪಷ್ಟ.



ವಾರ್ಡ್ ರಚಿಸುವಾಗ ಜನಸಂಖ್ಯೆಯನ್ನು ಗಣನೆಗೆ ತೆಗೆದುಕೊಳ್ಳುವಾಗಲೇ ಅದರ ಭೌಗೋಳಿಕ ವ್ಯಾಪ್ತಿಯನ್ನೂ ಪರಿಗಣಿಸಬೇಕಾಗುತ್ತದೆ. ಪ್ರತಿ ವಾರ್ಡ್‌ನಲ್ಲಿ ಎಷ್ಟು ಕಿಮೀ ರಸ್ತೆಗಳು ಇವೆ ಎಂಬುದೂ ಮುಖ್ಯವಾಗುತ್ತದೆ. ಆದರೆ ಈ ಅಂಶವನ್ನು ಬಹುತೇಕ ಉಪೇಕ್ಷಿಸಲಾಗಿದೆ. ಉದಾಹರಣೆಗೆ ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸುಮಾರು 170 ಕಿಮೀ ಉದ್ದದ ರಸ್ತೆಗಳಿದ್ದು, 7 ವಾರ್ಡುಗಳಿದ್ದವು. ಅದೇ ರೀತಿ ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಕೇವಲ 21 ಕಿಮೀ ರಸ್ತೆಗಳಿದ್ದು, ಇಲ್ಲಿಯೂ 7 ವಾರ್ಡುಗಳಿದ್ದವು. ಇದರಿಂದಾಗಿ ಅನುದಾನ ಹಂಚಿಕೆಯಲ್ಲಿ ತಾರತಮ್ಯ ಆಗುತ್ತದೆ, ಹೀಗಾಗಿ ಜನಸಂಖ್ಯೆಯ ಜತೆಗೆ ಭೌಗೋಳಿಕ ವ್ಯಾಪ್ತಿಯನ್ನೂ ಪರಿಗಣಿಸಬೇಕೆಂಬ ಮಾರ್ಗಸೂಚಿಯನ್ನು ಇಲ್ಲಿ ಬಹುತೇಕ ಪಾಲಿಸಿಲ್ಲ.

ಒಂದು ಗ್ರಾಮ ಅಥವಾ ಒಂದು ಬಡಾವಣೆ ಒಂದು ವಾರ್ಡ್‌ನಲ್ಲಿ ಒಳಪಡುವುದು ವೈಜ್ಞಾನಿಕವಾಗಿ ಸರಿಯಾದುದು. ಇಡೀ ಗ್ರಾಮ ಅಥವಾ ಬಡಾವಣೆಯ ಸಮಸ್ಯೆಗಳನ್ನು ಪರಿಹರಿಸಲು ಇದೇ ಕಾರ್ಯಸಾಧು ವಿಧಾನ. ಒಂದು ಬಡಾವಣೆಯನ್ನು ನಾಲ್ಕು ವಾರ್ಡ್‌ಗಳಿಗೆ ಹಂಚಿದರೆ ನಾಲ್ಕು ಜನ ಪಾಲಿಕೆ ಸದಸ್ಯರು, ನಾಲ್ಕು ಜನ ಇಂಜಿನಿಯರ್, ನಾಲ್ಕು ಆರೋಗ್ಯ ನಿರೀಕ್ಷಕರನ್ನು ಸಂಪರ್ಕಿಸಬೇಕಾಗುತ್ತದೆ. ನಗರ ಯೋಜನೆಯ ಅಧಿಕಾರಿಗಳಿಗೆ ತಿಳಿಯದ ವಿಚಾರವೇನಲ್ಲ! ಆದರೆ ನಗರಾಭಿವೃದ್ಧಿ ಇಲಾಖೆ ಅಧಿಕಾರಿಗಳು ಆಡಳಿತರೂಢ ಪಕ್ಷದ ಅಣತಿಯಂತೆ ನಡೆದುಕೊಳ್ಳುವುದು ಎಷ್ಟು ಸರಿ ಎಂದು ಜನ ಪ್ರಶ್ನಿಸುತ್ತಿದ್ದಾರೆ. ಉದಾಹರಣೆಗೆ ಬೇಗೂರು ವಾರ್ಡ್‌ಗೆ ಬೇಗೂರಿನ ಮುಕ್ಕಾಲು ಭಾಗ ಪ್ರದೇಶವನ್ನು ಕಾಳೇನ ಅಗ್ರಹಾರ ವಾರ್ಡ್‌ಗೆ, ಕಾಳೇನ ಅಗ್ರಹಾರ ಗ್ರಾಮದ ಮುಕ್ಕಾಲು ಭಾಗವನ್ನು ಗೊಟ್ಟಿಗೆರೆ ವಾರ್ಡ್‌ಗೆ ಸೇರ್ಪಡೆ ಮಾಡಿರುವುದನ್ನು ವೈಜ್ಞಾನಿಕ ವಿಧಾನ ಎನ್ನಲು ಸಾಧ್ಯವೇ?

ವಾರ್ಡುಗಳ ಗಡಿ ನಿರ್ಧರಿಸುವಾಗಲೂ ಪಕ್ಷಪಾತದ ಆರೋಪ ಕೇಳಿ ಬಂದಿದೆ. ಉದಾಹರಣೆಗೆ ಹೆಚ್‌ಎಸ್‌ಆರ್ ವಾರ್ಡ್‌ಗೆ ಈ ಹಿಂದೆ ಬಡಾವಣೆಯ ಏಳೂ ಸೆಕ್ಟರ್‌ಗಳು ಸೇರಿದ್ದವು. ಮರುವಿಂಗಡಣೆ ತರುವಾಯ ಹೆಸರಿಗಷ್ಟೆ ಹೆಚ್‌ಎಸ್‌ಆರ್ ವಾರ್ಡ್ ಆಗಿದ್ದು, ನಾಲ್ಕು ವಾರ್ಡುಗಳಿಗೆ ಹಂಚಲಾಗಿದೆ. ಹೊಸೂರು ರಸ್ತೆ ಪಶ್ಚಿಮಕ್ಕಿರುವ ಸುಮಾರು ನಾಲ್ಕು ಕಿಮೀ ದೂರವಿರುವ ಬೆರಟೇನ ಅಗ್ರಹಾರದವರೆಗೂ ವಿಸ್ತರಿಸಿದೆ! ಹಾಗೆಯೇ ರೂಪೇನ ಅಗ್ರಹಾರ ವಾರ್ಡ್ ಬಿಟಿಎಂ ವಿಧಾನಸಭಾ ಕ್ಷೇತ್ರದ ಗಡಿ ಸಿಲ್ಕೊಬೋರ್ಡ್ ನಿಂದ ಆರಂಭವಾಗಿ ಆನೇಕಲ್ ವಿಧಾನಸಭಾ ಕ್ಷೇತ್ರದ ಗಡಿ ಸಿಂಗಸಂದ್ರದವರೆಗೂ ವಿಸ್ತರಿಸಲಾಗಿದೆ. ಇದೂ ಕೂಡ ಸುಮಾರು 7.4 ಕಿ.ಮೀ. ದೂರವಿದೆ. ಈ ಎರಡೂ ವಾರ್ಡ್‌ಗಳ ನಕ್ಷೆಗಳು ಒಂದು ರೀತಿಯ ವಿ.ಸಿ. ನಾಲೆಯಂತೆ ಗೋಚರಿಸುತ್ತವೆ. ಮುಸ್ಲಿಂ ಸಮುದಾಯ ಹೆಚ್ಚಿರುವ ಮಂಗಮ್ಮನಪಾಳ್ಯದ ಮದಿನಾ ನಗರವನ್ನು ಮೂರು ವಾರ್ಡ್ಗಳಿಗೆ ಹರಿದು ಪಾಲು ಮಾಡಲಾಗಿದೆ. ಆಶ್ಚರ್ಯವೆಂದರೆ ಹೆಚ್‌ಎಸ್‌ಆರ್ ಬಡಾವಣೆಯ ಅಪಾರ್ಟಮೆಂಟ್‌ವೊಂದರ ಎ&ಬಿ ಬ್ಲಾಕ್‌ಗಳು ಒಂದು ವಾರ್ಡ್‌ಗೆ ಸೇರ್ಪಡೆಗೊಂಡಿದ್ದರೆ ಸಿ ಬ್ಲಾಕ್ ಅನ್ನು ಮತ್ತೊಂದು ವಾರ್ಡ್‌ಗೆ ಸೇರಿಸಲಾಗಿದೆ! ಅಲ್ಪಸಂಖ್ಯಾತರು, ದಲಿತರು ಹೆಚ್ಚಿನ ಸಂಖ್ಯೆಯಲ್ಲಿರುವ ಬಂಡೇಪಾಳ್ಯವನ್ನು ಮೂರು ವಾರ್ಡ್‌ಗಳಿಗೆ ಹಂಚಲಾಗಿದೆ. ಇಂತಹ ಎಡವಟ್ಟುಗಳು ಯಾವ ಪ್ರಮಾಣದಲ್ಲಿವೆ ಎಂದರೆ ವಾರ್ಡ್ ಮರು ವಿಂಗಡಣೆ ಕುರಿತು 233 ಆಕ್ಷೇಪಣಾ ಅರ್ಜಿಗಳು ಸಲ್ಲಿಕೆಯಾಗಿವೆ ಎಂದು ಹೇಳಲಾಗುತ್ತಿದೆ. ಆದರೆ ಆನ್‌ಲೈನ್ ಮೂಲಕ ಸಲ್ಲಿಕೆಯಾದ ಆಕ್ಷೇಪಣೆಗಳನ್ನು ಪರಿಗಣನೆಗೆ ತೆಗೆದುಕೊಂಡಿಲ್ಲ ಎಂಬ ದೂರುಗಳು ಕೇಳಿ ಬರುತ್ತಿವೆ!

ಇಂತಹ ಕಸರತ್ತಿನ ಮಸಲತ್ತೇನೆಂದರೆ ಬಿಜೆಪಿ ಗೆಲ್ಲಲು ಸಾಧ್ಯವಾಗುವಂತೆ ತನ್ನ ಪ್ರತಿಸ್ಪರ್ಧಿ ಪಕ್ಷದ ಮತಗಳು ಹರಿದು ಹಂಚಿಹೋಗುವಂತೆ ಮಾಡುವ ಯತ್ನದ ಫಲವಾಗಿ ಇಂತಹವುಗಳು ಸಂಭವಿಸಿವೆ ಎಂಬ ಗುರುತರ ದೂರು ದಾಖಲಾಗಿವೆ. ದೂರನ್ನು ಪುಷ್ಠೀಕರಿಸುವಂತೆ ವಾರ್ಡುಗಳ ಅಪ್ರಾಯೋಗಿಕ ಮರುವಿಂಗಡಣೆಯ ಎಡವಟ್ಟುಗಳು ದಂಡಿಯಾಗಿ ಸಿಗುತ್ತವೆ.

ಪೊಳ್ಳು ಭರವಸೆಗಳ ನಡುವೆ ಸೊರಗಿದ....... ಪುಟ 10 ರಿಂದ

ಕರೆದೊಯ್ಯಲು ಮನೆಗೆ ಮರಳಿ ಕರೆತರಲು ಅರಣ್ಯ ಇಲಾಖೆ ವಾಹನ ವ್ಯವಸ್ಥೆ ಮಾಡಬೇಕು.

5. ಆನೆ ಮತ್ತಿತರ ವನ್ಯ ಮೃಗಗಳ ಧಾಳಿಯಿಂದ ತೋಟಗಳಲ್ಲಿ ಕಾಫಿ ಗಿಡ ಹಾಳಾದರೆ ಸರಕಾರ ಒಂದು ಗಿಡಕ್ಕೆ 25,000 ರೂ (ಇಪ್ಪತ್ತೈದು ಸಾವಿರ ರೂ.) ಪರಿಹಾರ ಕೊಡಬೇಕು. ಬತ್ತದ ಬೆಳೆ ಹಾಳಾದರೆ ಎಕರೆಯೊಂದಕ್ಕೆ 60,000 ರೂ ಕೊಡಬೇಕು. ಬಾಳೆಯನ್ನು ನಾಶ ಮಾಡಿದರೆ ಒಂದು ಎಕರೆಗೆ 50,000 ರೂ. ಕೊಡಬೇಕು. ಸಿಲ್ವರ್ ಮರಕ್ಕೆ 15,000 ರೂ, ತೆಂಗಿಗೆ 25,000 ರೂ, ಅಡಿಕೆಗೆ 15,000 ರೂ. ಕೊಡಬೇಕು.

ಮತ್ತು ಅರಣ್ಯ ಇಲಾಖೆಗೆ ಕೆಲಸಕ್ಕೆ ತೆಗೆದುಕೊಳ್ಳುವಾಗ ಆಯಾ ಜಿಲ್ಲೆಯವರನ್ನೇ ತೆಗೆದುಕೊಳ್ಳಬೇಕು, ಅನುಭವವಿಲ್ಲದವರನ್ನು ನೇಮಿಸುವುದರಿಂದ ಪ್ರಯೋಜನವಿರುವುದಿಲ್ಲ.

ಸರಕಾರ ಮಾಡಬೇಕಾದ ಪಾವತಿಯನ್ನು ಕ್ಲಪ್ತ ಕಾಲದಲ್ಲಿ ಮಾಡಬೇಕು. ತಡ ಮಾಡಕೂಡದು.

3. **ಕಾರ್ಮಿಕರ ಸಮಸ್ಯೆ:** ಬೆಳೆಗಾರರು ಸಣ್ಣ ಬೆಳೆಗಾರರಾಗಿರುವುದರಿಂದ ಸಣ್ಣ ತೋಟಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಮನೆ ಸೌಕರ್ಯ, ಆರೋಗ್ಯಕ್ಕೆ ಸೌಕರ್ಯ, ವಿದ್ಯಾಭ್ಯಾಸಕ್ಕೆ ಸೌಕರ್ಯ ಮೊದಲಾದ ಎಲ್ಲಾ ಸೌಕರ್ಯಗಳನ್ನೂ ಸರಕಾರವೇ ಕೊಡಬೇಕು. ಇದಕ್ಕಾಗಿ ಸರಕಾರ ಒಂದು ಅಭಿವೃದ್ಧಿ ಮಂಡಳಿಯನ್ನು ರಚಿಸಬೇಕು. ಕಾರ್ಮಿಕರು ಅದರಲ್ಲಿ ನೊಂದಾಯಿಸಿಕೊಳ್ಳುವ ವ್ಯವಸ್ಥೆ ಇರಬೇಕು. ತೋಟ ಮಾಲಕರು ಕಾರ್ಮಿಕರಿಗೆ ಕನಿಷ್ಟ ಕೂಲಿ ಕೊಡಬೇಕು ಎಂದಿರಬೇಕು.
4. ಕಸ್ತೂರಿ ರಂಗನ್ ಸಮಿತಿಯ ವರದಿಯ ಶಿಫಾರಸ್ಸುಗಳನ್ನು ಅನುಷ್ಠಾನಕ್ಕೆ ತರಲು ಮುಂದುವರಿಯುತ್ತಿರುವುದನ್ನು ರದ್ದು ಮಾಡಬೇಕು.
5. ಕೊಡಗು ಕರ್ನಾಟಕದ ಭಾಗವಾಗಿದ್ದು ಒಂದೇ ಕಂದಾಯ ಕಾನೂನು ಇಡೀ ರಾಜ್ಯಕ್ಕೆ ಅನ್ವಯವಾಗುತ್ತಿದ್ದರೂ. ಕೊಡಗಿನ ಬೆಳೆಗಾರರು ತಮ್ಮ ಜಾಗದಲ್ಲಿ ಬೆಳೆದ ಮರದ ಒಡೆತನದ ಹಕ್ಕು ಅವರಿಗೆ ಇಲ್ಲದಾಗಿದೆ. ಈ ತಾರತಮ್ಯವನ್ನು ಕೊನೆಗೊಳಿಸಿ ಅವರು ಬೆಳೆದ ಮರದ ಹಕ್ಕನ್ನು ಅವರಿಗೆ ಕೊಡಬೇಕು.
6. ಇಡೀ ಕರ್ನಾಟಕಕ್ಕೆ ಒಂದೇ ಕಂದಾಯ ಕಾನೂನು ಅನ್ವಯವಾಗುವುದಿದ್ದರೂ ರಾಜ್ಯ ಸರಕಾರದ ಇಚ್ಚಾ ಶಕ್ತಿಯ ಕೊರತೆಯಿಂದ ಕೊಡಗಿನ ಬಾಣೆ ಜಾಗದ ಒಡೆತನದ ಸಮಸ್ಯೆಯನ್ನು ಸರಕಾರ ಇನ್ನೂ ಬಗೆಹರಿಸಿಲ್ಲ. ಈ ಸಮಸ್ಯೆಯನ್ನು ಬಗೆಹರಿಸನಬೇಕು.
7. ಕರ್ನಾಟಕದ ಇತರ ಜಿಲ್ಲೆಗಳಲ್ಲಿ 10 ಹೆಚ್.ಪಿ. ವರೆಗಿನ ವಿದ್ಯುತ್ ಬಳಕೆಯನ್ನು ರೈತರಿಗೆ ಮುಫತ್ತಾಗಿ ಕೊಡಲಾಗುತ್ತಿದೆಯಾದರೂ ಕೊಡಗಿನ ಬೆಳೆಗಾರರು ಈ ಸೌಲಭ್ಯದಿಂದ ವಂಚಿತರಾಗಿದ್ದಾರೆ. ಅವರಿಗೂ ಈ ಸೌಲಭ್ಯ ಕೊಡಬೇಕು.
8. ಪೈಸಾರಿಯಲ್ಲಿ ತೋಟ ಮಾಡಿಕೊಂಡವರು ಹೆಚ್ಚಿನವರು ಬುಡಕಟ್ಟು ಜನರು ಮತ್ತು ಅತಿ ಸಣ್ಣ ರೈತರು. ಅವರ ಭೂಮಿಯ ಒಡೆತನ ಸಿಕ್ಕಿಲ್ಲ ಇದರಿಂದ ಅವರಿಗೆ ಸರಕಾರದ ಯಾವ ಸವಲತ್ತುಗಳೂ ಸಿಗುತಿಲ್ಲ. ಅವರಿಗೆ ಅವರ ವಶದಲ್ಲಿರುವ ಭೂಮಿಯ ಒಡೆತನ ಕೊಡಬೇಕು.
9. ಕಾಫಿ ಬೆಳೆಗಾರರು ತಮ್ಮ ಕೃಷಿಗೆ ಬೆಂಬಲವಾಗಿ ಕರಿಮೆಣಸು ಬೆಳೆಸುತ್ತಿದ್ದಾರೆ. ಕೊಡಗಿನಲ್ಲಿ ಬೆಳೆಯುವ ಕರಿಮೆಣಸು ಉತ್ಕೃಷ್ಟ ಗುಣದ್ದಾಗಿದ್ದು ಅದಕ್ಕೆ ಉತ್ತಮ ಬೆಲೆ ಸಿಗಬಹುದಾದರೂ ಕರಿಮೆಣಸು ಅಕ್ರಮವಾಗಿ ಆಮದಾಗುತ್ತಿರುವುದರಿಂದಾಗಿ ಬೆಳೆಗಾರರಿಗೆ ನ್ಯಾಯವಾದ ಬೆಲೆ ಸಿಗುತ್ತಿಲ್ಲ. ಅದರೊಂದಿಗೆ ಆರ್.ಟಿ.ಸಿಯಲ್ಲಿ ಬರೆಯುವ ತಪ್ಪಿನಿಂದಾಗಿಯೂ ಕೊಡಗಿನ ಬೆಳೆಗಾರರು ವಂಚಿಸಲ್ಪಟ್ಟಿದ್ದಾರೆ. ಆದ್ದರಿಂದ ಕರಿಮೆಣಸಿನ ಅಕ್ರಮ ಪ್ರವೇಶವನ್ನು ತಡೆಯಬೇಕು. ಮತ್ತು ಕೊಡಗಿನಲ್ಲಿರುವ ದೀರ್ಘಕಾಲಿಕ ಬೆಳೆಗಳಾದ ಕಾಫಿ, ಕರಿಮೆಣಸು ಮೊದಲಾದ ಬೆಳೆಗಳನ್ನು ಆರ್.ಟಿ.ಸಿ.ಯಲ್ಲಿ 'ಬೆಳೆ' ಕಾಲಂನಲ್ಲಿ ಬರೆಯಬೇಕು.
10. ಬೆಳೆ ವಿಮಾ ಯೋಜನೆಯನ್ನು ಸಮರ್ಪಕವಾಗಿ ಜ್ಯಾರಿಗೆ ತರಬೇಕು.
11. ಬೆಳೆಗಾರರು ಪೈಸಾರಿ ಜಮೀನನ್ನು ವಶಪಡಿಸಿಕೊಂಡಿದ್ದಾರೆ. ಇಂತಹದರಲ್ಲಿ ಸರಕಾರ ಈಗ ಅವರ ವಶದಲ್ಲಿರುವ ಜಾಗವನ್ನು ಅವರಿಗೆ ಗುತ್ತಿಗೆಗೆ ಕೊಡಲು ತೀರ್ಮಾನಿಸಿದೆ. ಸಣ್ಣ ಬೆಳೆಗಾರರು ವಶಪಡಿಸಿಕೊಂಡಿರುವುದರಲ್ಲಿ 5 ಎಕರೆಯನ್ನು ಅವರಿಗೇ ಕೊಡಬೇಕು. ಉಳಿದಂತೆ ದೊಡ್ಡ ಬೆಳೆಗಾರರು ವಶಪಡಿಸಿಕೊಂಡಿರುವ ಸರಕಾರೀ ಭೂಮಿಯನ್ನು ಸಂಪೂರ್ಣವಾಗಿ ಸರಕಾರ ವಶಪಡಿಸಿಕೊಂಡು ನಿವೃತ್ತ ಸೈನಿಕರಿಗೆ, ಭೂರಹಿತ ಪರಿಶಿಷ್ಟ ಪಂಗಡಗಳು ಮತ್ತು ಪರಿಶಿಷ್ಟ ಜಾತಿಯವರಿಗೆ; ತೋಟ ಕಾರ್ಮಿಕರು, ಕಟ್ಟಡ ಕಾರ್ಮಿಕರು, ಆರ್ಥಿಕವಾಗಿ ದುರ್ಬಲರಾಗಿರುವ ಮಹಿಳೆಯರು. ವಾಹನಗಳ ಚಾಲಕರುಗಳು ಮೊದಲಾಗಿ ಭೂರಹಿತರೆಲ್ಲರಿಗೆ ಹಂಚಬೇಕು.
12. ಸರಕಾರೀ ಕಛೇರಿಗಳಲ್ಲಿ ಮಧ್ಯವರ್ತಿಗಳ, ಲಂಚದ ಹಾವಳಿಯನ್ನು ಮಟ್ಟ ಹಾಕಬೇಕು.
13. ಕಾಫಿ ಬೋರ್ಡನ್ನು ಪ್ರಜಾಸತ್ತಾತ್ಮಕವಾಗಿಸಬೇಕು. ಅದರಲ್ಲಿ ಸಣ್ಣ ಬೆಳೆಗಾರರ ಪ್ರಾತಿನಿಧ್ಯವನ್ನು ಹೆಚ್ಚಿಸಬೇಕು. ಇಂದು ಶೇ.98 ರಷ್ಟಿರುವ ಸಣ್ಣ ಬೆಳೆಗಾರರಿಗೆ ಆನುಪಾತಿಕವಾಗಿ ಸ್ಥಾನವೇ ಇಲ್ಲ. ಇವತ್ತು ಸಣ್ಣ ಬೆಳೆಗಾರರ ಪ್ರತಿನಿಧಿಗಳೆಂದು ಆ ಸ್ಥಾನಕ್ಕೂ ಹೆಚ್ಚಿನ ಸಂದರ್ಭದಲ್ಲಿ ದೊಡ್ಡ ಬೆಳೆಗಾರರನ್ನೇ ನೇಮಿಸಲಾಗುತ್ತದೆ. ಸಣ್ಣ ಬೆಳೆಗಾರರಿಗೆ ಬಹುಮತದ ಸ್ಥಾನ ಇರಬೇಕು.

ಕಾಫಿ ಬೋರ್ಡಿನಿಂದ ಕ್ಯೂರರ್ ಮತ್ತು ಟ್ರೇಡರ್‌ಗಳನ್ನು ಹೊರಗಿಡಬೇಕು. ಅವರ ಹಿತಾಸಕ್ತಿಯು ಸಾಮಾನ್ಯ ಬೆಳೆಗಾರರ ಹಿತಾಸಕ್ತಿಗೆ ವಿರುದ್ಧವಾದುದಾಗಿದೆ.

ಇಂದು ಕಾಫಿ ಬೋರ್ಡಿನಲ್ಲಿ 33 ಸದಸ್ಯರಿದ್ದಾರೆ. ಅವರಲ್ಲಿ ಸಣ್ಣ ಬೆಳೆಗಾರರ ಪ್ರತಿನಿಧಿಗಳು ಏಳು. ದೊಡ್ಡ ಬೆಳೆಗಾರರ ಪ್ರತಿನಿಧಿಗಳು ಮೂವರು. ಬಾಕಿ ಎಲ್ಲರೂ ಅಧಿಕಾರಿಗಳು ಮತ್ತಿತರರು ಕಾರ್ಮಿಕರಿಗೆ ಸಣ್ಣ ಮಾಲಕರು ಕೊಟ್ಟ ಸಾಲವನ್ನು ಸರಕಾರ ಪಾವತಿ ಮಾಡಬೇಕು. ಕಾರ್ಮಿಕರನ್ನು ಸಾಲದಿಂದ ಮುಕ್ತರನ್ನಾಗಿಸಬೇಕು. ಕಾರ್ಮಿಕರಿಗೆ ಅಗತ್ಯಗಳಿಗೆ ಕಡಿಮೆ ಬಡ್ಡಿಯಲ್ಲಿ ಸುಲಭದಲ್ಲಿ ಸಾಲ ಸಿಗುವ ವ್ಯವಸ್ಥೆ ಸರಕಾರ ಮಾಡಬೇಕು.

14) ಪರಿಶಿಷ್ಟ ಪಂಗಡದ ಹಾಡಿಗಳಲ್ಲಿರುವ ಕೃಷಿ ಭೂಮಿಗೆ ದಾಖಲಾತಿ ಕೊಡಬೇಕು.

15) ಪೈಸಾರಿ ಜಾಗದಲ್ಲಿ ಮನೆ ಕಟ್ಟಿಕೊಂಡು ಕಾಫಿ ತೋಟ ಮಾಡಿಕೊಂಡಿರುವ ಪರಿಶಿಷ್ಟ ಪಂಗಡ ಮತ್ತು ಜಾತಿಯ ವಿಭಾಗಗಳವರಿಗೆ, ಮತೀಯ ಅಲ್ಪಸಂಖ್ಯಾತರಿಗೆ ಅವರ ವಶದಲ್ಲಿರುವ ಭೂಮಿಯ ಮೇಲಿನ ಒಡೆತನದ ದಾಖಲೆಗಳನ್ನು ಕೊಡಬೇಕು.

16) ಕಾಫಿಯ ಆಮದು ಅಥವಾ ಮರು ರಫ್ತು ಆಗುವುದನ್ನು ನಿಷೇಧಿಸಬೇಕು ಅಥವಾ ಕಾಫಿಯ ಮೇಲಿನ ಆಮದು ಸುಂಕವನ್ನು ಶೇ.150ಕ್ಕೆ ಹೆಚ್ಚಿಸಬೇಕು.

17) ಕಾಫಿ ಪ್ರೋಸೆಸಿಂಗ್ ಮತ್ತು ಮಾರ್ಕೆಟಿಂಗ್‌ಗೆ ಸಂಬಧಿಸಿದ ಕೈಗಾರಿಕೆಗಳನ್ನು ಸಾರ್ವಜನಿಕ ವಲಯದಲ್ಲಿ ಅಥವಾ ಸಹಕಾರೀ ವಲಯದಲ್ಲಿ ಸ್ಥಾಪಿಸಬೇಕು.

18) ರಫ್ತು ಸಬ್ಸಿಡಿಯನ್ನು ರಫ್ತುದಾರರಿಗೆ ಕೊಡುವುದರ ಬದಲು ನೇರವಾಗಿ ಬೆಳೆಗಾರರಿಗೆ ಕೊಡಬೇಕು.

19) ಗೊಬ್ಬರ, ಕೀಟನಾಶಿನಿ, ಸುಣ್ಣ, ಶಿಲೀಂದ್ರನಾಶಕ, ಕಳೆನಾಶಕ, ಕೃಷಿ ಉಪಕರಣ, ತುಂತುರು ನೀರಾವರಿ ಘಟಕ, ಒಣಗಿಸುವ ಯಾರ್ಡ್, ನೀರಿನ ಶೇಖರಣೆ ಮೊದಲಾದವುಗಳಿಗಾಗಿ ಸಾಕಷ್ಟು ಸಬ್ಸಿಡಿ ಬೆಳೆಗಾರರಿಗೆ ಕೊಡಬೇಕು.

20) ಇಂದಿನ ಆರ್ಥಿಕ ಪರಿಸ್ಥಿತಿಯನ್ನು ಪರಿಗಣಿಸಿ ಕಾಫಿ ಕ್ಷೇತ್ರದಿಂದ ಸಂಗ್ರಹಿಸುತಿರುವ ಎಲ್ಲಾ ಸೆಸ್, ತೆರಿಗೆ ಡ್ಯೂಟಿಗಳ ವಸೂಲಿಯನ್ನು ನಿಲ್ಲಿಸಬೇಕು.

21) ಪೆಟ್ರೋಲ್, ಡೀಸಿಲ್ ದರವನ್ನು ಕಡಿತ ಮಾಡಬೇಕು.

24. ಕಾಫಿ ರಂಗದಲ್ಲಿ 10 ಹೆಕ್ಟರ್‌ಗಿಂತ ಕಡಿಮೆ ವಿಸ್ತೀರ್ಣದ ತೋಟ ಇರುವ ಸಣ್ಣ ಬೆಳೆಗಾರರೇ ಶೇ. 98 ಕ್ಕಿಂತಲೂ ಹೆಚ್ಚಿಗೆ ಇರುವವರಾಗಿದ್ದಾರೆ. ಅವರು ದೇಶೀ ಗುತ್ತೇದಾರಿಗಳು ಮತ್ತು ಬಹುರಾಷ್ಟ್ರೀಯ ಬಂಡವಾಳಶಾಹಿಗಳಿಂದ ಶೋಷಣೆಗೆ ಒಳಗಾಗಿದ್ದಾರೆ. ಈ ಶೋಷಣೆಯ ಬಗ್ಗೆ ಅಧ್ಯಯನ ಮಾಡಬೇಕು.

ಈ ಬೇಡಿಕೆಗಳ ಸಾಧನೆಗಾಗಿ ಕಾಫಿ ಬೆಳೆಗಾರರನ್ನು ಸಂಘಟಿಸಿ ನಿರಂತರ ಹೋರಾಡಲು ತೀರ್ಮಾನವಾಗಿದೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE JULY 11-17, 2022 Price: Rs. 10/- Date of Publication: 8 JULY 2022 RNI No. KARKAN /2006/17926 Posted on 11-07-2022
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate** - Rs. 2





ಬೆಂಗಳೂರಿನಲ್ಲಿ ಸಿಐಟಿಯು ಅಖಿಲ ಭಾರತ ಸಮ್ಮೇಳನ: ಉತ್ಸಾಹ ತುಂಬಿದ ಸ್ವಾಗತ ಸಮಿತಿ ರಚನಾ ಸಭೆ

ವರದಿ: ಲಿಂಗರಾಜು ಮಳವಳ್ಳಿ

ಕಾರ್ಮಿಕ ವರ್ಗದ ಪಕ್ಷಪಾತಿ ಸಿಐಟಿಯು ಕರ್ನಾಟಕದಲ್ಲಿ ಮತ್ತೊಂದು ಮೈಲಿಗಲ್ಲಿನ ಹಾದಿಗೆ ಮುನ್ನುಡಿ ಬರೆದಿದೆ. 2023 ಜನವರಿ 18 ರಿಂದ 22 ರವರೆಗೆ ಸಿಐಟಿಯು 17ನೇ ಅಖಿಲ ಭಾರತ ಸಮ್ಮೇಳನ ಈ ಬಾರಿ ಸಾರ್ವಜನಿಕ ಉದ್ದಿಮೆಗಳ ನಗರ ಬೆಂಗಳೂರಿನಲ್ಲಿ ನಡೆಯಲಿದೆ. ಹಿಂದುತ್ವ–ಕಾರ್ಪೊರೇಟ್ ಅಕ್ರಮ ಜೋಡಿ ದೇಶದ ಆರ್ಥಿಕತೆಯನ್ನು ಅಪಾಯದ ಅಂಚಿಗೆ ತಳ್ಳುವ ಜತೆಗೆ ದೇಶದ ಸೌಹಾರ್ದ, ಜಾತ್ಯಾತೀತ ಪರಂಪರೆಗೆ ಸವಾಲೊಡ್ಡಿರುವ ಈ ಪ್ರಕ್ಷುಬ್ಧ ಸನ್ನಿವೇಶದಲ್ಲಿ ನಡೆಯುತ್ತಿರುವ ಈ ಸಮ್ಮೇಳನಕ್ಕೆ ಅತ್ಯಂತ ಮಹತ್ವ ಪಡೆದುಕೊಂಡಿದೆ.

ಐತಿಹಾಸಿಕ ಮಹತ್ವ ಪಡೆದುಕೊಂಡಿರುವ ಈ ಸಮ್ಮೇಳನವನ್ನು ಕಾರ್ಮಿಕರ ನಗರವೆಂದೇ ಹೆಸರುವಾಸಿಯಾಗಿರುವ ಬೆಂಗಳೂರಿನಲ್ಲಿ ಯಶಸ್ವಿಗೊಳಿಸಲು ಸಿದ್ದತೆಗಳು ಆರಂಭಗೊಂಡಿವೆ. ಜುಲೈ 05 ಮಂಗಳವಾರ ಕಬ್ಬನ್ ಪಾರ್ಕ್ನ ಸಚಿವಾಲಯ ನೌಕರರ ಕ್ಲಬ್ ಭವನದಲ್ಲಿ ಸ್ವಾಗತ ಸಮಿತಿ ರಚನಾ ಸಭೆ ನಡೆಯಿತು. ಸಭೆಯಲ್ಲಿ ಕಾರ್ಮಿಕ ನಾಯಕರು ಮಾತ್ರವಲ್ಲದೇ ಸಾಂಸ್ಕೃತಿಕ ಕ್ಷೇತ್ರದ ಗಣ್ಯರು, ಪತ್ರಕರ್ತರು, ವಿಜ್ಞಾನಿಗಳು, ವಿವಿಧ ಕ್ಷೇತ್ರಗಳ ಗಣ್ಯರು ಭಾಗವಹಿಸಿದ್ದು ವಿಶೇಷ.

ಗೌರವಾಧ್ಯಕ್ಷರಾಗಿ ಹಿರಿಯ ನ್ಯಾಯವಾದಿ ಕೆ.ಸುಬ್ಬರಾವ್



ಕಾರ್ಮಿಕರ ನ್ಯಾಯಾಧೀಶರೆಂದೇ ಪ್ರಖ್ಯಾತರಾದ ನ್ಯಾಯವಾದಿ ಕೆ.ಸುಬ್ಬರಾವ್ ಸ್ವಾಗತ ಸಮಿತಿಯ ಗೌರವಾಧ್ಯಕ್ಷರಾಗಿ ನೆರೆದವರ ಕರತಾಡತನದೊಂದಿಗೆ ಆಯ್ಕೆಯಾದರು. 'ನನಗೀಗ 91 ವರ್ಷ, ಆದರೂ ಕಾರ್ಮಿಕರ ಪರ ವಾದ ಮಾಡುತ್ತಿದ್ದೇನೆ, ಇದಕ್ಕೆ ಕಾರಣ ಕಾರ್ಲ್ಮಾರ್ಕ್ಸ್ನೇ ಕಾರಣ. ಜಗತ್ತಿನ ಕಾರ್ಮಿಕರೇ ಒಂದಾಗಿ ಎಂದು ಕರೆಕೊಟ್ಟು, 150 ವರ್ಷಗಳಾದರೂ ಕಾರ್ಮಿಕ ವರ್ಗ ಇಂದಿಗೂ ಒಗ್ಗಟ್ಟಾಗಿಲ್ಲ, ಶ್ರಮಜೀವಿ ವರ್ಗಕ್ಕೆ ಕಾರ್ಮಿಕ ವರ್ಗದ ಪ್ರಜ್ಞೆ ಮೂಡಿಸುವ ಜವಾಬ್ದಾರಿ ಕಾರ್ಮಿಕ ಸಂಘಟನೆಗಳ ಮೇಲಿದೆ' ಎಂದರು.

ಅಧ್ಯಕ್ಷರಾಗಿ ಅಮಾನುಲ್ಲಾಖಾನ್ ಆಯ್ಕೆ



ವಿಮಾ ನೌಕರರ ಸಂಘಟನೆ ಎಐಐಇಎ ಅಖಿಲ ಭಾರತ ಅಧ್ಯಕ್ಷರಾದ ಅಮಾನುಲ್ಲಾಖಾನ್ ಸ್ವಾಗತ ಸಮಿತಿ ಅಧ್ಯಕ್ಷರಾಗಿ ಆಯ್ಕೆಯಾದರು. ಕಾರ್ಯಾಧ್ಯಕ್ಷರಾಗಿ ಸಿಐಟಿಯು ರಾಜ್ಯಾಧ್ಯಕ್ಷೆ ಎಸ್.ವರಲಕ್ಷ್ಮಿ, ಪ್ರಧಾನ ಕಾರ್ಯದರ್ಶಿಯಾಗಿ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ.ಎಸ್.ಮೀನಾಕ್ಷಿಸುಂದರಂ, ಖಜಾಂಚಿಯಾಗಿ ಸಿಐಟಿಯು ರಾಜ್ಯ ಖಜಾಂಚಿ ಪಿ.ಕೆ.ಪರಮೇಶ್ವರ್ ಆಯ್ಕೆಯಾದರು.



ನಾದಬ್ರಹ್ಮನ ಆಗಮನದಿಂದ ಪುಳಕಿತಗೊಂಡ ಸಭಿಕರು

ಕನ್ನಡದ ಹೆಸರಾಂತ ಸಂಗೀತ ನಿರ್ದೇಶಕ ಹಂಸಲೇಖ ಸ್ವಾಗತ ಸಮಿತಿ ರಚನಾ ಸಭೆಯಲ್ಲಿ ಭಾಗವಹಿಸಿದ್ದು ಸಭೆಗೆ ಹೊಸ ಹುರುಪು ತಂದಿತ್ತು. 'ಲಿನ್ ನಿಂದ ಲಿನ್ ವರೆಗೆ' ಓದಿದ್ದೇನೆ, (ಚಾಪ್ಲಿನ್ ನಿಂದ ಲೆನಿನ್‌ವರೆಗೆ) ಬರೆದಿದ್ದೇನೆ, ಆದರೆ ಕಾರ್ಮಿಕರ ನಡುವೆ ನೇರವಾಗಿ ಭಾಗವಹಿಸಿದ್ದು ಇದೇ ಮೊದಲು, ಸಂಪತ್ತನ್ನು ಸೃಷ್ಟಿಸುವ ಕಾರ್ಮಿಕರ ಬದುಕು ಇಂದಿಗೂ ಯಾತನೆಯಲ್ಲಿರುವುದು ನೋವಿನ ಸಂಗತಿ' ಎಂದರು. ಸಮ್ಮೇಳನಕ್ಕೆ ಅಗತ್ಯ ಸಹಾಯ ಮಾಡುವುದಾಗಿ ಭರವಸೆ ನೀಡಿದರು. ಸ್ವಾಗತ ಸಮಿತಿಯ ಮಾರ್ಗದರ್ಶಕರಾಗಿ ಇರಲು ಸಮ್ಮತಿಸಿದರು.

ಕಾರ್ಮಿಕರ ಕೋಪ ಹೆಪ್ಪುಗಟ್ಟುತ್ತಿದೆ, ಅದು ಒಮ್ಮೆಲೆ ಸಿಡಿಯಲಿದೆ: ಡಾ.ಹೇಮಲತಾ

'ದೇಶದ ಆಳುವ ಸರ್ಕಾರಗಳ ಕಾರ್ಮಿಕ ವಿರೋಧಿ ಧೋರಣೆಗಳ ವಿರುದ್ಧ ಕಾರ್ಮಿಕ ವರ್ಗ ಭಾರಿ ಪ್ರತಿರೋಧ ತೋರುತ್ತಲೇ ಬಂದಿದೆ. ಅಖಿಲ ಭಾರತ ಮುಷ್ಕರಗಳ ಮೂಲಕ ಆಳುವ ವರ್ಗಕ್ಕೆ ಬಿಸಿ ಮುಟ್ಟಿಸುವ ಕೆಲಸ ಮಾಡುತ್ತಾ ಬಂದಿದೆ. ಕಾರ್ಮಿಕರ ವಿರೋಧದ ನಡುವೆಯೂ ಪ್ರಸ್ತುತ ಮೋದಿ ಸರ್ಕಾರ ಕಾರ್ಮಿಕ ಕಾಯ್ದೆಗಳನ್ನು ಸಂಹಿತೀಕರಣಗೊಳಿಸಿದೆ. ಇದು ದೇಶದ ಮೇಲೆ ಭಾರಿ ಅಪಾಯಗಳನ್ನು ತಂದೊಡ್ಡಲಿದೆ. ಹಾಗೆಯೇ ಅತೀವ ಶೋಷಣೆಗೊಳಗಾಗುತ್ತಿರುವ ಕಾರ್ಮಿಕ ವರ್ಗದ ಕೋಪ ಹೆಪ್ಪುಗಟ್ಟಿ ಒಮ್ಮೆಲೆ ಸ್ಫೋಟಗೊಳ್ಳಲಿದೆ. ಇದನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ' ಎಂದು ಸಿಐಟಿಯು ಅಖಿಲ ಭಾರತ ಅಧ್ಯಕ್ಷರಾದ ಡಾ. ಹೇಮಲತಾ ಹೇಳಿದರು.



'ಸಂವಿಧಾನ ವಿರೋಧಿ ಧರ್ಮ ರಾಜಕಾರಣ ಕಾರ್ಮಿಕ ವರ್ಗದ ಐಕ್ಯತೆಗೆ ಧಕ್ಕೆ ತಂದಿದೆ. ಜನರ ನೈಜ ಸಮಸ್ಯೆಗಳನ್ನು ಮರೆಮಾಚಿ ಭಾವನಾತ್ಮಕ ವಿಚಾರಗಳನ್ನು ಮುನ್ನೆಲೆಗೆ ತಂದಟಿದರ ಮರೆಯಲ್ಲಿ ದೇಶದ ಸಂಪತ್ತನ್ನು ಕಾರ್ಪೊರೇಟೀಕರಣ ಮಾಡಲಾಗುತ್ತಿದೆ. ಇಂತಹ ಸಂದಿಗ್ಧ ಕಾಲಘಟ್ಟದಲ್ಲಿ ನಡೆಯುತ್ತಿರುವ ಈ ಸಮ್ಮೇಳನಕ್ಕೆ ಅತ್ಯಂತ ಮಹತ್ವವಿದೆ' ಎಂದರು.

ಸಂವಿಧಾನ ಬುಡಮೇಲು ಮಾಡುವ ಹುನ್ನಾರ: ಎಸ್.ಜಿ. ಸಿದ್ದರಾಮಯ್ಯ



ರಾಜ್ಯದಲ್ಲಿ ನಡೆಯುತ್ತಿರುವ ಪಠ್ಯಪುಸ್ತಕ ಪರಿಷ್ಕರಣೆ, ಕಾರ್ಮಿಕ ಕಾನೂನುಗಳ ರದ್ದತಿ, ಸಿಎಎ ಜಾರಿ, ಇತ್ಯಾದಿ ವಿಚಾರಗಳು ಪ್ರತ್ಯೇಕವಾದವಲ್ಲ, ಇವುಗಳ ನಡುವೆ ಅಂತರ್ ಸಂಬಂಧವಿದೆ, ಸಂವಿಧಾನದ ಜಾಗದಲ್ಲಿ ಮನುಸ್ಮೃತಿಯನ್ನು ಪ್ರತಿಷ್ಠಾಪಿಸುವ ಬಿಜೆಪಿಯ ಗುಪ್ತ ಕಾರ್ಯಸೂಚಿಯ ಭಾಗವಾಗಿ ಇವೆಲ್ಲವೂ ನಡೆಯುತ್ತಿವೆ. ಆದ್ದರಿಂದ ಸಿಐಟಿಯು ಅಖಿಲ ಭಾರತ ಸಮ್ಮೇಳನವು ಇಂತಹ ಗಂಭೀರ ವಿಷಯಗಳ ಕುರಿತು ಚರ್ಚಿಸಿಸಬೇಕು ಎಂದು ಕವಿ, ಚಿಂತಕ ಎಸ್.ಜಿ. ಸಿದ್ದರಾಮಯ್ಯ ಹೇಳಿದರು.

ಹರಿದು ಬಂದ ಭರವಸೆಯ ಮಹಾಪೂರ

ಸಮ್ಮೇಳನವನ್ನು ಯಶಸ್ವಿಗೊಳಿಸಲು ವಿವಿಧ ಸಂಘಟನೆಗಳು, ಸಂಘಗಳು ನೆರವಿನ ಭರವಸೆಯನ್ನಿತ್ತಿವೆ. ಬಿಡದಿಯ ಟಯೋಟಾ ಕಾರ್ಮಿಕರು ಸ್ಥಳದಲ್ಲೇ ಒಂದೂವರೆ ಲಕ್ಷ ರೂಪಾಯಿ ನೀಡುವ ಮೂಲಕ ಸಮ್ಮೇಳನದ ಯಶಸ್ವಿಗೆ ದುಡಿಯುವ ಭರವಸೆ ನೀಡಿದರು. ಅನೇಕರು ಸ್ಥಳದಲ್ಲೇ ಸಹಾಯ ನೀಡಿದರು. ಸಮ್ಮೇಳನಕ್ಕೆ ಆಗುವ ಖರ್ಚುವೆಚ್ಚ ಹಾಗು ಸಮ್ಮೇಳನದ ತಯಾರಿ ಕೆಲಸಗಳಲ್ಲಿ ಭಾಗಿಯಾಗುವುದಾಗಿ ವಿವಿಧ ಕಾರ್ಮಿಕ ಸಂಘಟನೆಗಳ ಮುಖಂಡರು ಮಾತನಾಡಿ ಭರವಸೆ ನೀಡಿದರು.

ರಂಗಕರ್ಮಿ ಸಿ.ಬಸವಲಿಂಗಯ್ಯ, ಸಾಮಾಜಿಕ ಹೋರಾಟಗಾರ ಎಸ್.ಆರ್.ಹೀರೇಮಠ್, ಸಿಐಟಿಯು ಹಿರಿಯ ಮುಖಂಡ ವಿಜೆಕೆ ನಾಯರ್, ಹಿರಿಯ ಪತ್ರಕರ್ತೆ ಪೂರ್ಣಿಮಾ, ಬರಹಗಾರ್ತಿ ವಸುಂಧರಾ ಭೂಪತಿ, ವಿಜ್ಞಾನಿ ಡಾ.ಎಸ್.ಚಟರ್ಜಿ, ರೈತ ಮುಖಂಡ ಜಿ.ಸಿ.ಬಯ್ಯಾರೆಡ್ಡಿ, ಚಿಂತಕ ಜಿ.ಎನ್.ನಾಗರಾಜ್ ಹಾಗು ಇತರರು ಇದ್ದರು.

ಸಿಐಟಿಯು ರಾಜ್ಯ ಅಧ್ಯಕ್ಷೆ ಎಸ್. ವರಲಕ್ಷ್ಮಿ ಅಧ್ಯಕ್ಷತೆ ವಹಿಸಿದ್ದರು. ಸಿಐಟಿಯು ಪ್ರಧಾನ ಕಾರ್ಯದರ್ಶಿ ಎಂ.ಎಸ್.ಮೀನಾಕ್ಷಿ ಸುಂದರಂ ಪ್ರಾಸ್ತಾವಿಕವಾಗಿ ಮತನಾಡಿದರು. ರಾಜ್ಯ ಕಾರ್ಯದರ್ಶಿ ಕೆ.ಮಹಾಂತೇಶ್ ಕಾರ್ಯಕ್ರಮ ನಿರ್ವಹಿಸಿದರು. ಸಿಐಟಿಯು ಬೆಂಗಳೂರು ದಕ್ಷಿಣ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಎನ್. ಮಂಜುನಾಥ್ ಸ್ವಾಗತಿಸಿ, ಬೆಂಗಳೂರು ಉತ್ತರ ಸಮಿತಿಯ ಮುಖಂಡ ಮುನಿರಾಜು ವಂದಿಸಿದರು. ಕೆ.ಎಸ್.ಲಕ್ಷ್ಮಿ, ಸುನಂದ, ಲಿಂಗರಾಜು ಹಾಗು ಇತರರು ಹಾಡುಗಳನ್ನು ಹಾಡಿದರು.

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**